ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog : janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 52 ಡಿಸೆಂಬರ್ 25, 2011 ಪುಟ 16 ರೂ. 5/-

ಬೃಹತ್ ಬೆಂಗಳೂರಿನಲ್ಲಿ ದುಡಿಯುವ ಜನರ ಚಳುವಳಿ ಬಲಗೊಳಿಸಲು ನಿರ್ಧಾರ





ದಕ್ಷಿಣ ಕನ್ನಡ ಕೆಂಪಾದವೋ ಎಲ್ಲಾ ಕೆಂಪಾದವೋ....

ಬೀದಿ ಪ್ರತಿಭಟನೆ ಜನರ ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗ - ಸುಪ್ರೀಂ ಕೋರ್ಟ್



ಬಿಜೆಪಿ ಸರ್ಕಾರದ ಕನ್ನಡ ಕಾಳಜಿ !!



ಕನ್ನಡ ಶಾಲೆ ಮುಚ್ಚಬೇಡಿ ಎಂದವರ ಮೇಲೆ ಅನಾಗರೀಕ ಹಲ್ಲೆ



ಪರಿಣಾಮಕಾರಿ ಲೋಕಪಾಲ್ ಅಗತ್ಯ

ಬೀದಿ ಪ್ರತಿಭಟನೆಗಳು, ಹೋರಾಟ, ಬೀದಿಗಳಲ್ಲಿ ಅಣಿನೆರೆಯುವುದು ಜನರ ಅಭಿವ್ಯಕ್ತಿ ಸ್ವಾತಂತ್ರ್ಯದ ಅವಿಭಾಜ್ಯ ಭಾಗ ಮತ್ತು ಅಗತ್ಯವಿದ್ದಲ್ಲಿ ನ್ಯಾಯಾಂಗವನ್ನು ಟೀಕಿಸುವ ಹಕ್ಕುಕೂಡ ಜನತೆಗಿದೆ ಎಂದಿದೆ ಸುಪ್ರಿಂಕೋರ್ಟಿನ ತೀರ್ಪು... ಓದಿ ತೀರ್ಪಿನ ಸಾರ.

"ಬೀದಿ ಪ್ರತಿಭಟನೆ ಜನರ ಹಕ್ಕು-ನ್ಯಾಯಾಂಗ ಟೀಕಾತೀತವಲ್ಲ"

ಸುಪ್ರಿಂಕೋರ್ಟ್‌ನ ಮಹತ್ವದ ತೀರ್ಪು

ಎಂ.ಎ. ಬೇಬಿ

ಕೇರಳದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದ್ದ ಎಂ.ವಿ. ಜಯರಾಜನ್ ವಿರುದ್ಧದ ನ್ಯಾಯಾಂಗ ನಿಂದನೆ ಕುರಿತ ಹೈಕೋರ್ಟ್‌ನ ವಿಭಾಗೀಯ ಪೀಠದ ತೀರ್ಪು ರಾಜ್ಯಾದ್ಯಂತ ವ್ಯಾಪಕ ಪ್ರತಿರೋಧಕ್ಕೆ ಒಳಗಾಯಿತು. ತೀರ್ಪು ಹೊರಬೀಳುತ್ತಿದ್ದಂತೆ ವ್ಯಾಪಕ ಪ್ರತಿಭಟನೆಗಳು ನಡೆದವು.

ಕೇರಳ ರಾಜ್ಯ ಸಮಿತಿಯ ಸದಸ್ಯರಾಗಿದ್ದ ಜಯರಾಜನ್‌ಗೆ ಆರು ತಿಂಗಳ ಸೆರೆವಾಸ ಹಾಗೂ 2. ಸಾವಿರ ರೂಪಾಯಿಗಳ ದಂಡ ವಿಧಿಸಿ ವಿಭಾಗೀಯ ಪೀಠ ತೀರ್ಪು ನೀಡಿತ್ತು. ಜೂನ್, 26ರಂದು ನಡೆದ ಸಾರ್ವಜನಿಕ ಭಾಷಣದಲ್ಲಿ ನ್ಯಾಯಾಧೀಶರ ಕುರಿತಾದ ಅವಹೇಳನಕಾರಿ ಎನ್ನಲಾದ ಹೇಳಿಕೆ ಬಗ್ಗೆ ನಡೆದ ಸುದೀರ್ಘ ವಿಚಾರಣೆ ಬಳಿಕ ಈ ತೀರ್ಪು ನೀಡಲಾಗಿತ್ತು. ರಸ್ತೆಗಳಲ್ಲಿ ಸಭೆಗಳು, ಪ್ರತಿಭಟನೆಗಳನ್ನು ಮಾಡುವುದನ್ನು ನಿಷೇಧಿಸಿ ಹೈಕೋರ್ಟ್ ನೀಡಿದ ತೀರ್ಪನ್ನು ವಿರೋಧಿಸಿ ಜಯರಾಜನ್ ಅಂದು ಭಾಷಣ ಮಾಡಿದ್ದರು. ಹೈಕೋರ್ಟ್‌ನ ಈ ತೀರ್ಪಿನ ಬಗ್ಗೆ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಪರ ಚಳವಳಿಯ ಹಲವು ನಾಯಕರು ಆಕ್ಷೇಪಗಳನ್ನು, ವಿರೋಧವನ್ನು ವ್ಯಕ್ತಪಡಿಸಿದ್ದರು. ಇದೊಂದು ತಲೆಬುಡ ಇಲ್ಲದ ನಿರ್ಧಾರ, ಸುಧೀರ್ಘ ಹೋರಾಟದ ಬಳಿಕ ಪಡೆದ ಹಕ್ಕುಗಳನ್ನು ಕ್ಷುಲ್ಲಕ ಕಾರಣಗಳಿಗಾಗಿ ಮೊಟಕುಗೊಳಿಸಲಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ನ್ಯಾಯಾಂಗ ನಿಂದನೆ ಎಂದು ಹೇಳಲಾದ ಪ್ರಕರಣ ಹಾಗೂ ಜಯರಾಜನ್ ಅವರ ಮೇಲೆ ಹೇರಲಾದ ಶಿಕ್ಷೆಯನ್ನು ಅವಲೋಕಿಸಬೇಕಿದೆ.

ಏಕಿಂತಹ ಶಿಕ್ಷೆ

ಮೊದಲನೇದಾಗಿ, ಗಂಭೀರ ಪ್ರಮಾಣದ ಶಿಕ್ಷೆ ನೀಡುವ ತೀರ್ಪು ಪ್ರಕಟವಾಗುವ ಸಂದರ್ಭಗಳು ಬಲು ಅಪರೂಪ. ಎರಡನೇದಾಗಿ, ಇದುವರೆಗೆ ನ್ಯಾಯಾಂಗ ನಿಂದನೆ ಪ್ರಕರಣಗಳಲ್ಲಿ ಗಂಭೀರ ಪ್ರಮಾಣದ ಶಿಕ್ಷೆ ತೀರ್ಪು ಪ್ರಕಟವಾಗಿಯೇ ಇಲ್ಲ. ಸಾಮಾನ್ಯವಾಗಿ ಸರಳವಾದ ಶಿಕ್ಷೆಯನ್ನು ನೀಡಲಾಗುತ್ತಿದೆ. ಆದರೆ, ಈ ಪ್ರಕರಣಲ್ಲಿ ಕಠಿಣವಾದ ಶಿಕ್ಷೆಯನ್ನು ವಿಧಿಸಲಾಗಿದೆ. ಈ ಕುರಿತ ವಿಚಾರವನ್ನು ಮಾನ್ಯ ನ್ಯಾಯಾಧೀಶರ ಗಮನಕ್ಕೆ ತಂದಾಗ, ಈ ಪ್ರಮಾದವನ್ನು ಸರಿಪಡಿಸಿ ಈ ತೀರ್ಪು ಕಠಿಣ ಜೈಲುಶಿಕ್ಷೆಯಲ್ಲ ಎಂದು ಸ್ಪಷ್ಟಪಡಿಸಲಾಯಿತು.

ಮೂರನೇದಾಗಿ, ಈ ತೀರ್ಪನ್ನು ಪ್ರಶ್ನಿಸಿ ಉನ್ನತ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಅವಕಾಶವನ್ನು ನಿರಾಕರಿಸಲಾಗಿದೆ. ಕೇರಳ ಹೈಕೋರ್ಟ್‌ನ ಈ ನಿರ್ಧಾರ ನ್ಯಾಯದಾನದಲ್ಲಿನ ತಾರತಮ್ಯಕ್ಕೆ ಸಾಕ್ಷಿಯಾಗಿದೆ. ಮೂರು ವರ್ಷಕ್ಕಿಂತ ಕಡಿಮೆ ಶಿಕ್ಷೆ ಪ್ರಕಟವಾದ ಯಾವುದೇ ಪ್ರಕರಣದಲ್ಲೂ, ಉನ್ನತ ನ್ಯಾಯಾಲದಯಲ್ಲಿ ಮೇಲ್ಮನವಿ






ಸಲ್ಲಿಸಲು ಎರಡು ವಾರಗಳ ಅವಕಾಶವನ್ನು ಕೊಡಲಾಗುತ್ತದೆ. ಆದರೆ, ಸಿಪಿಎಂ ಮುಖಂಡ ನ್ಯಾಯಕ್ಕಾಗಿ ತಕ್ಷಣ ಮೇಲ್ಮನವಿ ಸಲ್ಲಿಸುವುದು ಕೇರಳ ಹೈಕೋರ್ಟ್‌ಗೆ ಇಷ್ಟವಿರಲಿಲ್ಲ. ಮೇಲ್ಮನವಿಗೂ ಮುನ್ನ ಜಯರಾಜನ್ ಅವರನ್ನು ದೈಹಿಕವಾಗಿ ಕಂಬಿಗಳ ಹಿಂದೆ ಹಾಕಬೇಕು ಎನ್ನುವ ಉದ್ದೇಶವನ್ನು ಈ ಪ್ರಕ್ರಿಯೆಯಲ್ಲಿ ನಾವು ನೋಡಬಹುದು. ಈ ಎಲ್ಲ ಬೆಳವಣಿಗೆಗಳು ದೇಶದ ಸಂವಿಧಾನಬದ್ಧ ಉನ್ನತ ಸ್ಥಾನವನ್ನು ಅಲಂಕರಿಸಿರುವ ನ್ಯಾಯಾಧೀಶರ ವರ್ತನೆಯನ್ನು ಜಗಜ್ಜಾಹೀರು ಪಡಿಸಿದೆ.

ಧಾರ್ಮಿಕ, ರಾಜಕೀಯ ಹಾಗೂ ಉತ್ಸವದ ಮಾದರಿಯ ಎಲ್ಲ ಆಚರಣೆಗಳನ್ನು ಜನಸಂದಣಿಯನ್ನು ರಸ್ತೆಯಲ್ಲಿ ಮಾಡದಂತೆ ನಿರ್ಬಂಧ ಹೇರಿ ಕೇರಳ ಹೈಕೋರ್ಟ್ ತೀರ್ಪು ಹೊರಡಿಸಿತ್ತು. ಇದು ವಿವಿಧ ಕ್ಷೇತ್ರಗಳು ಮತ್ತು ಸ್ತರಗಳ ಜನರಲ್ಲಿ ಅಸಮಾಧಾನದ ಅಭಿಪ್ರಾಯಕ್ಕೆ ಕಾರಣವಾಗಿತ್ತು. ಅದರಲ್ಲೂ ಪ್ರಜಾಸತ್ತಾತ್ಮಕ ಶಕ್ತಿಗಳು ಈ ತೀರ್ಪನ್ನು ಖಡಾಖಂಡಿತವಾಗಿ ವಿರೋಧಿಸುವಂತೆ ಮಾಡಿತ್ತು.

ಈ ತೀರ್ಪಿನ ಹಿನ್ನೆಲೆಯಲ್ಲಿ ಆಗಿನ ಎಲ್‌ಡಿಎಫ್ ಸರ್ಕಾರ ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಾಮಾಜಿಕ ಸಂಘಟನೆಗಳ ಜೊತೆ ಚರ್ಚೆ ನಡೆಸಿ ಸದನದಲ್ಲಿ ಈ ಬಗ್ಗೆ ಕಾನೂನನ್ನು ತರುವ ಪ್ರಯತ್ನ ನಡೆಸಿತ್ತು. ಇದರ ಫಲವಾಗಿ ಕೇರಳ ಸಾರ್ವಜನಿಕ ಹಾದಿ (ಸಭೆ ಹಾಗೂ ಮೆರವಣಿಗೆಗೆ ತಡೆ) ಕಾಯ್ದೆ 2011ನ್ನು ರೂಪಿಸಲಾಯಿತು. ಈ ಕಾಯ್ದೆಗೆ 2011ರ ಫೆಬ್ರವರಿ 18ರಂದು ರಾಜ್ಯಪಾಲರು ಅಂಕಿತವನ್ನೂ ಹಾಕಿದರು. ಅದು ಕಾನೂನಾಗಿ ಜಾರಿಗೆ ಬಂತು. ಆದರೆ, ಈ ಕಾಯ್ದೆಯನ್ನು ಹೈಕೋರ್ಟ್ ಪ್ರಶ್ನೆ ಮಾಡಿತು. ಮಾತ್ರವಲ್ಲ, ಈ ಕಾಯ್ದೆಯನ್ನು ಜಾರಿಗೊಳಿಸದಂತೆ ಸ್ತಂಭನಗೊಳಿಸಿತು.



ಸಿಪಿಎಂ ನಾಯಕ ಜಯರಾಜನ್ ಅವರಿಗೆ ಕೇರಳ ಹೈಕೋರ್ಟ್ ಅಸಮರ್ಥನೀಯ ಹಾಗೂ ಕಠಿಣ ಶಿಕ್ಷೆ ವಿಧಿಸಿದೆ. ಈ ಮೂಲಕ ನ್ಯಾಯಾಂಗ ನಿಂದನೆ ಮತ್ತು ಕೋರ್ಟ್ ತೀರ್ಪಿಗೆ ಮಧ್ಯಪ್ರವೇಶಕ್ಕೆ ಸಂಬಂಧಿಸಿದ ಹಲವು ಮಹತ್ವದ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಹಕ್ಕಿನ ನಿರ್ವಹಣೆ

ಈ ವಿಷಯಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶ ಮಾರ್ಕಾಂಡೇಯ ಕಾಟ್ಜು ಕೆಲವೊಂದು ಮಹತ್ವದ ಟಿಪ್ಪಣಿಗಳನ್ನು ಮಾಡಿದ್ದಾರೆ. ಹೀಗೆ ಟಿಪ್ಪಣಿಗಳನ್ನು ಮಾಡುವಾಗ ಮೊದಲಿಗೆ ಸಂವಿಧಾನದ ಪೀಠಿಕೆಯನ್ನು ಪ್ರಸ್ತಾಪಿಸಿದ್ದಾರೆ. "ಭಾರತದ ಪ್ರಜೆಗಳಾದ ನಾವು, ಸಂವಿಧಾನಿಕ ಭಾರತವನ್ನು ಸಾರ್ವಭೌಮ ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಒಕ್ಕೂಟವಾಗಿ ರೂಪಿಸಿದ್ದೇವೆ. ಈ ದೇಶದ ಎಲ್ಲ ನಾಗರಿಕರಿಗೆ ನ್ಯಾಯ, ಸಮಾಜಿಕ, ಆರ್ಥಿಕ ಹಾಗೂ ರಾಜಕೀಯ ಚಿಂತನಾ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ ಮತ್ತು ವಿಶ್ವಾಸ, ಪೂಜಿಸುವ, ಸಮಾನತೆ.... ಭ್ರಾತೃತ್ವ..." ಇತ್ಯಾದಿ.

ಮುಂದುವರಿದು, ಈ ಪದಗಳು ನಮ್ಮ ಸಂವಿಧಾನದ ಪ್ರಜಾಸತ್ತಾತ್ಮಕ ಪಾತ್ರ ಮತ್ತು ಗಣರಾಜ್ಯದ ಸ್ವರೂಪವನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳುತ್ತಾರೆ.

ಈ ಎಲ್ಲ ಪದಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ, ಭಾರತದ ಪ್ರಜೆಗಳು ನಿಜವಾದ ಅರ್ಥದಲ್ಲಿ ಪ್ರಭುಗಳು ಮತ್ತು ಭಾರತದ ಎಲ್ಲ ಅಧಿಕಾರದ ಕೇಂದ್ರಗಳು (ಕೋರ್ಟ್‌ಗಳೂ ಸೇರಿದಂತೆ) ಸೇವಕರು. ಹೀಗಾಗಿ, ಸೇವಕರು ಈ ಆಶಯಗಳಿಗೆ ವ್ಯತಿರಿಕ್ತವಾಗಿ ಕಾರ್ಯಾಚರಿಸದಿದ್ದರೆ ಹಾಗೂ ಸೂಕ್ತ ರೀತಿಯಲ್ಲಿ ವರ್ತನೆ ಮಾಡದಿದ್ದರೆ ಅದನ್ನು ಕೇಳುವ ಹಕ್ಕು ಪ್ರಭುಗಳಿಗೆ ಇದೆ. ಇದನ್ನೇ ಒಂದರ್ಥದಲ್ಲಿ ಹೇಳುವುದಾದರೆ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನ್ಯಾಯಾಧೀಶರನ್ನು ಟೀಕಿಸುವ ಹಕ್ಕು ಜನರಿಗೆ ಇದೆ ಎಂಬುದನ್ನು ಕಾಟ್ಜು ಒತ್ತಿ ಹೇಳುತ್ತಾರೆ.

ಸಂವಿಧಾನದ 19ನೇ ವಿಧಿ ಉಪವಿಧಿ 1(ಎ)ನಲ್ಲಿ ದೇಶದ ಎಲ್ಲ ನಾಗರಿಕರಿಗೆ ಮಾತನಾಡುವ ಹಾಗೂ ಅಭಿವ್ಯಕ್ತಿ ಸ್ವಾತಂತ್ರವ್ಯವನ್ನು ಮೂಲಭೂತ ಹಕ್ಕನ್ನಾಗಿ ನೀಡಲಾಗಿದೆ. ಆದರೆ, 129 ಮತ್ತು 215ರ ವಿಧಿಯ ಪ್ರಕಾರ ನ್ಯಾಯಾಂಗ ನಿಂದನೆಯ ಅಧಿಕಾರವನ್ನು ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿ ನೀಡಲಾಗಿದೆ. ಇದು ಈ ಹಿಂದೆ ಹೇಳಲಾದ ಸ್ವಾತಂತ್ರ್ಯವನ್ನು ಸೀಮಿತಗೊಳಿಸುತ್ತದೆ.

ಈ ಎರಡು ವಿಧಿಗಳನ್ನು ಹೇಗೆ ಸರಿದೂಗಿಸಿ, ಹೊಂದಿಸಿ

ಪುಟ 11ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಬರ: ಸರ್ಕಾರದ ನಿರ್ಲಕ್ಷ್ಯ

ಮಳೆಯ ತೀವ್ರ ಅಭಾವದಿಂದ ರಾಜ್ಯದ 84 ತಾಲೂಕುಗಳು ಬರದ ದವಡೆಗೆ ಸಿಲುಕಿವೆಯೆಂಬ ಕಟು ಸತ್ಯವನ್ನು ನಾಲ್ಕು ತಿಂಗಳ ನಂತರ ವಿಧಾನಸಭೆಯಲ್ಲಿ ನೆನಪಿಸಿಕೊಂಡ ಸರಕಾರದ ವರ್ತನೆಯೇ ವಿಚಿತ್ರವಾಗಿದೆ. ಬರ ಎದುರಿಸಲು ಹಣದ ಕೊರತೆಯಿಲ್ಲವೆಂದೂ 156 ಕೋಟಿ ಜಿಲ್ಲೆಗಳಲ್ಲಿದ್ದು ಅದನ್ನು ಬಳಸುವವರೇ ಇಲ್ಲವಾಗಿದೆಯೆಂಬ ಮುಖ್ಯಮಂತ್ರಿಗಳ ಹೇಳಿಕೆಯೂ ಹಾಸ್ಯಾಸ್ಪದವೇ ಆಗಿದೆ. ಬರಪೀಡಿತ ಜನರ ನೆರವಿಗೆ ಈ ಹಣವನ್ನು ಬಳಸದೇ ಮುಖ್ಯಮಂತ್ರಿಗಳು ಶಾಸಕರ ಮೇಲಷ್ಟೇ ದೂರುವುದು ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನ. ಜನಸಾಮಾನ್ಯರು ಕೃಷಿಕರು ಕೆಲಸವಿಲ್ಲದೇ ಗುಳೇ ಹೊರಟಿದ್ದಾರೆ .ಎಂಬುದನ್ನು ಒಪ್ಪಿಕೊಳ್ಳುವ ಸರ್ಕಾರ ಹಣವಿದ್ದೂ ಕಾಮಗಾರಿ ಆರಂಭಿಸದಿರುವುದು ಅದರ ಇಚ್ಛಾಶಕ್ತಿಯ ಕೊರತೆ ಹಾಗೂ ನಿಷ್ಕಾಳಜಿಯನ್ನೇ ತೋರಿಸುತ್ತದೆ. ಪರಿಸ್ಥಿತಿ ಹೀಗಿರುವಾಗ ಆ ಹಣವನ್ನು ಅಲ್ಲೇ ಕೊಳೆಯಲು ಯಾಕೆ ಬಿಡಬೇಕಿತ್ತು?

ಆದರೆ ವಾಸ್ತವದಲ್ಲಿ ಇವೆಲ್ಲವನ್ನೂ ಗಮನಿಸಿ ಕ್ರಮವಹಿಸುವ ಒಂದು ಸರ್ಕಾರವೇ ಇಲ್ಲವಾಗಿರುವುದು, ಇಲ್ಲಿ ಎದ್ದು ಕಾಣುವ ಅಂಶ ಮುಖ್ಯಮಂತ್ರಿಯನ್ನೂ ಒಳಗೊಂಡು ಯಾವೊಬ್ಬ ಸಚಿವ ವಿಧಾನ ಸಭೆಯಲ್ಲಿ ಕುಳಿತು ಆಡಳಿತ ನಡೆಸುವ ಗೋಜಿಗೇ ಹೋಗುತ್ತಿಲ್ಲ. ಹಗರಣ-ಅಕ್ರಮಗಳನ್ನು ಮುಚ್ಚಿಕೊಳ್ಳುವ ಇವರ ವರಸೆಗಳು, ಅಧಿಕಾರ ಉಳಿಸಿಕೊಳ್ಳುವ ಹೆಣಗಾಟ, ಕಿತ್ತಾಟಗಳಲ್ಲೇ ಮಗ್ನವಾಗಿರುವ ಇಡೀ ಬಿಜೆಪಿ ಪಕ್ಷ ಹಾಗೂ ಸಚಿವ ಸಂಪುಟ, ಶಾಸಕರು ಜನರ ಬವಣೆಗಳತ್ತ ಗಮನಹರಿಸಲು ಸಮಯವಾದರೂ ಎಲ್ಲಿದೆ? ಇದು ಅಕ್ಷಮ್ಯ.

ದಕ್ಷ, ಜನಪರ ಆಡಳಿತ ಕೊಡುವುದಾಗಿ ಹೇಳಿಕೊಳ್ಳುತ್ತಾ ಬಂದ ಮುಖ್ಯಮಂತ್ರಿ ಸದಾನಂದ ಗೌಡರಿಗೆ ಬರದ ಕಾಮಗಾರಿ ಆರಂಭಿಸಿ ಜನರು, ಜಾನುವಾರು ರಕ್ಷಿಸಲು ಮಾಡಿದ್ದಾದರೂ ಏನು ಎಂದು ಪ್ರಶ್ನಿಸಬೇಕಾಗುತ್ತದೆ. ಅಷ್ಟು ನಿಜಕ್ಕೂ ಕಾಳಜಿ ಇದ್ದರೆ ಇಡೀ ಸಚಿವ ಸಂಪುಟವನ್ನು, ಅದಕ್ಕನುಗುಣವಾಗಿ ಆಡಳಿತವನ್ನು ಎಚ್ಚರಗೊಳಿಸಿ ಕಾರ್ಯೋನ್ಮುಖರಾಗಬಹುದಿತ್ತು. ಇಂತಹ ಕನಿಷ್ಠ ಪರಿಹಾರಾತ್ಮಕ ಕ್ರಮವಹಿಸದೇ ಇನ್ನೊಬ್ಬರ ಹೆಗಲಿಗೆ ಪೂರ್ಣ ಹೊಣೆ ವರ್ಗಾಯಿಸುವುದು ನಾಚಿಕೆಗೇಡಿನ ಸಂಗತಿಯಾಗಿದೆ.


ಬರಪೀಡಿತ 23 ಜಿಲ್ಲೆಗಳಲ್ಲಿ 20 ಕ್ಕೆ ಖುದ್ದಾಗಿ ಭೇಟಿ ನೀಡಿದ ಬಗ್ಗೆ ಮುಖ್ಯಮಂತ್ರಿ ಸದಾನಂದಗೌಡರು ಹೇಳಿದ್ದಾರೆ. ಆದರೆ ಅದರ ಫಲಿತಾಂಶವಾದರೂ ಏನು? ಸರ್ಕಾರದ ಅಂದಾಜಿನಂತೆಯೇ ಮಳೆ ಕೊರತೆಯಿಂದ 22-56 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿನ ಬೆಳೆ ಹಾನಿಯಾಗಿದೆ. ಪರಿಣಾಮ ಜನ-ಜಾನುವಾರುಗಳಿಗೆ ಮೇವು, ನೀರಿನ ಕೊರತೆ ಕಟ್ಟಿಟ್ಟ ಬುತ್ತಿ. ಸರ್ಕಾರ ಅಂದಾಜಿಸಿರುವಂತೆ ಹಾನಿಯ ಮೌಲ್ಯ 4544ಕೋಟಿ ರೂಪಾಯಿಗಳು. ಇದರ ಎದುರಿನಲ್ಲಿ ರಾಜ್ಯ ಸರಕಾರವೇ ಮೀಸಲಿಟ್ಟ 156 ಕೋಟಿ ರೂಪಾಯಿಗಳಿಂದ ಸಮಸ್ಯೆಯನ್ನು ಎದುರಿಸಲು ಅಸಾಧ್ಯವೇ ಸರಿ. ಈ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇನ್ನಷ್ಟು ಹಣವನ್ನು ಬಿಡುಗಡೆ ಮಾಡಿ ತನ್ನ ಪಾಲಿನ ಕೆಲಸವನ್ನು ಆರಂಭಿಸಲಿ. ಬದಲಾಗಿ ಕೇವಲ ಕೇಂದ್ರ ಸರ್ಕಾರವನ್ನಷ್ಟೇ ಕೋರುತ್ತಾ, ದೂಷಿಸುತ್ತಾ ಕೂಡುವುದು ಜನರ ಪಾಲಿಗೆ ನಿಷ್ಪ್ರಯೋಜಕ. ಹಾಗೆಯೇ ಕೇಂದ್ರ ಸರ್ಕಾರವೂ ಸಹ ಕ್ಷಿಪ್ರವಾಗಿ ತೀರ್ಮಾನ ಕೈಗೊಂಡು ಜನರ ನೆರವಿಗೆ ಧಾವಿಸಬೇಕು. ಇದೇ ಹೊತ್ತಿನಲ್ಲಿ ಬರದ ಕಾಮಗಾರಿಗೆ ಸೂಕ್ತವಾದ ಯೋಜನೆ ರೂಪಿಸಬೇಕು; ಹಣವನ್ನು ಪಾರದರ್ಶಕವಾಗಿ,ಪರಿಣಾಮಕಾರಿಯಾಗಿ ಬಳಸುವಂತಾಗಬೇಕು. ಹಿಂದಿನ ಅನುಭವಗಳಂತೆ ಬರವೂ ಕೂಡ ಆಳುವ ಪಕ್ಷದವರಿಗೆ, ಆಡಳಿತಕ್ಕೆ, ಭೂಮಾಲೀಕರಿಗೆ ವರವಾಗಬಾರದು.

ಈಗ ವಿಧಾನಸಭೆಯಲ್ಲಿ ಚರ್ಚೆಯಾದ ಬಳಿಕ ಅಧ್ಯಯನ ತಂಡಗಳು ಅಲ್ಲಲ್ಲಿ ಭೇಟಿ ನೀಡಿ ಹಾನಿ ಅಂದಾಜಿಸುತ್ತಿವೆ. ಇದೂ ಒಂದು ಕಾಲಹರಣವಾಗದಂತೆ ಎಚ್ಚರ ಅಗತ್ಯ

ಚಳಿಗಾಲ ಕಳೆದಂತೆ ಬಂದ ಬಾದೆಯೂ ಹೆಚ್ಚಲಿದೆ. ಈಗಾಗಲೇ ರಾಜ್ಯದ ಜನತೆ ವಿಪರೀತ ಬೆಲೆ ಏರಿಕೆ , ದುಡಿಮೆ ಹಾನಿ, ಉದ್ಯೋಗಹೀನತೆಯಿಂದ ತತ್ತರಿಸುತ್ತಿದ್ದಾರೆ. ಆರ್ಥಿಕ ವಾರ್ಷಿಕ ಬಿಕ್ಕಟ್ಟು ತೀವ್ರವಾಗಿ ಭಾದಿಸುತ್ತಿದೆ. ಇಂತಹ ಹಿನ್ನೆಲೆಯಲ್ಲೇ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ ನಡೆಸಿ ರಾಜ್ಯದ ಕೃಷಿಯನ್ನು ಕಾರ್ಪೊರೇಟ್ ಕಂಪನಿ-ಬಂಡವಾಳಗಾರರಿಗೆ ಒಪ್ಪಿಸಲು ಬಿಜೆಪಿ ಸರಕಾರ ಮುಂದಾಗಿದೆ. ಕೃಷಿಗೆ ಉರುಳು ಹಾಕಿ ಕಾದಿದೆ. ಸರ್ಕಾರದ ನಿರ್ಲಕ್ಷ್ಯದ ಕ್ರಮಗಳೂ ಒಕ್ಕಲೆಬ್ಬಿಸುವಂತಾಗದು ಎಂದು ಹೇಳಲಾಗದು. ಇವರಿಗೂ ಬರ ವರವಾಗದಂತೆ

ಪರಿಷತ್ ಚುನಾವಣೆ: ಯುದ್ಧ ಬಿಜೆಪಿಯೊಳಗೇ..

ಸದಾ ಆನಂದದಿಂದ ಇರುತ್ತಿದ್ದ ಗೌಡರ ಮನದಲ್ಲೀಗ ತಲ್ಲಣ-ತಳಮಳ. ಸುಖವೋ-ದುಃಖವೋ, ಸಾವು-ಸಂಕಟವೋ ಸದಾನಗುತ್ತಿದ್ದಲೇ ಕಾಲನೂಕುತ್ತಿದ್ದ ಅವರ ಮುಖದಲ್ಲಿ ಕೋಪಾಗ್ನಿ ಕಾಣಿಸಿಕೊಂಡಿತಂತೆ. 'ನನಗಿಲ್ಲದಿದ್ದರೂ ನನ್ನ ಮುಖ್ಯಮಂತ್ರಿ ಸ್ಥಾನಕ್ಕಾದರೂ ಗೌರವ ಕೊಡಿ ಎಂದು ಅಂಗಲಾಚಿದರಂತೆ. ಅವರಲ್ಲಿ ಮಾತು ಗಟ್ಟಿರುವ ಹತಾಶೆಯ ವಿಧಾನಸಬಾ ಕಲಾಪದ ವೇಳೆ ಕೋಪವಾಗಿ ಸಿಡಿಯಿತೆಂದು ಕಂಡವರು ಹೇಲುತ್ತಾರೆ. ಮುಖ್ಯಮಂತ್ರಿಯಾಗಿ ನೂರಾರು ದಿನಗಳ ಬಳಿಕ ನಿಧಾನವಾಗಿ ವಿಧಾನಸಭೆ ಕಳೆದ ಅವರಲ್ಲಿ ಯಾಕಿಷ್ಟು-ಕೋಪ-ತಾಪ?!



ಶಾಸಕನಾಗಿರದಿದ್ದರೂ ಆರು ತಿಂಗಳವರೆಗೂ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಮುಂದುವರಿಯಲು ಸದಾನಂದ ಗೌಡರಿಗೆ ಅವಕಾಶವಂತೂ ಇದ್ದೇ ಇದೆ. ಮೂರು ತಿಂಗಳು ಕಳೆದಿದೆ, ಮೊದಲ ಅಧಿವೇಶನ ಆರಂಭಗೊಂಡಿದೆ. ಆದರೆ ಮುಗಿಯುವುದರೊಳಗೇ ಮಾಜಿಯಾಗಿ ಬಿಟ್ಟರೆ? ಇದು ಹಾಲಿ ಮುಖ್ಯ ಮಂತ್ರಿಗಳನ್ನೂ ಕಾಡುತ್ತಿರುವ ಪ್ರಶ್ನೆ!

'ಇನ್ನೂ ಆರು ತಿಂಗಳೊಳಗೆ ನಾನು ಮತ್ತೇ ಮುಖ್ಯಮಂತ್ರಿಯಾಗಿ ಬರ್ತೀನೀ' ಎಂದು ಲೋಕಾಯುಕ್ತವಾದಿ ಅನುಸರಿಸುವ ಮೊಕದ್ದಮೆಯಲ್ಲಿ ಸಿಕ್ಕಿ ಬಿದ್ದಿದ್ದ ಯಡಿಯೂರಪ್ಪ ರಾಜೀನಾಮೆ ಕೊಟ್ಟ ಮರು ಕ್ಷಣವೇ ಹೇಳಿರಲಿಲ್ಲವೇ?. ಆ ಅಜೆಂಡಾವನ್ನೇ ಹಿಡಿದು ಈಗ ಯಡಿಯೂರಪ್ಪ ದೆಹಲಿ ದಂಡೆ ಯಾತ್ರೆ ಆರಂಭಿಸಿದ್ದಾರೆ. ಸದ್ಯದ ಸ್ಥಿತಿಯಲ್ಲಿ ವಿಧಾನಸಭೆಗಿಂತ ವಿಧಾನಪರಿಷತ್ತೇ ಸೇಫ್ ಎಂದೇ ಬಣಿಸಿರುವ ಸದಾನಂದಗೌಡರು ಒಬ್ಬರನ್ನು ಖಾಲಿ ಮಾಡಿಸಿ ಅಭ್ಯರ್ಥಿಯಾಗಿ ಕನಕ್ಕೆ ಇಳಿದಿದ್ದಾರೆ. ಅವರು ಗೆಲ್ಲಬೇಕೆಂದರೆ ಬಿಜೆಪಿ ಒಗ್ಗಟ್ಟಿನಿಂದ ಶಾಸಕರೆಲ್ಲ ಮತ ಚಲಾಯಿಸಬೇಕು. ಆದರೆ ಬಿಜೆಪಿ ಈಗ ಮುರಿದು ಮೂರಾಬಟ್ಟೆ, ಅನಂತಕುಮಾರ್-ಶೆಟ್ಟರ್ ಬಣ ಒಂದೆಡೆ, ಯಡ್ಡಿ ಬಣ ಮತ್ತೊಂದೆಡೆ, ರೆಡ್ಡಿ ಬಣ ಮಗದೊಂದು ಕತೆ...... ಯಾರು, ಯಾವಾಗ, ಎಲ್ಲಿಗೆ ಹಾಕುವರೇ ಬಲ್ಲವರ್ಯಾರು?. ಇಂತಹ ಅವಘಡಗಳನ್ನು ಅಂದಾಜಿಸಿಯೇ ಗೌಡರು ಇನ್ನೂ ತಮ್ಮ ಸಂಸದ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿಲ್ಲ.

ಸದಾನಂದಗೌಡರನ್ನು ಯಡಿಯೂರಪ್ಪನವರು ಪೂರ್ಣವಾಗಿ ತಮ್ಮ ಗುಂಪಿನವರೇ ಎಂದು ನಂಬಿ ಕೂತಿಲ್ಲ. ಈಗ ಸಾಕಷ್ಟು ಅಭಿಪ್ರಾಯ-ಅಂತರಗಳು ಬಂದಿವೆ. ಹಾಗಾಗಿಯೇ ನಡು ನಡುವೆ ಯಡಿಯೂರಪ್ಪ ಗುಟುರು ಹಾಕುತ್ತಾ ಬಂದಿದ್ದು, ಒಳ ಒಪ್ಪಂದ ಆಗಿದ್ದು, ಅದರಂತೆ ಲೋಕಾಯುಕ್ತರ ನೇಮಕ, ವರದಿಯನ್ನು ಮಾತಿಗೆ ಸೇರಿಸುವ ರಮ, ಪೋಲಿಸ್ ಅಧಿಕಾರಿಗಳ ನೇಮಕಗಳಲ್ಲಿ ಯಡ್ಡಿಯ ಇಚ್ಛೆಗೆ ಅನುಗುಣವಾಗಿಯೇ ಕ್ರಮ ಅನುಸರಿಸಲಾಗುತ್ತಿದೆ. ಮೇಲಾಗಿ ಈಗ ನ್ಯಾಯಾಲಯದಿಂದಲೇ ಜಾಮೀನು ಪಡೆದು ಆರೋಪಿ ಅಪರಾಧಿಯಲ್ಲ' ಎಂಬಂತಹ ವಿನೂತನ ವ್ಯಾಖ್ಯಾನವನ್ನು ನ್ಯಾಯ ಮೂರ್ತಿಗಳೇ ಹೇಳಿರುವಾಗ ಯಡಿಯೂರಪ್ಪ ತೀರ್ಪು ಬರುವ ಮೊದಲೇ ಕಳಂಕ ಮುಕ್ತ, ನೆಂದೇ ಭಾವಿಸಿದ್ದಾರೆ. ಎಲ್ಲಾ ಸಂವೇದನೆ ಕಳೆದುಕೊಂಡು, ಸಂವಿಧಾನ ನೈತಿಕತೆ ನೀಡಿ ನಿಯಮಗಳನ್ನು ಗಾಳಿಗೆ ತೂರಿರುವ ಅವರು ಮುಖ್ಯಮಂತ್ರಿಯಾಗಲು ಸರ್ವ ಅರ್ಹತೆಯೂ ಇದೆಯೆಂದೇ ದೆಹಲಿ ನಾಯಕರನ್ನು ಬೆದರಿಸುತ್ತಿದ್ದಾರೆ. ಸಿ.ಎಂ. ಮಾಡಿ ಇಲ್ಲವೇ ಪಕ್ಷದ ರಾಜ್ಯಾಧ್ಯಕ್ಷನನ್ನಾದರೂ ಆಗಿಸಿ, ಎಂದು ತಾಕೀತು ಮಾಡಿದ್ದಾನೆ.

ಇದನ್ನೂ ಒಪ್ಪದಿದ್ದರೆ 'ಆಪರೇಷನ್ ಕಮಲ' ನಿಶ್ಚಿತವೆಂಬ ಬೆದರಿಕೆಯೂ ಒಟ್ಟಿಗೇ ರವಾನಿಸುತ್ತಿದ್ದಾರೆ. ಎಂತ ದುಸ್ಥಿತಿ ನೋಡಿ! ಶಿಸ್ತಿನ, ಸಮರ್ಪಣೆಯ ರಾಷ್ಟ್ರೀಯ ಪಕ್ಷವೆಂದೆಲ್ಲಾ ಬೊಗಳೆ ಹೊಡೆಯುವ ಬಿಜೆಪಿಯಲೀಗ ಬಾಲವೇ ನಾಯಿಯ ದೇಹವನ್ನು ಅಲ್ಲಾಡಿಸತೊಡಗಿದೆ. ಹೈಕಮಾಂಡ್‌ಗೆ ಆದೇಶ ಕೊಡುತ್ತಿರುವ ಯಡಿಯೂರಪ್ಪನನ್ನು ಪೂಸಿ ಹೊಡೆದು ಸಂತೈಸಲು ರಾಷ್ಟ್ರಾಧ್ಯಕ್ಷ ಗಡ್ಕರಿ, ವಿರೋಧ

ಪುಟ 12ಕ್ಕೆ

ಕಾರ್ಟೂನ್ ಕಾರ್ನರ್



ಜನಶಕ್ತಿ
ಕನ್ನಡ ವಾರಪತ್ರಿಕೆ


ಸಿಪಿಐ(ಎಂ) 3ನೇ ಆನೇಕಲ್ ತಾಲ್ಲೂಕು ಸಮ್ಮೇಳನ

ಕಾರ್ಮಿಕ ಹಕ್ಕುಗಳ ಮೇಲೆ ದಾಳಿಗೆ ಖಂಡನೆ ಭೂಸ್ವಾಧೀನಕ್ಕೆ ಪ್ರತಿರೋಧದ ತೀರ್ಮಾನ

ಬೆಲೆ ಏರಿಕೆ ಭ್ರಷ್ಟಾಚಾರ ವಿರೋಧಿಸಿ, ಎಲ್ಲಾ ಬಡವರಿಗೆ ನಿವೇಶನ ರೇಷನ್ ಕಾರ್ಡ್‌ಗಾಗಿ, ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿಗಾಗಿ, ಎಲ್ಲಾ ಕಾರ್ಮಿಕರಿಗೆ ರೂ.10,000/- ಸಮಾನ ಕನಿಷ್ಟ ವೇತನಕ್ಕಾಗಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) 3ನೇ ಆನೇಕಲ್ ತಾಲ್ಲೂಕು ಸಮ್ಮೇಳನವು ನವೆಂಬರ್ 12, 13, 2011ರಂದು ಇರಡು ದಿನಗಳ ಕಾಲ ಆನೇಕಲ್ ಪಟ್ಟಣದ ಸ್ವರ್ಣಭವನದಲ್ಲಿ ನಡೆಯಿತು.

ಸಮ್ಮೇಳನವನ್ನು ಉದ್ಘಾಟಿಸಿ ಸಿ.ಪಿ.ಐ. (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಜನಶಕ್ತಿ ಪತ್ರಿಕೆ ಸಂಪಾದಕರಾದ, ಎಸ್.ವೈ.ಗುರುಶಾಂತ್ ಮಾತನಾಡಿದರು.

ನಂತರ ಸಿ.ಪಿ.ಐ. (ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ ಮಾತನಾಡಿ ತಾಲ್ಲೂಕಿನಲ್ಲಿ ಕಾರ್ಮಿಕರ ಸಂಘ ಕಟ್ಟಿಕೊಳ್ಳುವ ಹಕ್ಕಿನ ಮೇಲಿ ನಿರಂತರ ದಾಳಿ ನಡೆಯುತ್ತಿದೆ. ರಾಜ್ಯ ಬಿ.ಜೆ.ಪಿ. ಸರ್ಕಾರ ಮಾಲೀಕರ ಪರ ನಿಂತಿದೆ. ಕಾರ್ಮಿಕ ಕಾನೂನುಗಳು ಜಾರಿಯಾಗುತ್ತಿಲ್ಲ. ತಾಲ್ಲೂಕಿನಲ್ಲಿ ಕೃಷಿ ಅವಲಂಬನೆ ಕಡಿಮೆಯಾಗುತ್ತಿರುವುದರಿಂದ ನಿರುದ್ಯೋಗಿಗಳ ಸಂಬಳ ಹೆಚ್ಚುತ್ತಿದೆ. ಇಲ್ಲಿಯ ರಾಜಕೀಯ ಪಕ್ಷಗಳು, ಭೂಗಳ್ಳರು ಯುವಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ತಾಲ್ಲೂಕಿನಲ್ಲಿ ಶೇ 28% ರಷ್ಟು ದಲಿತ ವಿಭಾಗವಿದ್ದು ಜಾತಿ ಅಸ್ಪ್ರಶ್ಯತೆ ಆಚರಣೆ ಇನ್ನೂ ಇದೆ. ಪಕ್ಷ ಈ ವಿಚಾರಗಳ ಬಗ್ಗೆ ಹೋರಾಟ ರೂಪಿಸುತ್ತಿದೆ. ತಾಲ್ಲೂಕಿನ ಎಲ್ಲಾ ಪ್ರಜ್ಞಾವಂತ



ಜನರು, ರೈತರು, ಕಾರ್ಮಿಕರು ಮತ್ತು ಮಹಿಳೆಯರು ಸಿ.ಪಿ.ಐ. (ಎಂ) ಪಕ್ಷದ ಹೋರಾಟಕ್ಕೆ ಕೈ ಜೋಡಿಸಿ ಬಲಪಡಿಸಬೇಕೆಂದು ಮನವಿ ಮಾಡಿದರು.

ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಸಿ.ಪಿ.ಐ. (ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ತಾಲ್ಲೂಕಿನಲ್ಲಿ ಪಕ್ಷದ ಮುತುವರ್ಜಿಯಿಂದ ಪ್ರದೇಶದಲ್ಲಿ ಸರ್ಕಾರ ಮಾಡಿಕೊಳ್ಳುತ್ತಿರುವ ಭೂ ಸ್ವಾಧೀನ ಪ್ರಶ್ನೆಯನ್ನು ಕೈಗೆತ್ತಿಕೊಂಡು ಹಲವಾರು ಹೋರಾಟಗಳನ್ನು ನಡಿದಿದೆ. 40-50 ವರ್ಷಗಳಿಂದ ತಾಲ್ಲೂಕಿನ ಸುಮಾರು 10 ಸಾವಿರ ಎಕರೆ ಪ್ರದೇಶದಲ್ಲಿ ಸಾಗುವಳಿ ಮಾಡುತ್ತಿರುವ ಬಗರ್ ಹುಕ್ಕುಂ ಸಾಗುವದಾರರಿಗೆ ಸಾಗುವಳಿ ಚೀಟಿ ನೀಡದೇ ಭೂಮಿ ಕಿತ್ತುಕೊಂಡು ಭೂಗಳ್ಳರಿಗೆ ಬಂಡವಾಳದಾರರಿಗೆ ನೀಡಲು ಪ್ರಯತ್ನಿಸುತ್ತಿದೆ. ಈ ಕ್ಷೇತ್ರ ಜನ ಪ್ರತಿನಿಧಿಗಳಿಗೆ ಈ ಬಗ್ಗೆ ಕಾಳಜಿಯಿಲ್ಲ. ಪಕ್ಷವು ಈ ವಿಚಾರಗಳ ಬಗ್ಗೆ ಹೋರಾಟ ನಡೆಸುತ್ತಿದೆ. ತಾಲ್ಲೂಕಿನಲ್ಲಿರುವ ಭೂಮಿ ಪ್ರಶ್ನೆ, ಸಾಮಾಜಿಕ ನಾಗರೀಕ ಪ್ರಶ್ನೆಗಳ ಕುರಿತು ಇಲ್ಲಿಯ ಸಮಿತಿಯು ವ್ಯಾಪಕವಾಗಿ ಹೋರಾಟ ರೂಪಿಸಬೇಕು. ಆ ಮುಖಾಂತರ ಪಕ್ಷದ ಚಳುವಳಿಯನ್ನು ತಾಲ್ಲೂಕಿನಲ್ಲಿ ಬಲಪಡಿಸಬೇಕೆಂದು ಕರೆ ನೀಡಿದರು.

ಸಮ್ಮೇಳನದಲ್ಲಿ ತಾಲ್ಲೂಕಿನ ರಾಜಕೀಯ - ಸಂಘಟನಾ ವರದಿ ಕುರಿತು ಚರ್ಚೆಯಲ್ಲಿ 15 ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಶಿಕ್ಷಣ ವ್ಯಾಪಾರೀಕರಣ, ಭ್ರಷ್ಟಾಚಾರ ವಿರುದ್ಧ, ರೇಷನ್ ಕಾರ್ಡ್ ನಿವೇಶನಕ್ಕಾಗಿ ಬಗರ್ ಹುಕ್ಕುಂ ಸಾಗುವಳಿದಾರರಿಗೆ ಸಾಗುವಳಿ ಚೀಟಿಗಾಗಿ, ತಾಲ್ಲೂಕಿನಲ್ಲಿರುವ ಅಸ್ಪ್ರುಶ್ಯತೆ ನಿವಾರಣೆಗಾಗಿ, ಮನೆ ಬಾಡಿಗೆ ಹೆಚ್ಚಳದ ನಿಯಂತ್ರಣಕ್ಕಾಗಿ, ಅಸಂಘಟಿತ ಕಾರ್ಮಿಕರಿಗೆ ಸಮಾನ ಕನಿಷ್ಟ ವೇತನಕ್ಕಾಗಿ ತಾಲ್ಲೂಕಿನ ಜನತೆಗೆ ಶುದ್ಧ ಕುಡಿಯುವ ನೀರಿಗಾಗಿ ಮುಂದೆ ಹೋರಾಟ ರೂಪಿಸಲು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಸಮ್ಮೇಳನದಲ್ಲಿ ಸಿ.ಪಿ.ಐ. (ಎಂ) ಪಕ್ಷದ 11 ಜನರ ನೂತನ ತಾಲ್ಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು. ತಾ!! ಕಾರ್ಯದರ್ಶಿಯಾಗಿ ಬಿ.ಎನ್.ಮಂಜುನಾಥ್, ಸದಸ್ಯರಾಗಿ, ಹೆಚ್.ಎನ್.ಶಿವರಾಮರೆಡ್ಡಿ, ಡಿ.ಮಹದೇಶ್, ಸುಬ್ಬಲಕ್ಷ್ಮಮ್ಮ, ಅಶೋಕಕುಮಾರ್, ಎನ್.ಮೋಹನ್, ಅರ್.ರಾಮಕೃಷ್ಣ, ಎ.ಬಾಲರಾಜ್, ಶಿವಾನಂದ, ಸುರೇಶ್‌ಬಾಬು, ಸಿದ್ದಲಿಂಗಪ್ಪ ಆಯ್ಕೆಯಾದರು.

ಸಮ್ಮೇಳನದ ಧ್ವಜಾರೋಹಣವನ್ನು ಸಿ.ಪಿ.ಐ. (ಎಂ) ಪಕ್ಷದ ತಾಲ್ಲೂಕಿನ ಹಿರಿಯ ಮುಖಂಡರಾದ ಶಿವರಾಮರೆಡ್ಡಿರವರು ನೆರವೇರಿಸಿದರು.

ಸಿಪಿಐ(ಎಂ) ಶಿವಮೊಗ್ಗ ಜಿಲ್ಲಾ ಸಮ್ಮೇಳನದಲ್ಲಿ ಟೀಕೆ

ಉಕ್ಕಿನ ಕಾರ್ಖಾನೆ ಕಾಗದದ ಕಾರ್ಖಾನೆಗಳನ್ನು ಕೊಲ್ಲಲಾಗುತ್ತಿದೆ

ಶಿವಮೊಗ್ಗ ಜಿಲ್ಲೆಯ ಹಿಂದಿನಿಂದಲೂ ಸಮಾಜವಾದಿಗಳ ಜಿಲ್ಲೆಯಾಗಿತ್ತು. ಇಂದು ಕೋಮುವಾದಿಗಳ ಪ್ರಾಬಲ್ಯದ ಜಿಲ್ಲೆಯಾಗಿ ಮಾರ್ಪಟ್ಟಿದೆ. ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲಿ ಬಿ.ಜೆ.ಪಿ. 5 ನ್ನು ತೆಕ್ಕೆಗೆ ಪಡೆದಿದೆ. ಜಿಲ್ಲಾ ಪಂಚಾಯಿತಿ ಕೂಡ ಬಿ.ಜೆ.ಪಿ. ಪಾಲಾಗಿದೆ. ಬಿ.ಜೆ.ಪಿ. ಅನೈತಿಕ ನೀತಿಗಳಿಂದಾಗಿ ಇತ್ತೀಚೆಗೆ ನಡೆದ ಲೋಕಸಭೆ, ಮತ್ತು ತಾಲ್ಲೂಕ್ ಪಂಚಾಯಿತಿಗಳಲ್ಲಿ ಗಣನೀಯವಾಗಿ ಮತಗಳು ಇಳಿ ಮುಖವಾಗುತ್ತಿರುವುದನ್ನು ನಾವು ನೋಡ ಬಹುದು. ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಶಿಕಾರಿಪುರ ಮತ್ತು ಹೊಸನಗರ ಹೊರತು ಪಡಿಸಿ ಇನ್ಯಾವುದೇ ತಾಲ್ಲೂಕುಗಳಲ್ಲಿ ಬಹುಮತ ಪಡೆಯಲಿಕ್ಕೆ ಸಾಧ್ಯವಾಗಿಲ್ಲ. ಅದು ಮತಗಳಿಕೆಗಾಗಿ ಎಷ್ಟೇ ಹಣ, ಹೆಂಡ, ಇತ್ಯಾದಿ ಹಂಚಿದರು.

ಸೊರಬ ಎಂ.ಎಲ್.ಎ. ಕೂಡ ಲೈಂಗಿಕ ಹಗರಣದಲ್ಲಿ ಸಿಲುಕಿ ಜೈಲು ಸೇರಿ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಇಲ್ಲಿ ಪ್ರಮುಖವಾಗಿ ಕಾಂಗ್ರೆಸ್ ಜೆ.ಡಿ.ಎಸ್. ಪಕ್ಷಗಳಿದ್ದು ಬಿ.ಜೆ.ಪಿ. ವಿರುದ್ಧ ಹೋರಾಡಿ ಸಫಲತೆ ಪಡೆಯಲು ವಿಫಲವಾಗಿವೆ.

ಸಮಗ್ರ ಭೂ ಸುಧಾರಣೆಯಾಗದೇ ರೈತರ, ಕೃಷಿ ಕಾರ್ಮಿಕರ ಸಮಸ್ಯೆಗಳು ಹೆಚ್ಚಾಗಿದೆ. ವಿ.ಐ.ಎಸ್.ಎಲ್. ಮತ್ತು ಎ.ಪಿ.ಎಂ.ಗಳನ್ನು ಆಧುನೀಕರಣ ಮಾಡದೇ ಕೊಲ್ಲಲಾಗುತ್ತಿದೆ. ಜಾಗತೀಕರಣ ನೀತಿಯಿಂದಾಗಿ ರೋಗಗ್ರಸ್ಥವಾಗಿವೆ. ಮಾಚಿನಹಳ್ಳಿ ಇಂಡಸ್ಟ್ರಿಯಲ್ ಏರಿಯ, ಆರ್.ಎಂ.ಸಿ. ಬಳಿ ಇರುವ ಇಂಡಸ್ಟ್ರಿಯಲ್ ಏರಿಯಾಗಳಲ್ಲಿ ಸಣ್ಣ ಕೈಗಾರಿಕಾ ಶೇ 60 ರಷ್ಟು ಮುಚ್ಚಿ ಸಾವಿರಾರು ಕಾರ್ಮಿಕರು ಕೆಲಸ ಮಾಡುತ್ತಿದ್ದ ವಿ.ಐ.ಎಸ್.ಎಲ್. ನಲ್ಲಿ ಗುತ್ತಿಗೆ ಕಾರ್ಮಿಕರು ಸೇರಿದಂತೆ 2,500 ಮಾತ್ರ ಇದ್ದಾರೆ. ನಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಅಸಂಘಟಿತ ವಲಯದ ಕಾರ್ಮಿಕರು ಜಿಲ್ಲೆಯಾದ್ಯಂತ ಸಹಸ್ರಾರು ಸಂಖ್ಯೆಯಲ್ಲಿದ್ದಾರೆ. ಈ ಎಲ್ಲ ಪರಿಸ್ಥಿತಿ ಕುರಿತು ಸಮ್ಮೇಳನವು ವಿವರವಾಗಿ ಚರ್ಚಿಸಿತು.

ನಿರ್ಣಯಗಳು : ಬಗರ್ ಹುಕುಂ ಸಾಗುವಳಿ ಸಕ್ರಮ, ಗ್ರಾಮೀಣ, ಉದ್ಯೋಗ ಖಾತ್ರಿ ಜಾರಿ ಅಲ್ಲದೆ ವಿ.ಐ.ಎಸ್.ಎಲ್. ಮತ್ತು ಎಂ.ಪಿ.ಎಂ. ಕಾರ್ಖಾನೆಗಳ ಆಧುನೀಕರಣ ಮತ್ತು ವಿ.ಐ.ಎಸ್.ಎಲ್. ಗೆ ಅದಿರಿಗಾಗಿ ಗಣಿ ನೀಡಲು ಮುಂತಾಗಿ ಸಮ್ಮೇಳನ ನಿರ್ಣಯ ಕೈಗೊಂಡಿತು.



ಕನ್ನಡ ಶಾಲೆ ಮುಚ್ಚಬೇಡಿ ಎಂದ ವಿದ್ಯಾರ್ಥಿಗಳ ಮೇಲೆ ಅನಾಗರೀಕ ಹಲ್ಲೆ

ವಿದ್ಯಾರ್ಥಿಗಳ ಕೊರತೆಯ ನೆಪ ಹೇಳಿ ಸಾವಿರಾರು ಕನ್ನಡ ಶಾಲೆಗಳನ್ನು ಮುಚ್ಚಲು ಹೊರಟ್ಟಿರುವ ರಾಜ್ಯ ಬಿಜೆಪಿ ಸರ್ಕಾರ ಇದನ್ನು ವಿರೋಧಿಸಿದ ವಿದ್ಯಾರ್ಥಿ ಸಮೂಹದ ಮೇಲೆ ಅನಾಗರಿಕ ದಾಳಿ ನಡಸಿದೆ. ಶಿಕ್ಷಣ ಪ್ರೇಮಿಗಳು, ಕನ್ನಡ ಪ್ರೇಮಿಗಳು, ಪ್ರಜ್ಞಾವಂತರ ಮಾತು ಕೇಳದ ಸರ್ಕಾರ ಯಾವ ದಾರಿಯಲ್ಲಿ ಹೋರಟಿಧೆ.

ಹುಳ್ಳಿಉಮೇಶ್
ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎಂಬ ನೆಪ ಹೇಳಿ ರಾಜ್ಯದಲ್ಲಿ 3174 ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಲು ರಾಜ್ಯ ಬಿಜೆಪಿ ಸರ್ಕಾರ ಆದೇಶಿಸಿದೆ. ಈ ಮೂಲಕ ತಾನು ಸಂಪೂರ್ಣ ಶಿಕ್ಷಣದ ವ್ಯಾಪಾರೀಕರಣ - ಖಾಸಗೀಕರಣದ ಪರ ಎಂಬುದನ್ನ ಮತ್ತೊಮ್ಮೆ ಸಾಬೀತು ಪಡಿಸಿದೆ. ರಾಜ್ಯದ ಶೈಕ್ಷಣಿಕ ವಲಯ ಹಾಗೂ ಸಾಹಿತ್ಯ ವಲಯ ಈ ನಿರ್ಧಾರವನ್ನು ಪ್ರಬಲವಾಗಿ ವಿರೋಧಿಸುತ್ತಿವೆ. ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ) ಸಂಘಟನೆ ರಾಜ್ಯಾದ್ಯಂತ 4 ಹಂತಗಳಲ್ಲಿ ಹೋರಾಟನಡೆಸಿದೆ. ಅಲ್ಲದೇ ಹಲವು ಪ್ರಗತಿ ಪರ ಸಂಘಟನೆಗಳೂ ಪ್ರತಿಭಟಿಸಿವೆ. ಇಷ್ಟೆಲ್ಲಾ ವಿರೋಧದ ಮಧ್ಯೆಯೂ ಶಿಕ್ಷಣ ಸಚಿವರಾದ ವಿಶ್ವೇಶ್ವರ ಹೆಗ್ಡೆ ಕಾಗೇರಿಯವರು ಶಾಲೆಗಳ ವಿಲೀನಕ್ಕೆ ಬದ್ಧ ಎಂದು ಘೋಷಿಸಿರುವುದು ಇವರ ಮೊಂಡುತನ ಹಾಗೂ ಕನ್ನಡ ವಿರೋಧಿ ನಿಲುವನ್ನು ತೋರಿಸುತ್ತದೆ. ಅಲ್ಲದೇ ಸಾಹಿತಿಗಳ, ಶಿಕ್ಷಣ ತಜ್ಞರ, ವಿದ್ಯಾರ್ಥಿ ಸಮುದಾಯದ ಅಭಿಪ್ರಾಯಗಳನ್ನು ತಿರಸ್ಕರಿಸಿ ಏಕಾಏಕಿ ತಮ್ಮ ನಿರ್ಧಾರವನ್ನು ಜಾರಿಗೊಳಿಸಲು ಹೊರಟಿರುವುದು ಹಿಟ್ಲರ್ ಸಂಸ್ಕೃತಿಯಾಗಿದೆ.


ದ್ವಂದ್ವ ಹೇಳಿಕೆಗಳು : ಶಾಲೆಗಳನ್ನು ಯಾವುದೇ ಕಾರಣಕ್ಕೂ ಮುಚ್ಚುವುದಿಲ್ಲವೆಂದು ಒಂದೆಡೆ ಮುಖ್ಯಮಂತ್ರಿ ಸದಾನಂದಗೌಡರು ಘೋಷಿಸಿದರೆ, ಇನ್ನೊಂದೆಡೆ ಶಾಲೆಗಳ ವಿಲೀನಕ್ಕೆ ಬದ್ಧವೆಂದು ಶಿಕ್ಷಣ ಸಚಿವ ಕಾಗೇರಿ ತಮ್ಮ ನಿಲುವನ್ನು ಪ್ರದರ್ಶಿಸುತ್ತಿದ್ದಾರೆ. ಅಲ್ಲದೇ ಅವರ ಪಕ್ಷದ ಅನೇಕ ಶಾಸಕರೇ ಶಾಲೆಗಳನ್ನು ಮುಚ್ಚುವ ಅಥವಾ ವಿಲೀನಗೊಳಿಸುವ ನಿರ್ಧಾರವನ್ನು ವಿರೋಧಿಸುತ್ತಿದ್ದಾರೆ. ಆದ್ದರಿಂದ ಈ ಕುರಿತು ಸರ್ಕಾರಕ್ಕೆ ಒಂದು ಸ್ಪಷ್ಟತೆ ಇಲ್ಲದೇ ಪರಸ್ಪರ ದ್ವಂದ್ವದ ಹೇಳಿಕೆಗಳನ್ನು ನೀಡುತ್ತಾ ಜನರನ್ನು ದಿಕ್ಕು ತಪ್ಪಿಸುತ್ತಿದೆ.

ಶಾಲೆ ಮುಚ್ಚುವ ನಿರ್ಧಾರದ ಹಿಂದಿನ ಹುನ್ನಾರ : ಸರ್ಕಾರದ ಈ ನಿರ್ಧಾರದ ಹಿಂದೆ ಗ್ರಾಮೀಣ -ಬಡ-ದಲಿತ-ಹಿಂದುಳಿದ ವರ್ಗದವರಿಗೆ ಶಿಕ್ಷಣ ವಂಚಿಸುವ, ಖಾಸಗೀ ಶಾಲೆಗಳನ್ನು ಇನ್ನಷ್ಟು ಬಲಗೊಳಿಸುವ ಹಾಗೂ ಶಿಕ್ಷಣದ ವಾಪಾರೀಕರಣಕ್ಕೆ ಕುಮ್ಮಕ್ಕು ನೀಡುವ, ಉದ್ಯೋಗ ಕಡಿತ ಮಾಡುವ ಹಾಗೂ ಗುಲಾಮಿ ಸಂಸ್ಕೃತಿ ಬೆಳೆಸುವ ಹುನ್ನಾರ ಅಡಗಿದೆ. ಈಗಾಗಲೇ ರಾಜ್ಯದ ಹಲವೆಡೆ ಸರ್ಕಾರದ ನಿರ್ಲಕ್ಷದ ಫಲವಾಗಿ ಸರ್ಕಾರಿ ಶಾಲೆಗಳು ದುಸ್ಥಿತಿಗೆ ತಲುಪಿವೆ. ಜನರಲ್ಲಿ ಸರ್ಕಾರಿ ಶಾಲೆಗಳ ಬಗ್ಗೆ ಅಸಹ್ಯ ಮೂಡಿ ಇಂಗ್ಲೀಷ್ ವ್ಯಾಮೋಹ ಬೆಳೆಯುತ್ತಿದೆ. ರಾಜ್ಯದಲ್ಲಿ 1.12 ಲಕ್ಷ ವಿದ್ಯಾರ್ಥಿಗಳು ಈಗಾಗಲೇ ಶಾಲೆಯಿಂದ ಹೊರಗುಳಿದಿದ್ದಾರೆ. ಈಗ ಸರ್ಕಾರ ಕೈಗೊಂಡಿರುವ ನಿರ್ಧಾರದಿಂದ ಇನ್ನಷ್ಟು ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚನೆಗೊಳಗಾಗಲಿದ್ದಾರೆ ಹಾಗೂ 3174 ಸರ್ಕಾರಿ ಶಾಲೆಗಳನ್ನು ಮುಚ್ಚುವುದರಿಂದ ಅಥವಾ ವಿಲೀನಗೊಳಿಸುವುದರಿಂದ ಶಿಕ್ಷಕರ ಉದ್ದೆಗಳನ್ನು ಕಡಿತ ಮಾಡಲಾಗುತ್ತಿದೆ.

ಶಿಕ್ಷಣ ಸಚಿವರ ಸಮಜಾಯಿಷಿ : ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿಲ್ಲ ಅವುಗಳನ್ನು ವಿಲೀನಗೊಳಿಸುತ್ತಿದ್ದೇವೆ ಎಂದು ಶಿಕ್ಷಣ ಸಚಿವರು ಸನಜಾಹಿಶಿ ನೀಡುತ್ತಿರುವ ಹೇಳಿಕೆ ಕೊಲ್ಲುವ ಬದಲು ನೇರವಾಗಿ ಸ್ವರ್ಗಕ್ಕೆ ಕಳಿಹಿಸುತ್ತೇವೆ ಎನ್ನುವಂತಿದೆ.

ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದದ್ದು ಏಕೆ? ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಕಾರಣ ಅವುಗಳನ್ನು ವಿಲೀನಗೊಳಿಸುತ್ತಿರುವುದಾಗಿ ಹೇಳುತ್ತಿರುವ ಸರ್ಕಾರ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲು ಕಾರಣಗಳೇನೆಂಬುದರ ಬಗ್ಗೆ ಸರ್ಕಾರ ಚಕಾರವೆತ್ತುತ್ತಿಲ್ಲ. ಈಗ ಸರ್ಕಾರ ಮುಚ್ಚಲು ಹೊರಟಿರುವ ಬಹುತೇಕ ಶಾಲೆಗಳು ಏಕೋಪಾಧ್ಯಾಯ ಶಾಲೆಗಳು. ಅಲ್ಲಿ ಒಬ್ಬ ಶಿಕ್ಷಕ/ಕಿ ಎಲ್ಲಾ ಕೆಲಸಗಳನ್ನು ನಿರ್ವಹಿಸಬೇಕಿದೆ. ಅಂಥಹ ಶಾಲೆಗಳಿಗೆ ಸರಿಯಾದ ಮೂಲ ಸೌಕರ್ಯಗಳಿಲ್ಲ ಹಾಗೂ ಆ ಶಾಲೆಗಳನ್ನು ಅಭಿವೃದ್ಧಿಗೊಳಿಸಲು, ಮಾತೃಭಾಷಾ ಶಿಕ್ಷಣದ ಮಹತ್ವವನ್ನು ತಿಳಿಸುವಲ್ಲಿ ಸರ್ಕಾರ ವಹಿಸಿರುವ ನಿರ್ಲಕ್ಷ, ಖಾಸಗೀ ಶಾಲೆಗಳನ್ನು ತೆರೆಯಲು ಅನುಮತಿ ನೀಡಿರುವುದು, ಅನಧಿಕೃತ ಇಂಗ್ಲೀಷ್ ಶಾಲೆಗಳ ಪ್ರಚಾರದ ಅಬ್ಬರ ಹಾಗೂ ಪೋಷಕರಲ್ಲಿ ಬೆಳೆಯುತ್ತಿರುವ ಇಂಗ್ಲೀಷ್ ವ್ಯಾಮೋಹ ಹಾಗೂ ಆ ಶಾಲೆಗಳಿರುವ ಪ್ರದೇಶದ ಜನರ ಆರ್ಥಿಕ ಸಂಕಷ್ಟಗಳು, ಅಲ್ಲಿನ ಸಾಮಾಜಿಕ-ಭೌಗೋಳಿಕ ಸನ್ನಿವೇಶಗಳು ಮತ್ತು ಅನಾನುಕೂಲಗಳು ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಲು ಕಾರಣವಾಗಿವೆ. ಈ ರೀತಿಯ ಕಾರಣಗಳನ್ನು ಹುಡುಕಿ ಅವುಗಳಿಗೆ ಪರಿಹಾರ ಕಂಡುಕೊಂಡು ಶಾಲೆಗಳನ್ನು ಅಭಿವೃದ್ಧಿ ಪಡಿಸುವ ಬದಲು ಅಂತಹ ಶಾಲೆಗಳನ್ನೇ ಮುಚ್ಚಲು ಹೊರಟಿರುವುದು ರೋಗಕ್ಕೆ ಚಿಕಿತ್ಸೆ ಕಂಡು ಹಿಡಿಯುವ ಬದಲು ದೇಹದ ರೋಗಗ್ರಸ್ಥ ಭಾಗವನ್ನೇ ತೆಗೆಯುವುದಾಗಿದೆ ನೀತಿಯಾಗಿದೆ.





ಕನ್ನಡ ಸಾಹಿತ್ಯ ಸಮ್ಮೇಳನದಲ್ಲೇ ಪ್ರತಿಭಟನೆ ಏಕೆ ? : ಕನ್ನಡ ನಾಡು-ನುಡಿ ಕುರಿತು ಸಮಗ್ರ ಚರ್ಚೆಯಾಗಬೇಕಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯೇ ಏಕೆ ಪ್ರತಿಭಟನೆ ನಡೆಸಬೇಕಾಯಿತು ಎನ್ನುವುದು ಮಹತ್ವದ ಸಂಗತಿ. ರಾಜ್ಯ ಸರ್ಕಾರ 24.09.2011 ರಂದು ಶಾಲೆಗಳನ್ನು ಮುಚ್ಚುವ/ವಿಲೀನಗೊಳಿಸುವ ಆದೇಶವನ್ನು ಹೊರಡಿಸಿತು. ಆದೇಶ ಹೊರಬಿದ್ದ ತಕ್ಷಣದಿಂದ ಎಸ್ಎಫ್ಐ ಸಂಘಟನೆ ಯಾವ ಕಾರಣಕ್ಕೂ ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಬಾರದೆಂದು ಪ್ರತಿಭಟನೆ ನಡೆಸಿತು. ಎರಡನೇ ಹಂತವಾಗಿ ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಯಿತು. ಮೂರನೇ ಹಂತವಾಗಿ ನವೆಂಬರ್ 1 ಕನ್ನಡ ರಾಜ್ಯೋತ್ಸವದ ದಿನದಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕರಾಳ ದಿನಾಚರಣೆಯನ್ನಾಚರಿಸಿ ಪ್ರತಿಭಟನೆ ನಡೆಸಿದ ಎಸ್.ಎಫ್.ಐ ಕಾರ್ಯಕರ್ತರನ್ನು ಅನೇಕ ಜಿಲ್ಲೆಗಳಲ್ಲಿ ಬಂಧಿಸಲಾಯಿತು. ನಾಲ್ಕನೇ ಹಂತವಾಗಿ ಸಾಹಿತಿ-ಚಿಂತಕರು-ಶಿಕ್ಷಣ ಇಲಾಖೆಯ ಅಧಿಕಾರಿಗಳು-ವಿದ್ಯಾರ್ಥಿ-ಯುವಜನ-ದಲಿತ-ಪ್ರಗತಿಪರ ಸಂಘಟನೆಗಳನ್ನೊಳಗೊಂಡ ರಾಜ್ಯ ಸಮಾವೇಶವನ್ನು ಬೆಂಗಳೂರಿನಲ್ಲಿ ನಡೆಸಲಾಯಿತು. ಇದಾದ ನಂತರ ರಾಜ್ಯದ ಹಲವೆಡೆ ಶಾಸಕರಿಗೆ - ಸಚಿವರುಗಳಿಗೆ ಮನವಿ ಸಲ್ಲಿಸಲಾಯಿತು. ಈ ಎಲ್ಲಾ ಹಂತಗಳಲ್ಲೂ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರೂ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಲ್ಲಿಲ್ಲ. ಕೊನೆಗೆ ಡಿಸೆಂಬರ್ 5 ರಂದು ಗಂಗಾವತಿಯಲ್ಲಿ ಬೃಹತ್ ಬಹಿರಂಗ ಸಭೆ ನಡೆಸಿ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ನೈತಿಕತೆ ಇಲ್ಲ, ಅವರನ್ನು ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಬಾರದೆಂದು ಕನ್ನಡ ಸಾಹಿತ್ಯ ಪರಿಷತ್ತನ್ನು ಒತ್ತಾಯಿಸಲಾಯಿತು. ಸರ್ಕಾರ ಶಾಲೆ ಮುಚ್ಚುವ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಮುಖ್ಯಮಂತ್ರಿಗಳು ಮತ್ತು ಸರ್ಕಾರದ ವಿರುದ್ಧ ತೀವ್ರ ಹೋರಾಟ ನಡೆಸುವುದಾಗಿ ಎಚ್ಚರಿಸಲಾಯಿತು. ಅದ್ದಾಗ್ಯೂ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಲ್ಲಿಲ್ಲ ಆದ್ದರಿಂದ ಸಾಹಿತ್ಯ ಸಮ್ಮೇಳನದಲ್ಲಿ ಈ ಕುರಿತು ಪ್ರತಿಭಟನೆ ನಡೆಸುವ ಅನಿವಾರ್ಯತೆಯನ್ನು ಸರ್ಕಾರವೇ ಸೃಷ್ಟಿಸಿತು.

ಕನ್ನಡ ಶಾಲೆ ಉಳಿಸಿ ಎಂದರೆ ಲಾಠಿ ಏಟು- ಇದು ಬಿಜೆಪಿ ಸರ್ಕಾರದ ಧೋರಣೆ : ಅಂದು ಡಿಸೆಂಬರ್ 9, 2011 ಬತ್ತದ ಕಣಜ ಗಂಗಾವತಿಯಲ್ಲಿ ಸಾಹಿತ್ಯ ಸಮ್ಮೇಳನದ ಕಲರವ ಪ್ರಾರಂಭವಾಗಿತ್ತು. ಗಂಗಾವತಿಯಲ್ಲಿ ಸಂಭ್ರಮ ಮನೆ ಮಾಡಿತ್ತು. ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚಿ ನೈತಿಕತೆ ಕಳೆದುಕೊಂಡು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಮುಖ್ಯಮಂತ್ರಿಗಳು ಆಗಮಿಸಿದ್ದರು. ಸಾಹಿತ್ಯ ಸಮ್ಮೇಳನದ ಉಧ್ಘಾಟನಾ ಸಮಾರಂಭದಲ್ಲಿ ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚುವ ಸರ್ಕಾರದ ಶಿಕ್ಷಣ ವಿರೋಧಿ ನೀತಿಯನ್ನು ಪ್ರತಿಭಟಿಸಿದ ಎಸ್ಎಫ್ಐ ಮುಖಂಡರು ಹಾಗೂ ಕಾರ್ಯಕರ್ತರ ಮೇಲೆ ಮುಖ್ಯಮಂತ್ರಿಗಳ ಸಮ್ಮುಖದಲ್ಲೇ ಪೋಲೀಸರು ಅಮಾನುಷವಾಗಿ ಲಾಠಿ ಚಾರ್ಜ್ ನಡೆಸಿದರು. ಲಾಠಿಚಾರ್ಜ್ ನಡೆಸುತ್ತಿದ್ದರೂ ಮುಖ್ಯ ಮಂತ್ರಿಗಳು

ಪುಟ15 ಕ್ಕೆ

ಸಿಪಿಎಂ ಉಡುಪಿ ಜಿಲ್ಲಾ ಸಮ್ಮೇಳನದ ಆಗ್ರಹ

ವಾರಾಹಿ ಯೋಜನೆ ಪೂರ್ಣಗೊಳಿಸಿ : ಪಡುಬಿದ್ರೆ ಪರಿಸರ ಹಾನಿ ತಪ್ಪಿಸಿ

ಸಿಪಿಎಂ ಉಡುಪಿ ಜಿಲ್ಲಾ 4ನೇ ಸಮ್ಮೇಳನವು ಡಿಸೆಂಬರ್ 4 ಮತ್ತು 5 ರಂದು ಉಡುಪಿಯ ಜಿಲ್ಲಾ ಲಯನ್ಸ್ ಭವನದಲ್ಲಿ ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಎಡಶಕ್ತಿಗಳು ಮುಖ್ಯವಾಗಿ ಸಿಪಿಐ(ಎಂ) ನಂತಹ ಪಕ್ಷದ ಮುಂದೆ ಇಂದು ಅನೇಕ ಗುರುತರವಾದ ಸವಾಲುಗಳಿವೆ. ಈ ಸವಾಲುಗಳನ್ನು ಪರಿಣಾಮಕಾರಿ ಎದುರಿಸುವಷ್ಟು ವೇಗವಾಗಿ ಮತ್ತು ಸಮರ್ಥವಾಗಿ ಪಕ್ಷವನ್ನು ಬೆಳೆಸಬೇಕಾಗಿದೆ. ನಾವು ಈವರೆಗೂ ತಲುಪದೇ ಇದ್ದ ಅನೇಕ ಜನ ವಿಭಾಗಗಳ ನಡುವೆ ಪಕ್ಷವು ತನ್ನ ಪ್ರಭಾವವನ್ನು ಬೆಳೆಸುವ ಪಯತ್ನ ಮಾಡಬೇಕಾಗಿದೆ ಎಂದು ತಿಳಿಸಿದರು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಅದಮೂರು ಶ್ರೀಪತಿ ಆಚಾರ್ಯರವರು ಆರಂಭದಲ್ಲಿ ಸ್ವಾಗತ ಭಾಷಣ ಮಾಡಿದರು. ಕಳೆದ ಎರಡು ದಶಕಗಳಲ್ಲಿ ಇಲ್ಲಿನ ಕೋಮುವಾದಿ ಶಕ್ತಿಗಳು ಮುಖ್ಯವಾಗಿ ದಲಿತ ಮತ್ತು ಹಿಂದುಳಿದ ವರ್ಗಗಳ ನಡುವೆ ಮೂಢನಂಬಿಕೆ, ಅಲ್ಪ ಸಂಖ್ಯಾತರ ಬಗ್ಗೆ ಸಂದೇಹ, ಸುಳ್ಳು, ಭ್ರಮೆ ಇತ್ಯಾದಿಗಳನ್ನು ನಿರಂತರವಾಗಿ ಬೆಳೆಸುವ ಮೂಲಕ ಜನ ಸಾಮಾನ್ಯರ ಮಧ್ಯೆ ಕೋಮುವಾದಿ ವಿಷವನ್ನು ತುಂಬುವಲ್ಲಿ, ಸಾಕಷ್ಟು ಯಶಸ್ವಿಯಾಗಿದ್ದಾರೆ. ಒಂದು ಕಾಲದಲ್ಲಿ ಗಾಂಧಿವಾದಿಗಳ ನಾಡೆಂದು ಹೆಸರಾಗಿದ್ದ ಈ ಜಿಲ್ಲೆಯಲ್ಲಿ ಇವತ್ತು ಗೋಡ್ಸೆವಾದ ಬೆಳೆಯುತ್ತಿದೆ ಎಂದು ತಿಳಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಮ್ರೇಡ್ ಪಿ. ವಿಶ್ವನಾಥ ರೈಯವರು ವಹಿಸಿದರು. ಜಿಲ್ಲಾ ಕಾರ್ಯದರ್ಶಿಯವರಾದ ಕಾ ಕೆ.ಶಂಕರ್ ವಂದಿಸಿದರು. ಉದ್ಘಾಟನಾ ಸಮಾರಂಭ ಮುಗಿದ ಬಳಿಕ ಪ್ರತಿನಿಧಿಗಳ ಸಮ್ಮೇಳನ ಮಧ್ಯಾಹ್ನ 3 ಗಂಟೆಗೆ ಆರಂಭವಾಯಿತು. ಕಾರ್ಯದರ್ಶಿಯವರು ಕರಡು ವರದಿ ಮಂಡಿಸಿದರು. ಕರಡು ವರದಿಯ ಮೇಲೆ ಪ್ರತಿನಿಧಿಗಳ ಪೈಕಿ 11 ಮಂದಿ ಮಾತನಾಡಿ, ಸಲಹೆ ಸೂಚನೆಗಳನ್ನು ನೀಡಿದರು.

ಪ್ರಮುಖ ನಿರ್ಣಯಗಳನ್ನು ಅಂಗೀಕರಿಸಲಾಯಿತು. 12 ಮಂದಿ ಸದಸ್ಯರಿರುವ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾಮ್ರೇಡ್ ಕೆ. ಶಂಕರ್ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದರು.



ಉಡುಪಿ ಜಿಲ್ಲೆಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಜಿಲ್ಲಾ ಸಮ್ಮೇಳನ ಚರ್ಚಿಸಿತು. ಪಡುಬಿದ್ರಿಯ ಉಷ್ಣ ವಿದ್ಯುತ್ ಸ್ಥಾವರ ಕಾರ್ಯಾರಂಭಿಸಿದಂದಿನಿಂದ ಸುತ್ತಲಿನ ಪರಿಸರಕ್ಕೆ ಸಾಕಷ್ಟು ಹಾನಿಯನ್ನುಂಟು ಮಾಡಿದ್ದು, ಸ್ಥಾವರ ನಡೆಸುವ ಸಂಸ್ಥೆಯು ಈ ಹಾನಿಯ ಬಗ್ಗೆ ನಿರ್ಲಕ್ಷ್ಯ ವಹಿಸದೆ; ಪರಿಸರದ ಹಾನಿಯ ಬಗ್ಗೆ ತಜ್ಞರು ನೀಡಿದ ಸಲಹೆಗಳನ್ನು ಪರಿಗಣಿಸಿ ಸಂಸ್ಥೆಯು ಕಾರ್ಯನಿರ್ವಹಿಸಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಮ್ಮೇಳನ ಕೈಗೊಂಡಿದೆ. ವಾರಾಹಿ ಯೋಜನೆ ದೀರ್ಘ ಕಾಲದಿಂದ ಪೂರ್ಣವಾಗದೆ ಉಳಿದಿದ್ದು, ಉಡುಪಿ, ಕುಂದಾಪುರಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೂ ಇದರಿಂದ ಪ್ರಯೋಜನವಾಗಲಿದ್ದು ಅದನ್ನು ಬೇಗನೇ ಪೂರ್ಣಗೊಳಿಸಲು ಸಮ್ಮೇಳನ ಒತ್ತಾಯಿಸಿದೆ. ಬ್ರಹ್ಮಾವರ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಬೇಕು. ರೈತರ ಬಾಕಿ ಪಾವತಿ ಹಾಗೂ ಕಾರ್ಮಿಕರಿಗೆ ಸಲ್ಲತಕ್ಕ ಪರಿಹಾರ ಪಾವತಿ ಮಾಡಬೇಕು. ಮಂಗಳೂರು-ಕಾರವಾರ ನಡುವೆ ಇಂಟರ್‌ಸಿಟಿ ರೈಲು ಸಂಚಾರ ಆರಂಭಿಸಬೇಕು,

ಅವಿಭಜಿತ ದ.ಕ.ಜಿಲ್ಲೆಯಲ್ಲಿ ಸರಕಾರಿ ಬಸ್‌ಗಳನ್ನು ಓಡಿಸಬೇಕು, ಕಡಲ್ಕೊರೆತ ಸಮಸ್ಯೆ ಪರಿಹಾರಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಬೇಕು – ಎಂದು ನಿರ್ಣಯ ಕೈಗೊಳ್ಳಲಾಯಿತು. ಉಡುಪಿ ಜಿಲ್ಲೆಯಾದ್ಯಂತ ನಿವೇಶನ ರಹಿತರು ದೊಡ್ಡ ಸಂಖ್ಯೆಯಲ್ಲಿ ನಿವೇಶನಕ್ಕಾಗಿ ಮನವಿಯನ್ನು ಕೊಡುತ್ತಲೇ ಬಂದಿದ್ದರೂ ಸರ್ಕಾರ ನಿವೇಶನ ಕೊಟ್ಟಿರುದು ಕಡಿಮೆ; ಎಲ್ಲಾ ಮನವಿಗಳನ್ನು ಪರಿಶೀಲಿಸಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದೂ ಸಮ್ಮೇಳನ ಆಗ್ರಹಿಸಿದೆ.



'ಕಂಪನಿಯ ಗುಲಾಮಗಿರಿಯಲ್ಲಿ ಆಡಳಿತ'

–ಜಿ.ವಿ. ಶ್ರೀರಾಮ ರೆಡ್ಡಿ

ಸಮ್ಮೇಳನದ ಬಹಿರಂಗ ಅಧಿವೇಶನವು ಡಿಸೆಂಬರ್ 5ರ ಸಾಯಂಕಾಲ ಉಡುಪಿ ಲಯನ್ಸ್ ಭವನದಲ್ಲಿ ನೆರವೇರಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಸರ್ಕಾರವು ಗುಲಾಮಗಿರಿಯ ಆಡಳಿತವನ್ನು ನಡೆಸುತ್ತಿದೆ. ಇಲ್ಲಿ ಎಲ್ಲವನ್ನು ಖಾಸಗಿ ಕಂಪನಿಗಳು ನಿರ್ಧರಿಸುತ್ತಿದೆ. ಈ ಸರಕಾರ ಇರುವುದು ಖಾಸಗಿ ಕಂಪೆನಿಗಳಿಗಾಗಿಯೇ ಹೊರತು ಜನರಿಗಾಗಿ ಅಲ್ಲ ಎಂದು ಕಟುವಾಗಿ ಟೀಕಿಸಿದರು.

ದೇಶದ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಅಧಃಪತನದ ಹಾದಿಯಲ್ಲಿದೆ. ರಾಷ್ಟ್ರೀಯ ಪಕ್ಷಗಳು ಮಾತ್ರವಲ್ಲದೇ ಹಲವು ಪ್ರಾದೇಶಿಕ ಪಕ್ಷಗಳೂ ಕೂಡಾ ಈ ಭ್ರಷ್ಟಾಚಾರದಲ್ಲಿ ಮುಳುಗಿವೆ ಎಂದು ಅವರು, ದೇಶದ ಸಂಪತ್ತನ್ನು ಕೆಲವೇ ಮಂದಿ ಕೊಳ್ಳೆ ಹೊಡೆಯುತ್ತ ಬಹು ಸಂಖ್ಯಾತ ಜನರನ್ನು ನಿರ್ಗತಿಕರನ್ನಾಗಿಮಾಡುತ್ತಿದ್ದಾರೆ. ಇದರಿಂದ ಬಡವ ಶ್ರೀಮಂತರ ನಡುವಿನ ಅಂತರ ಹೆಚ್ಚಾಗುತ್ತಿದೆ ಎಂದರು.

ಅಣ್ಣಾ ಹಜಾರೆ ತಂಡ, ಕೇವಲ ರಾಜಕಾರಣಿಗಳ ಭ್ರಷ್ಟಾಚಾರದ ಬಗ್ಗೆ ಮಾತ್ರ ಮಾತನಾಡುತ್ತಿವೆಯೇ ಹೊರತು ಅದಕ್ಕೆಲ್ಲ ಮೂಲ ಕಾರಣವಾಗಿರುವ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಬಗ್ಗೆ ಚಕಾರ ಎತ್ತುತ್ತಿಲ್ಲ. ಈ ನೀತಿಗಳಿಂದಾಗಿಯೇ ಇಂದು ದೇಶದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರಗಳು ನಡೆಯುತ್ತಿವೆ ಎಂದು ಅವರು ತಿಳಿಸಿದರು.

ಬಿಜೆಪಿ ಫ್ಯಾಸಿಷ್ಟ್ ಸಂಘಟನೆ :

ಬಿಜೆಪಿ ರಾಜಕೀಯ ಪಕ್ಷವಲ್ಲ. ಅದೊಂದು ಫ್ಯಾಶಿಷ್ಟ್ ಸಂಘಟನೆಯಾಗಿದೆ. ಪ್ರಜಾಪ್ರಭುತ್ವ ವಿರೋಧಿ ಸಂಸದೀಯ ವ್ಯವಸ್ಥೆಯನ್ನು ಅವಮಾನ ಮಾಡುವ ಸಂಘಟನೆ. ಇವರು ಅಧಿಕಾರಕ್ಕಾಗಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಅವಹೇಳನ ಮಾಡಿ, ಸ್ಪೀಕರ್ ಸ್ಥಾನವನ್ನು ರಾಜಕೀಯ ಕೆಸರೆರಚಾಟಕ್ಕೆ ಬಳಸಿಕೊಂಡಿದ್ದಾರೆ. ಇದೆಲ್ಲ ಫ್ಯಾಶಿಷ್ಟ ಪಕ್ಷಗಳ ಸ್ವರೂಪವಾಗಿದೆ ಎಂದು ಹೇಳಿದರು.

ಕಪ್ಪು ಹಣದ ಬಗ್ಗೆ ಮಾತನಾಡುವ ಬಿಜೆಪಿ, ಮಠಗಳಲ್ಲಿ ಯಾವುದೇ ಲೆಕ್ಕಚಾರ ನೀಡದೇ ಸಂಗ್ರಹವಾಗಿರುವ ಕೋಟ್ಯಾಂತರ ಹಣದ ಬಗ್ಗೆ ಚಕಾರ ಎತ್ತುತ್ತಿಲ್ಲ. ಇದೆಲ್ಲ ಕಪ್ಪು ಹಣ ಅಲ್ಲವೇ. ಮಠ ಮಂದಿರಗಳು ನೆಲದ ಕಾನೂನಿಗಿಂತಲೂ ಮಿಗಿಲೇ ಎಂದು ಪ್ರಶ್ನಿಸಿದ ಅವರು, ಕಪ್ಪು ಹಣದ ವಿಚಾರವನ್ನು ಬಿಜೆಪಿ ಕೇವಲ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದೆ ಎಂದು ಟೀಕಿಸಿದರು.

ಶಿಸ್ತಿನ ಪಕ್ಷ ಎಂದು ಹೇಳಿಕೊಳ್ಳುತ್ತಿದ್ದ ಬಿಜೆಪಿ ತನ್ನ ಪಕ್ಷದ ಮಂತ್ರಿಗಳು ಜೈಲಿಗೆ ಹೋಗುತ್ತಿದ್ದರೂ ಅವರ ವಿರುದ್ಧ ಯಾವುದೇ ಶಿಸ್ತು ಕ್ರಮ ಜರುಗಿಸದಷ್ಟು ಅಸಹಾಯಕ ಸ್ಥಿತಿಯಲ್ಲಿದೆ. ಇದು ಬಿಜೆಪಿಯ ಅಧಃಪತನವನ್ನು ಬಿಂಬಿಸುತ್ತದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ಬಯಲಿಗೆ ಬರುತ್ತಿದ್ದರೂ ಪ್ರಮುಖ

ಪುಟ 14 ಕ್ಕೆ

ಸಂಸದೀಯ ಸ್ಥಾಯಿ ಸಮಿತಿ ತನ್ನ ಕಲಾಪಗಳನ್ನು ಪೂರ್ಣಗೊಳಿಸಿದ್ದು ಲೋಕಪಾಲ ಕುರಿತ ಶಾಸನ ಒಂದು ಅಂತಿಮ ರೂಪ ಪಡೆಯುವತ್ತ ಸಾಗಿದೆ. ಇದಕ್ಕೆ ಸಂಬಂಧಪಟ್ಟಂತೆ, ಸರಕಾರ ರಾಜಕೀಯ ಪಕ್ಷಗಳ ನಡುವೆ ಇನ್ನೂ ವಿಸ್ತಾರವಾದ ಸಮಾಲೋಚನೆಗಳಿಗೆ ಮೂರ್ತ ಸೂಚನೆಗಳನ್ನು ಪ್ರಸ್ತುತ ಪಡಿಸಬೇಕು ಎಂದು ಸಿಪಿಐ(ಎಂ) ಸರ್ವಪಕ್ಷ ಸಭೆಯಲ್ಲಿ ಸೂಚಿಸಿದೆ. ಈ ಎಲ್ಲ ಅಂಶಗಳನ್ನು ಪೂರ್ಣವಾಗಿ ಒಳಗೊಂಡಾಗ ಮಾತ್ರವೇ ನಮ್ಮ ದೇಶದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಮುಂದೊಯ್ಯಲು ಸಾಧ್ಯ. ಸರಕಾರ ಈ ವಿಷಯದಲ್ಲಿ ಅಗತ್ಯ ತುರ್ತಿನೊಂದಿಗೆ ಕ್ರಿಯೆಗಿಳಿಯುವಂತೆ ಮಾಡಬೇಕಾಗಿದೆ.

ಪರಿಣಾಮಕಾರಿ ಲೋಕಪಾಲ ಅಗತ್ಯ

(‘ಪೀಪಲ್ಸ್ ಡೆಮಾಕ್ರಸಿ’ ವಾರಪತ್ರಿಕೆಯ ಡಿಸೆಂಬರ್ 15, 2011 ರ ಸಂಪಾದಕೀಯ)

ಉನ್ನತ ಸ್ಥಾನಗಳಲ್ಲಿ ಮತ್ತು ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಒಂದು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಯನ್ನು ಸಂಸತ್ತು ಸ್ಥಾಪಿಸುತ್ತದೆ ಎಂದು ಜನ ಕಾತುರದಿಂದ ನಿರೀಕ್ಷಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಸರಕಾರ ಈಗಾಗಲೇ ಮಂಡಿಸಿರುವ ಮಸೂದೆಯನ್ನು, ಮತ್ತು ಸಾರ್ವಜನಿಕವಾಗಿ ಬಂದಿರುವ ಸಲಹೆ-ಸೂಚನೆಗಳನ್ನು ಪರೀಕ್ಷಿಸಿದ ಸಂಸದೀಯ ಸ್ಥಾಯೀ ಸಮಿತಿ ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲು ಸರಕಾರ ಒಂದು ಸರ್ವಪಕ್ಷ ಸಭೆಯನ್ನು ಕರೆಯಿತು. ಈಗಾಗಲೇ, ಈ ಅಂಕಣದಲ್ಲಿ ಹಲವು ಬಾರಿ ಹೇಳಿರುವಂತೆ, ಒಂದು ಲೋಕಪಾಲ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂದು ಆಗ್ರಹಿಸುವಲ್ಲಿ ಸಿಪಿಐ(ಎಂ) ಕಳೆದೆರಡು ದಶಕಗಳಿಂದ ಮುಂಚೂಣಿಯಲ್ಲಿದೆ; ಬೊಫೋರ್ಸ್ ಹಗರಣ ದೇಶದಲ್ಲಿ ಅಲ್ಲೋಲ-ಕಲ್ಲೋಲ ತಂದು ಸರಕಾರದ ರಾಜಕೀಯ ನೇತೃತ್ವದಲ್ಲಿ ಬದಲಾವಣೆ ಬಂದಂದಿನಿಂದ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ಮೆಟ್ಟಿ ಹಾಕುವ ಒಂದು ವ್ಯವಸ್ಥೆಯನ್ನು ಸ್ಥಾಪಿಸಬೇಕು ಎಂದು ಪ್ರಯತ್ನಿಸುತ್ತಾ ಬಂದಿದೆ.

1989ರಲ್ಲಿ, ಸಿಪಿಐ(ಎಂ)ನ ಹೊರಗಣ ಬೆಂಬಲವನ್ನು ಅವಲಂಬಿಸಿದ್ದ ವಿ ಪಿ ಸಿಂಗ್ ಸರಕಾರದ ಆಡಳಿತ ಕಾಲಾವಧಿಯಿಂದಲೇ ಸಿಪಿಐ(ಎಂ) ಇಂತಹ ಒಂದು ಶಾಸನವನ್ನು ತರುವಂತೆ ಒತ್ತಡ ಹಾಕುತ್ತಾ ಬಂದಿದೆ. ಈ ಸಂದರ್ಭದಲ್ಲಿ ಮತ್ತು 1996ರಲ್ಲಿ ಶ್ರೀ ದೇವೇಗೌಡರು ಮತ್ತು ಶ್ರೀ ಐ ಕೆ ಗುಜ್ರಾಲ್ ಅಡಿಯಲ್ಲಿ ಸಂಯುಕ್ತ ರಂಗ ಸರಕಾರ ರಚನೆಯಾದಾಗಲೂ, ಅವೆರಡೂ ಉಳಿಯಲು ಸಿಪಿಐ(ಎಂ) ನ ಹೊರಗಣ ಬೆಂಬಲವನ್ನು ಅವಲಂಬಿಸಿದ್ದಾಗ ಲೋಕಪಾಲ ಮಸೂದೆಯನ್ನು ಸಂಸತ್ತಿನ ಮುಂದೆ ತರಲಾಯಿತು. ಆದರೆ ಅದೆಂದೂ ಕಾನೂನಾಗಲಿಲ್ಲ. 2004ರಲ್ಲಿ ಮತ್ತೆ ಹೊರಗಿನಿಂದ ಸಿಪಿಐ(ಎಂ) ಬೆಂಬಲವನ್ನು ಅವಲಂಬಿಸಿದ್ದ ಯುಪಿಎ-1 ಸರಕಾರ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಲೋಕಪಾಲ ಸ್ಥಾಪನೆಯ ವಚನವನ್ನು ಸೇರಿಸುವಂತೆ ಮಾಡಲಾಯಿತು.ಈ ಎಲ್ಲ ಸಂದರ್ಭಗಳಲ್ಲೂ ಕರಡು ಶಾಸನ ಎಂದೂ ಬೆಳಕು ಕಾಣಲಿಲ್ಲ. ಇದಕ್ಕೆ ಕಾರಣವಾದದ್ದು ಹಲವು ವಿವಾದಾತ್ಮಕ ವಿಷಯಗಳು. ಪ್ರಧಾನ ಮಂತ್ರಿಗಳನ್ನು ಇದರ ವ್ಯಾಪ್ತಿಗೆ ಸೇರಿಸಬೇಕೋ ಬೇಡವೋ ಎಂಬುದು ಅದರಲ್ಲೊಂದು. ಸಿಪಿಐ(ಎಂ) ಸದಾ, ಅದರಲ್ಲೂ ಬೊಫೋರ್ಸ್ ಹಗರಣದ ನಂತರ ಪ್ರಧಾನ ಮಂತ್ರಿಗಳನ್ನು ಇದರ ವ್ಯಾಪ್ತಿಗೆ ತರಬೇಕು ಎಂದು ಹೇಳಿಕೊಂಡು ಬಂದಿದೆ.

ಪ್ರಸ್ತುತ ಸಂದರ್ಭದಲ್ಲಿ, ಮಹಾಹಗರಣಗಳು ಒಂದಾದ ಮೇಲೊಂದರಂತೆ ಭರದಲ್ಲಿ ಜನಗಳ ಮುಂದೆ ಬಯಲಾದ ಹಿನ್ನೆಲೆಯಲ್ಲಿ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಒಂದು ಸಾರ್ವತ್ರಿಕ ಕೂಗು ತಾರಕಕ್ಕೇರಿತು. 2ಜಿ ತರಂಗಾಂತರ ಹಗರಣದ ತನಿಖೆಗೆ ಜಂಟಿ ಸಂಸದೀಯ ಸಮಿತಿಯನ್ನು ರಚಿಸಬೇಕೆಂಬ ಪ್ರತಿಪಕ್ಷಗಳ ಬೇಡಿಕೆಯನ್ನು ಒಪ್ಪಲು ನಿರಾಕರಿಸಿದ ಯುಪಿಎ-2 ಸರಕಾರದ ಮೊಂಡುತನದಿಂದಾಗಿ ಸಂಸತ್ತಿನ 2010ರ ಚಳಿಗಾಲದ ಅಧಿವೇಶನ ಇಡಿಯಾಗಿ ವ್ಯರ್ಥಗೊಂಡುದರಿಂದ, ಭ್ರಷ್ಟಾಚಾರವನ್ನು ಮೆಟ್ಟಿ ಹಾಕುವಲ್ಲಿ ಸಂಸತ್ತು ಎಷ್ಟು ಪರಿಣಾಮಕಾರಿಯಾಗಬಹುದು ಎಂಬ



ಬಗ್ಗೆ ಜನರ ವಿಶ್ವಾಸ ಇನ್ನಷ್ಟು ಶಿಥಿಲಗೊಂಡಿತು. ಇದರ ವಿರುದ್ಧ ಎದ್ದ ಸಾರ್ವಜನಿಕ ಕೂಗು ಅಂತಿಮವಾಗಿ ಯುಪಿಎ-2 ಸರಕಾರ ಹಿಂದಿನ ಸರಕಾರ ಮಂಡಿಸಿದ ಕರಡು ಶಾಸನವನ್ನು ಮುಂದಿಡುವತ್ತ ಸಾಗುವಂತೆ ಒತ್ತಡ ತಂದಿತು.

ಅಂತಿಮ ಸ್ವರೂಪದತ್ತ

ಈಗ ಸಂಸದೀಯ ಸ್ಥಾಯಿ ಸಮಿತಿ ತನ್ನ ಕಲಾಪಗಳನ್ನು ಪೂರ್ಣಗೊಳಿಸಿದ್ದು ಈ ಶಾಸನ ಒಂದು ಅಂತಿಮ ರೂಪ ಪಡೆಯುವತ್ತ ಬರುತ್ತಿದೆ. ಸರ್ವಪಕ್ಷ ಸಭೆಯನ್ನು ಈ ಹಿನ್ನೆಲೆಯಲ್ಲಿ ಕರೆಯಲಾಯಿತು. ಸ್ಥಾಯಿ ಸಮಿತಿಯಲ್ಲಿದ್ದ ಸಿಪಿಐ(ಎಂ) ಸದಸ್ಯರು ಒಂದು ಭಿನ್ನಮತದ ಟಿಪ್ಪಣಿ ಸಲ್ಲಿಸಿದ್ದು, ಅದರಲ್ಲಿ, ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಲೋಕಪಾಲ ಒಂದು ಪರಿಣಾಮಕಾರಿ ಸಂಸ್ಥೆಯಾಗುವಂತೆ ಮಾಡಲು ಸೇರಿಸಬೇಕಾದ ವಿವಿಧ ಕ್ರಮಗಳನ್ನು ನಮೂದಿಸಲಾಗಿದೆ. ಈ ಭಿನ್ನಮತದ ಟಿಪ್ಪಣಿಯಲ್ಲಿರುವ ಅಂಶಗಳಲ್ಲದೆ, ಕೇಂದ್ರ ಸಂಪುಟ ಸಂಸತ್ತಿನ ಮುಂದೆ ತರಲಿರುವ ಹೊಸ ಶಾಸನದಲ್ಲಿ ಈ ಕೆಳಗಿನ ಪ್ರಸ್ತಾವಗಳನ್ನು ಸೇರಿಸುವ ಬಗ್ಗೆ ಪರಿಶೀಲಿಸಬೇಕು ಎಂದು ಸಿಪಿಐ(ಎಂ) ತಿಳಿಸಿತ್ತು:

1. ಪ್ರಧಾನ ಮಂತ್ರಿಗಳನ್ನು ಲೋಕಪಾಲದ ವ್ಯಾಪ್ತಿಯೊಳಗೆ ತರಬೇಕು ಎಂಬುದರ ಬಗ್ಗೆ ಸಾರ್ವತ್ರಿಕ ಒಮ್ಮತ ಇರುವಂತೆ ಕಾಣ ಬಂದರೂ ಇದರ ದುರುಪಯೋಗವಾಗದಂತೆ ನೋಡಿಕೊಳ್ಳುವ ‘ರಕ್ಷಣೋಪಾಯ’ಗಳನ್ನು ಕುರಿತಂತೆ ಹಲವು ಪ್ರಸ್ತಾವಗಳನ್ನು ಮುಂದಿಡಲಾಗಿದೆ-ಉದಾ: ರಾಷ್ಟ್ರೀಯ ಭದ್ರತೆ, ವಿದೇಶಾಂಗ ನೀತಿ ಇತ್ಯಾದಿ ಯಾವ ವಿಷಯಗಳನ್ನು ಹೊರಗಿಡಬೇಕು ಎಂಬ ಪ್ರಸ್ತಾವಗಳು ಮತ್ತು ಪ್ರಧಾನ ಮಂತ್ರಿಗಳ ಮೇಲಿನ ಆಪಾದನೆಗಳನ್ನು ಪರಿಶೀಲಿಸಲು ಇಡೀ ಲೋಕಪಾಲ ಪೀಠ ಕುಳಿತುಕೊಳ್ಳಬೇಕು ಎಂಬಿತ್ಯಾದಿ ವಿಧಾನಗಳನ್ನು ಕುರಿತ ಪ್ರಸ್ತಾವಗಳು. ಪ್ರಧಾನ ಮಂತ್ರಿಗಳು ಲೋಕಪಾಲದ ವ್ಯಾಪ್ತಿಗೆ ಬರಬೇಕು ಎಂಬ ತನ್ನ ನಿಲುವನ್ನು ಸಿಪಿಐ(ಎಂ) ಪುನರುಚ್ಚರಿಸಿದೆ. ಸರಕಾರ ಈ ‘ರಕ್ಷಣೋಪಾಯ’ಗಳನ್ನು ಕುರಿತಂತೆ ನಿರ್ದಿಷ್ಟ ಸೂಚನೆಗಳನ್ನು ಮುಂದಿಡಬೇಕು. ಅಗ ಮಾತ್ರವೇ ಅವುಗಳ ಮೇಲೆ ನಿರ್ದಿಷ್ಟ ಅಭಿಪ್ರಾಯಗಳನ್ನು ರೂಪಿಸಲು ಸಾಧ್ಯ. ಏನೇ ಆಗಲಿ, ವಾಣಿಜ್ಯ ವ್ಯವಹಾರಗಳಲ್ಲಿ ಪ್ರಧಾನ ಮಂತ್ರಿಗಳ ಕಚೇರಿ ಸಂದೇಹ ಹುಟ್ಟಿಸುವ ರೀತಿಯಲ್ಲಿ ತೊಡಗಿದ್ದರೆ ಅಂತವುಗಳನ್ನು ಲೋಕಪಾಲದ ವ್ಯಾಪ್ತಿಯ ಹೊರಗಿಡಬಾರದು.

2. ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ನಿಗ್ರಹಿಸಲು, ನ್ಯಾಯಾಂಗದಲ್ಲಿನ ನೇಮಕಗಳು, ವರ್ಗಾವಣೆಗಳು ಮತ್ತು ಭ್ರಷ್ಟಾಚಾರದ ಆಪಾದನೆಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ನೋಡಿಕೊಳ್ಳಲು ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ರಚಿಸಬೇಕೆಂಬ ಬೇಡಿಕೆಯನ್ನು ಕೂಡ ಸಿಪಿಐ(ಎಂ) ಪುನರುಚ್ಚರಿಸಿದೆ.

3. ಚುನಾವಣೆಗಳ ಸಮಯದಲ್ಲಿ ಹಣಬಲದ ಉಪಯೋಗದ ನಿರ್ಮೂಲನೆಯಲ್ಲದಿದ್ದರೂ, ಅದನ್ನು ಬಹಳಷ್ಟು ಸೀಮಿತಗೊಳಿಸುವ ಗುರಿಯಿಂದ ಸೂಕ್ತ ಚುನಾವಣಾ ಸುಧಾರಣೆಗಳ ಬಗ್ಗೆ ಯೋಚಿಸದಿದ್ದರೆ, ನಮ್ಮ ದೇಶದಲ್ಲಿ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ನಿಗ್ರಹಿಸಲು ಸಾಧ್ಯವಾಗದು.

4. ಭ್ರಷ್ಟಾಚಾರಕ್ಕೆ ಬಲಿಯಾಗುವ ಜನಸಾಮಾನ್ಯರ ದೂರುಗಳ ಬಗ್ಗೆ ವ್ಯವಹರಿಸಲು ಒಂದು ಪ್ರತ್ಯೇಕವಾದ ಪರಿಣಾಮಕಾರಿ ದೂರು ನಿವಾರಣಾ ವ್ಯವಸ್ಥೆಯನ್ನು ಎಲ್ಲ ಹಂತಗಳಲ್ಲಿ ಸ್ಥಾಪಿಸಬೇಕು.

5. ಎಲ್ಲ ದರ್ಜೆಗಳ ಅಧಿಕಾರಿಗಳನ್ನು ಒಳಗೊಳ್ಳುವಂತೆ ಲೋಕಪಾಲದ ಅಧಿಕಾರಗಳನ್ನು ವಿಸ್ತರಿಸಬೇಕು. ಅದೇ ರೀತಿ, ರಾಜ್ಯಮಟ್ಟದ ಲೋಕಾಯುಕ್ತ ವ್ಯವಸ್ಥೆ ಕೂಡ ಎಲ್ಲ ದರ್ಜೆಗಳನ್ನು ಒಳಗೊಳ್ಳಬೇಕು. ಈ ಬಗ್ಗೆ ಒಂದು ಸಾರ್ವತ್ರಿಕ ಒಮ್ಮತ ಕಂಡು ಬಂದರೂ, ಇಷ್ಟೊಂದು ದೊಡ್ಡ ಸಂಖ್ಯೆಯ ಜನಗಳೊಂದಿಗೆ ವ್ಯವಹರಿಸಲು ಸೂಕ್ತ ವಿಧಿ-ವಿಧಾನಗಳನ್ನು ಸ್ಥಾಪಿಸುವ ಅಗತ್ಯವಿದೆ. ಇಲ್ಲಿಯೂ ಸರಕಾರ ‘ಸೂಕ್ತ ವ್ಯವಸ್ಥೆ’ ಕುರಿತಂತೆ ತನ್ನ ಪರಿಕಲ್ಪನೆಯನ್ನು ಮೂರ್ತರೂಪದಲ್ಲಿ ಮುಂದಿಡಬೇಕು ಎಂದು ಸಿಪಿಐ(ಎಂ) ಸೂಚಿಸಿದೆ. ಇದರ ಆಧಾರದಲ್ಲಿ ಅದನ್ನು ಉತ್ತಮಗೊಳಿಸುವ ಮತ್ತು ದಕ್ಷಗೊಳಿಸುವ ನಿರ್ದಿಷ್ಟ ಪ್ರಸ್ತಾವಗಳನ್ನು ಕೊಡಲು ಸಾಧ್ಯವಾಗುತ್ತದೆ.

6. ಲೋಕಪಾಲಕ್ಕೆ ತನ್ನದೇ ಸ್ವಂತ ತನಿಖಾ ವ್ಯವಸ್ಥೆ ಹೊಂದಲು ಅವಕಾಶ ಮಾಡಿಕೊಡಬೇಕು. ಭ್ರಷ್ಟಾಚಾರ ನಿರೋಧ ಕಾನೂನು ಅದರ ವ್ಯಾಪ್ತಿಯೊಳಗೇ ಬರಬೇಕು. ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿ ಸಿಬಿಐ ಯನ್ನು ಲೋಕಪಾಲದ ವ್ಯಾಪ್ತಿಯ ಅಡಿಯಲ್ಲಿ ಇಡಬೇಕು, ಇಲ್ಲವೇ ಅದಕ್ಕಾಗಿ ಒಂದು ಸ್ವತಂತ್ರ ತನಿಖಾ ಸಂಸ್ಥೆಯನ್ನು ನಿರ್ಮಿಸಬೇಕು. ಏನೇ ಆಗಲಿ, ಒಂದು ಪರಿಣಾಮಕಾರಿ ತನಿಖಾ ಸಂಸ್ಥೆ ಅಥವ ವ್ಯವಸ್ಥೆಯಿಲ್ಲದೆ ಲೋಕಪಾಲ ಸರಿಯಾಗಿ ಕೆಲಸ ಮಾಡದಂತೆ ಆಗಬಾರದು.

7. ಯಾವುದೇ ಸಂದರ್ಭದಲ್ಲಿ, ಸಿಬಿಐ ನಿರ್ದೇಶಕರನ್ನು ಒಂದು ಒಪ್ಪಿತ ಸ್ವತಂತ್ರ ಆಯ್ಕೆ ಸಮಿತಿ ಆಯ್ಕೆ ಮಾಡಬೇಕು. ಲೋಕಪಾಲದ ಅಧ್ಯಕ್ಷರು ಮತ್ತು ಇತರ ಸದಸ್ಯರ ಆಯ್ಕೆಗೂ ಇಂತಹ ಆಯ್ಕೆ ಸಮಿತಿಯನ್ನು ರಚಿಸಬೇಕು. ಲೋಕಪಾಲದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಬುಡಕಟ್ಟು/ಇತರ ಹಿಂದುಳಿದ ವರ್ಗಗಳು/

ಪುಟ 14ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಉಳ್ಳವರ ಬೆಂಗಳೂರಿನಲ್ಲಿ ನಲುಗುತ್ತಿರುವ ದುಡಿಯುವ ಜನರ ಬದುಕು

ಪ್ರತಿರೋಧ ಒಡ್ಡಲು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮ್ಮೇಳನ ನಿರ್ಧಾರ

ಸಿಪಿಐ(ಎಂ) 20ನೇ ಬೆಂಗಳೂರು ಜಿಲ್ಲಾ ಸಮ್ಮೇಳನವು ಡಿಸೆಂಬರ್ 4,5,6 – 2011 ರಂದು ರಾಜಾಜಿನಗರದ ರಾಜಕುಮಾರ್ ಕಲಾಕ್ಷೇತ್ರದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಮೂರು ದಿನಗಳ ಸಮ್ಮೇಳನದಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಜನರ ಸ್ಥಿತಿಗತಿ ಸಮಸ್ಯೆ ಸವಾಲುಗಳ ಕುರಿತು ಗಂಭೀರ ಚರ್ಚೆಗಳನ್ನು ನಡೆಸಲಾಗಿದೆ. ಬೆಂಗಳೂರನ್ನು ಉಳ್ಳವರ ನಗರವನ್ನಾಗಿ ಮಾರ್ಪಡಿಸುತ್ತಿರುವ ಸಂದರ್ಭದಲ್ಲಿ ನಡೆದ ಈ ಸಮ್ಮೇಳನ ಬೆಂಗಳೂರಿನ ಚಿತ್ರವನ್ನು ಸಮಗ್ರವಾಗಿ ತೆರೆದಿಟ್ಟಿದೆ ಮತ್ತು ಜನಪರ ಪರ್ಯಾಯದ ಹಾದಿಯನ್ನು ಜನತೆಯ ಮುಂದಿಟ್ಟಿದೆ.

2011ರ ಜನಗಣತಿ ಪ್ರಕಾರ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲೆ ಸೇರಿ 1.16 ಕೋಟಿ ಜನಸಂಖ್ಯೆ ಇದೆ. ರಾಜ್ಯದ 18.98 ಶೇಕಡ ಜನಸಂಖ್ಯೆ ಇದೆ. ಬೆಂಗಳೂರು ನಗರ ಜಿಲ್ಲೆಯಲ್ಲಿಯೆ 15.7 ಶೇಕಡ ಜನಸಂಖ್ಯೆಯಿದೆ. ರಾಜ್ಯದಲ್ಲಿನ ಪ್ರತಿ 6 ಜನರಲ್ಲಿ ಒಬ್ಬರು ಬೆಂಗಳೂರು ನಗರ ಜಿಲ್ಲೆಯಲ್ಲಿದ್ದಾರೆ. ಪ್ರತಿ ಚದರ ಕಿ.ಮಿ ವ್ಯಾಪ್ತಿಯಲ್ಲಿ ರಾಜ್ಯದಲ್ಲಿ 319 ಜನ ವಾಸವಿದ್ದರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ 4378 ಜನ ವಾಸವಿದ್ದಾರೆ. ಕಳೆದ ಒಂದು ದಶಕದಲ್ಲಿ ಜನ ಸಾಂದ್ರತೆಯು 47 ಶೇಕಡ ಬೆಳೆವಣಿಗೆಯನ್ನು ಕಂಡಿದೆ. ರಾಜ್ಯದ ಸರಾಸರಿ ಲಿಂಗಾನುಪಾತ 968 ಆಗಿರುವಾಗ ಬೆಂಗಳೂರು ನಗರ ಜಿಲ್ಲೆಯದು 908 ರಲ್ಲಿಯೆ ಸ್ಥಗಿತವಾಗಿದೆ. ಬೆಂಗಳೂರು ನಗರ ಜಿಲ್ಲೆಯ 2190 ಚದರ ಕಿ.ಮಿ ವಿಸ್ತೀರ್ಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು



ಸುಮಾರು 800 ಚದರ ಕಿ.ಮಿ ವಿಸ್ತೀರ್ಣಹೊಂದಿದೆ. ಈ ಜನಸಂಖ್ಯೆಯ ಬೆಳೆವಣಿಗೆಗೆ ಪ್ರಮುಖವಾಗಿ ಉದ್ಯೋಗ ಅರಸಿ ಬರುತ್ತಿರುವ ವಲಸೆ ಕಾರಣವಾಗಿದೆ. ವಾರ್ಷಿಕ ತಲಾ ಆದಾಯ ಬೆಂಗಳೂರು ನಗರ ಜಿಲ್ಲೆಯಲ್ಲಿ ರೂ.74709 ಆಗಿದೆ. 2006–07 ರಲ್ಲಿ 4.5 ಕೋಟಿ ರೂಪಾಯಿಗೂ ಹೆಚ್ಚು ಹೂಡಿಕೆ ಮಾಡಬಹುದಾದ ಮಿಗುತಾಯ ಹೊಂದಿದ್ದ ಹತ್ತು ಸಾವಿರ (ಡಾಲರ ಮಿಲಿಯಾಧಿಪತಿ) ಕೋಟ್ಯಾಧಿಪತಿಗಳನ್ನು ನಗರ ಹೊಂದಿದೆ.

25 ಲಕ್ಷಕ್ಕೂ ಹೆಚ್ಚು ಅಸಂಘಟಿತ ಕಾರ್ಮಿಕರನ್ನು ಹೊಂದಿರುವ ಈ ಪ್ರದೇಶದಲ್ಲಿನ ಅವರ ಆದಾಯ ರೂ.2500 ರಿಂದ ರೂ.5 ಅಥವ 6 ಸಾವಿರದವರೆಗೆ ಇದೆ. ನಗರದಲ್ಲಿನ ಪ್ರತಿ 3 ಜನರಲ್ಲಿ ಒಬ್ಬರು ಸ್ಲಂಗಳಲ್ಲಿ ವಾಸಿಸುತ್ತಿದ್ದಾರೆ. ಇಂದಿಗೂ ಪಡಿತರಕ್ಕಾಗಿ, ಸರ್ಕಾರಿ ಆರೋಗ್ಯ–ಶಿಕ್ಷಣ–ಸಾಮಾಜಿಕ ಕಲ್ಯಾಣ ಸೇವೆಗಳಿಗಾಗಿ ಸಾಲು ನಿಲ್ಲುವ ಲಕ್ಷಾಂತರ ದುಡಿಯುವ ಬಡ ಜನತೆಯ ಚಿತ್ರಣ ಇದಕ್ಕೆ ಪುಷ್ಟಿ ನೀಡಿದೆ.



ಬಹುರಾಷ್ಟ್ರೀಯ ಬಂಡವಾಳದ ನೆಲೆ ಬೆಂಗಳೂರು ನಗರದಲ್ಲಿ ಬಲಗೊಳ್ಳುತ್ತಿದೆ. IT/BT, BPO ಕಂಪನಿಗಳು, ಸೇವಾ ರಂಗದ ಉದ್ದಿಮೆಗಳು, ಆರೋಗ್ಯ ಕೇಂದ್ರಿತ ಆರೋಗ್ಯ ಪ್ರವಾಸೋದ್ಯಮ, ಉತ್ಪಾದನ ವಲಯ, ಗಾರ್ಮೆಂಟ್ಸ್, ಮತ್ತಿತರೆ ಸಣ್ಣ–ಮಧ್ಯಮ ಪ್ರಮಾಣದ ಉದ್ದಿಮೆಗಳ ವ್ಯಾಪಕತೆ ಹೆಚ್ಚುತ್ತಿದೆ.

ವಿಶ್ವ ಬಂಡವಾಳಗಾರರ ಸಮಾವೇಶದ



ಮೂಲಕ ಹೂಡಲು ಉದ್ದೇಶಿಸಲಾಗಿರುವ ರೂ.4.5 ಲಕ್ಷ ಕೋಟಿ ಬಂಡವಾಳದ ಬಹುತೇಕ ಭಾಗವು ಬೆಂಗಳೂರು ಕೇಂದ್ರಿತವಾಗಿದೆ. ನಗರ ಭಾಗದಲ್ಲಿದ್ದ ಕೈಗಾರಿಕೆಗಳಿಗೆ ಹೊರ ವಲಯ, ಜಿಲ್ಲೆಗಳಲ್ಲಿ ಸ್ಥಳಾವಕಾಶ ನೀಡಿ ಕೈಗಾರಿಕೆಗಳ ಸ್ಥಳಾವಕಾಶವನ್ನು ಹೊಸ ಬಂಡವಾಳ ಹೂಡಿಕೆ ಎಂದು ಬಿಂಬಿಸಲು ಸರ್ಕಾರ ಯತ್ನಿಸಿದೆ. ಇದನ್ನೆ ಬಳಸಿ ಮಾಲೀಕರು ತಮ್ಮ ಕಾರ್ಖಾನೆಗಳನ್ನು ಸ್ಥಳಾಂತರಿಸಿ ಅವರ ಕಾರ್ಖಾನೆಗಳಿದ್ದ ಭೂಮಿಯನ್ನು ಅಪಾರ್ಟ್‌ಮೆಂಟ್, ಮಾಲ್‌ಗಳ ನಿರ್ಮಾಣಕ್ಕೆ ಬಳಸಿ ಅಪಾರ ಹಣಗಳಿಸಲು ಮುಂದಾಗುತ್ತಿದ್ದಾರೆ.

ಬೆಂಗಳೂರಿನಲ್ಲೂ ಕಾರ್ಖಾನೆಗಳು ಹೆಚ್ಚುತ್ತಿದ್ದರು ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಗುತ್ತಿಗೆ, ಅರೆಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಸಂಘಟಿತ ವಲಯದೊಳಗೆ ಅಸಂಘಟಿತ ವಲಯದ ಕಾರ್ಮಿಕರು ಹೆಚ್ಚುತ್ತಿರುವುದರ ಸೂಚಕ ಇದಾಗಿದೆ.

ನಗರ ಜಿಲ್ಲೆಯ ಶೇ.9.06 ಜನಸಂಖ್ಯೆ ಮಾತ್ರ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದೆ, ಹೆಚ್ಚುತ್ತಿರುವ ರಿಯಲ್ ಎಸ್ಟೇಟ್ ಉದ್ದಿಮೆ ಪರಿಣಾಮದಿಂದಾಗಿ ಕೃಷಿ ಚಟುವಟಿಕೆ ಸೀಮಿತಗೊಳ್ಳುತ್ತಿದೆ. ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲೂ ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಪ್ರಶ್ನೆ, ವಿವಿಧ ಅಭಿವೃದ್ಧಿ ಕಾಮಗಾರಿಗಳು, ಟೌನ್‌ಶಿಪ್‌ಗಳು, ಕೈಗಾರಿಕಾ ಅಭಿವೃದ್ಧಿಗಾಗಿನ ರೈತನ ಭೂಮಿ ವಶಪಡಿಸಿಕೊಳ್ಳುವಿಕೆ ರೈತರಲ್ಲಿ ಅಸಮಾದಾನ, ಪ್ರತಿರೋಧಗಳನ್ನು ನಿರ್ಮಿಸುತ್ತಿವೆ. ರೇಷ್ಮೆ ಬೆಲೆ ಕುಸಿತ, ಅರಣ್ಯ ಭೂಮಿ ಉಳುಮೆಗಾರರನನ್ನು ತೆರೆವುಗೊಳಿಸುವ ಅಂಶಗಳು, ಅತಿಕ್ರಮಣ ಹೆಸರಿನಲ್ಲಿ ಕೇಸುಗಳ ದಾಖಲೆ ಮಾಡುವುದು ನಡೆದಿದೆ. ರಾಷ್ಟ್ರದಿಂದ ರಫ್ತಾಗುವ ರೋಜಾ ಹೂವುಗಳಲ್ಲಿ ಬೆಂಗಳೂರಿನ ಮೂಲದಿಂದ ಶೇಕಡ 70ರಷ್ಟು ಹೂವುಗಳು ರಫ್ತಾಗುತ್ತಿವೆ. ಪರಿಣಾಮವಾಗಿ ಬೆಂಗಳೂರು ರಾಷ್ಟ್ರದ ಪುಷ್ಪೋದ್ಯಮ ವ್ಯಾಪಾರದ ರಾಜಧಾನಿಯಾಗಿದೆ. ರಾಷ್ಟ್ರದ 3500ಕೋಟಿ



ವಹಿವಾಟಿನ ರೇಷ್ಮೆ ಉದ್ಯಮದ ಶೇಕಡ 70 ರಷ್ಟು ಉದ್ಯಮವು ಬೆಂಗಳೂರು ಕೇಂದ್ರಿತವಾಗಿದೆ.

ಸರ್ಕಾರಿ ಮತ್ತು BBMP ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಿತಿ ಮತ್ತು ಸೀಮಿತತೆಗಳ ಪರಿಣಾಮವಾಗಿ ಜನತೆಯು ಖಾಸಗಿ ಆಸ್ಪತ್ರೆ ನರ್ಸಿಂಗ್ ಹೋಂಗಳ ದುಬಾರಿ ಆರೋಗ್ಯ ಸೇವೆಗಳಿಗೆ ಬಲಿಯಾಗುತ್ತಿದ್ದಾರೆ. ಡೆಂಗ್ಯು, ಚಿಕನ್ ಗುನ್ಯಾ, ಮುಂತಾದ ಸಾಂಕ್ರಾಮಿಕ ರೋಗಗಳೂ ಈ ನಡುವೆ ತೀವ್ರವಾಗಿ ಹೆಚ್ಚುತ್ತಿವೆ. ಬಡ ಜನತೆಯು ಆರೋಗ್ಯ ಪ್ರಶ್ನೆಗಳಿಗೆ ಪರಿಹಾರವಿಲ್ಲದೆ ಸಾವಿಗೆ ಶರಣಾಗುವುದೊಂದೆ ದಾರಿ ಎಂಬಂತಹ ಪರಿಸ್ಥಿತಿಯನ್ನು ನಿರ್ಮಿಸಲಾಗುತ್ತಿದೆ.

BBMP -ಸರ್ಕಾರಿ ಶಾಲೆಗಳ ಗುಣಮಟ್ಟ ಸರ್ಕಾರಗಳ ನಿರ್ಲಕ್ಷ್ಯ ಜನತೆಯನ್ನು ಖಾಸಗಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಶಾಲೆಗಳತ್ತ ದೂಡುತ್ತಿದೆ. ಮಕ್ಕಳ ಸಂಖ್ಯೆ ಕಡಿಮೆ ಎಂಬ ಹೆಸರಿನಲ್ಲಿ ಸರ್ಕಾರಿ ಶಾಲೆ ಮುಚ್ಚುವ/ ಹತ್ತಿರದ ಶಾಲೆಯೊಂದಿಗೆ ವಿಲೀನಕ್ಕೆ ಮುಂದಾಗಿದೆ. ಖಾಸಗೀ ಪ್ರಾಥಮಿಕ ಪೂರ್ವ ಶಿಕ್ಷಣದಲ್ಲಿ ಅವೈಜ್ಞಾನಿಕ ಸುಲಿಗೆ ನಡೆದು ಅದೊಂದು ದಂಧೆಯಾಗಿ ಮಾರ್ಪಡುತ್ತಿದೆ.

ಪದವಿಗಳನ್ನು ಪ್ರಧಾನಮಾಡುವ ವಿಪ್ರೋ ಶಿಕ್ಷಣ ವಿಶ್ವವಿದ್ಯಾಲಯ ಮತ್ತು ಅಲೆಯನ್ಸ್ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಶಾಸನ ರೂಪಿಸಿ, ಅನುವುಗೊಳಿಸಿದೆ. ಅವುಗಳ ಕೋರ್ಸ್‌ಗಳು ಪ್ರಾರಂಭವಾಗಿವೆ. ಶಿಕ್ಷಣದಲ್ಲಿ ವಿದೇಶಿ ನೇರ ಬಂಡವಾಳ, ಖಾಸಗಿ ವಿವಿಗಳು, ವಿದೇಶಿ ವಿವಿಗಳು, ಮತ್ತು ಉದ್ಯಮವಾಗಿ ರೂಪಿತವಾಗುತ್ತಿರುವ ಶಿಕ್ಷಣಕ್ಕೆ ಅಗತ್ಯ ಮಾನವ ಸಂಪನ್ಮೂಲವನ್ನು ಈ ವಿವಿಗಳು ಒದಗಿಸಲಿವೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಭಿಗೆ ಮಣಿದಿರುವ ಸರ್ಕಾರವು COMED-K ಯೊಂದಿಗೆ ಪ್ರತಿ ವರ್ಷ ಒಪ್ಪಂದ ಮಾಡಿಕೊಳ್ಳುತ್ತಿದೆ. ಇಂಜಿನಿಯರಿಂಗ್, ವೈದ್ಯಕೀಯ, ಸ್ನಾತಕೋತ್ತರ ಶಿಕ್ಷಣ ಸೀಟು ಕಾಳಸಂತೆ ಮಾರಾಟ ಮಾಫಿಯಾ ಕೈವಾಡಗಳು, ಅಪರಾಧಗಳು ಬೆಳಕಿಗೆ ಬರುತ್ತಿವೆ. ಪ್ರತಿಷ್ಠಿತ ಕಾಲೇಜು ಸೀಟು ಮಾರಾಟ ದಂಧೆಗಳು ಪ್ರಕಟಗೊಳ್ಳುತ್ತಿವೆ.

ಬೀದಿನಾಯಿ ಕಚ್ಚಿ ಮಕ್ಕಳ ಸಾವು, ಒಂಟಿ ಮಹಿಳೆ ಸಾವು, ಕೊಲೆ ಸುಲಿಗೆ, ಅಪರಾಧಗಳು, ಕಳ್ಳತನ, ಡಕಾಯತಿ, ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಆತ್ಮಹತ್ಯೆ, ಗ್ಯಾಂಗ್‌ವಾರ್‌ಗಳು ಹೆಚ್ಚುತ್ತಿವೆ. ಬೆಂಗಳೂರು ನಗರವು ರಾಷ್ಟ್ರದಲ್ಲೆ ಅತಿ ಹೆಚ್ಚು ಆತ್ಮಹತ್ಯೆಗಳ ಪ್ರಮಾಣವನ್ನು ಕಾಯ್ದುಕೊಳ್ಳುವ ಮೂಲಕ "ಆತ್ಮಹತ್ಯೆಗಳ ನಗರ" ಆಗಿ ಮಾರ್ಪಟ್ಟಿದೆ. ಸ್ತ್ರೀ ಭ್ರೂಣ ಹತ್ಯೆಗಳು ವ್ಯಾಪಕವಾಗಿ ನಡೆಯುತ್ತಿವೆ.

ಸರ್ಕಾರದ ಜನ ವಿರೋಧಿ ನೀತಿಗಳನ್ನು ಮರೆಮಾಚಲು, ಕೋಮು ವಿಭಜನೆ ತಂದು ತನ್ನ ಹಿಂದುತ್ವ ಸಿದ್ಧಾಂತ ಮುಂದುವರಿಸಲು, ರಾಜ್ಯಾದ್ಯಂತ ನಡೆದಿರುವ ದಾಳಿಗಳ ಭಾಗವಾಗಿ ಬೆಂಗಳೂರಿನಲ್ಲೂ ಚರ್ಚ್‌ಗಳ ಮೇಲೆ ದಾಳಿ ನಡೆದಿವೆ.

ಬೆಂಗಳೂರು ಪ್ರಪಂಚದಲ್ಲೆ ಅತಿ ಹೆಚ್ಚು ಕಛೇರಿ ಸ್ಥಳದ ಬೇಡಿಕೆ ಇರುವ ಮೂರನೇ ನಗರವಾಗಿದೆ. ಇಡೀ ಭಾರತದಲ್ಲಿ ಶೇ 60 ರಷ್ಟು ಕಛೇರಿ ಜಾಗ ಬೆಂಗಳೂರು, ಚೆನ್ನೈ, ಹೈದಾರಾಬಾದ್ ನಗರಗಳದ್ದಾದರೆ, ಬೆಂಗಳೂರು ನಗರ 2006ರಲ್ಲಿ 1.12 ಕೋಟಿ ಚದರ ಅಡಿಗಳ ಜಾಗದ ಬೇಡಿಕೆ ಹೊಂದಿದೆ. ಇದರಿಂದಾಗಿ ಭೂಮಿಯ ಬೇಡಿಕೆ ವಿಪರೀತ ಹೆಚ್ಚಾಗಿದೆ.

ಬೆಂಗಳೂರು ದುಬಾರಿ ಬಾಡಿಗೆ ನಗರವಾಗಿ ಹೊರ ಹೊಮ್ಮುತ್ತಿದೆ. ದುಬಾರಿ ಬಾಡಿಗೆಗಳ ಫಲವಾಗಿ ನಗರದಿಂದ ದೂರ ನಗರದಾಚೆಗೆ ವಸತಿ ಹುಡುಕಿಹೋಗುವ ಪ್ರವೃತ್ತಿಯನ್ನು ನೋಡಬಹುದು. ಪರಿಣಾಮವಾಗಿ ಕೆಲಸಕ್ಕಾಗಿ ದೂರದಿಂದ ಬರುವವರ ಸಂಖ್ಯೆ ಹೆಚ್ಚುತ್ತಿದೆ.

ಮೌಲ್ಯಾಧಾರಿತ ತೆರಿಗೆ ಪದ್ಧತಿ (CVS) ಮತ್ತು ಅಕ್ರಮ-ಸಕ್ರಮ ಜಾರಿಗೊಳಿಸಲು ಸುಗ್ರೀವಾಜ್ಞೆ ಹೊರಡಿಸಿ, ನಂತರ ಶಾಸನ ರೂಪಿಸಿದೆ. ಅದರ ಆಧಾರದಲ್ಲಿ ಬಾಡಿಗೆಯ ಶೇ.20 ರಷ್ಟನ್ನು ತೆರಿಗೆಯಾಗಿ ವಾರ್ಷಿಕ ಹೆಚ್ಚಳ ಮಾಡಲು ನಿಗದಿಪಡಿಸಲಾಗಿದೆ. ನೂತನ ಶಾಸನದಿಂದ ಆಗಲೆ ದುಬಾರಿಯಾಗಿದ್ದ ಮನೆ ಬಾಡಿಗೆಗಳು ಮತ್ತಷ್ಟು ದುಬಾರಿಯಾಗಿವೆ.

ಪೆಟ್ರೋಲ್-ಡೀಸೆಲ್ ದರ ಏರಿಕೆ ನೆಪದಲ್ಲಿ



ಬಸ್ ದರ, ಬಸ್ ಪಾಸ್ ದರ ಏರಿಸಿದೆ. ಇದುವರೆಗೆ ಪ್ರತಿ ವರ್ಷ ನೂರಾರು ಕೋಟಿ ಲಾಭ ಮಾಡುತ್ತಿರುವ BMTCಯನ್ನು ಖಾಸಗೀಕರಣ ಮಾಡುವ ತನ್ನ ಬಚ್ಚಿಟ್ಟ ಅಜೆಂಡಾವನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಹವಣಿಸಿದೆ.

ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಲಾಗದ BWSSB ಕುಡಿಯುವ ನೀರಿನ ದರಗಳನ್ನು ಹೆಚ್ಚಿಸಿದೆ. ಪ್ರತಿ ನಿತ್ಯ 120 ಕೋಟಿ ಲೀಟರ್ ನೀರು ಬೆಂಗಳೂರು ನಗರಕ್ಕೆ ಬೇಕಾಗುತ್ತದೆ. ಆದರೆ ಈ ಪ್ರಮಾಣದ ಮೂರನೇ ಒಂದು ಭಾಗದಷ್ಟು ನೀರನ್ನು ಒಬ್ಬರಿಗೆ ಹಂಚಲು ಸಹಾ ಸಾಧ್ಯವಾಗುತ್ತಿಲ್ಲ. ಪ್ರಸ್ತುತ ಬೆಂಗಳೂರಿಗೆ ಸರಬರಾಜಾಗುತ್ತಿರುವ ನೀರಿನ ಪ್ರಮಾಣ 9.60 ಕೋಟಿ ಲೀಟರ್. ನೀರಿನ ಮಾರಾಟ ದಂದೆಯೂ ವ್ಯಾಪಕವಾಗಿ ನಡೆದಿವೆ. ಅಂತರ ಜಲವು ಸಹಾ ಬತ್ತಲಾರಂಭಿಸಿದೆ. ಒಂದು ಕಾಲದಲ್ಲಿ "ಕೆರೆಗಳ ನಗರ" ದ ಖ್ಯಾತಿಗೆ ಪಾತ್ರವಾಗಿದ್ದ ನಗರದಲ್ಲಿ ಕೆರೆಗಳೇ ಇಲ್ಲವಾಗುತ್ತಿದೆ.

ವಿದ್ಯುತ್ ಸಮಸ್ಯೆ ತೀವ್ರವಾಗಿದ್ದು, ಪ್ರೈವೆಟ್-ಪಬ್ಲಿಕ್ ಪಾಲುದಾರಿಕೆ PPP ಮೂಲಕ ಪೂನಾ ಮಾದರಿಯಲ್ಲಿ ಪರಿಹಾರಕ್ಕೆ ಯತ್ನಿಸಲಾಗುತ್ತಿದೆ. ಆ ಮೂಲಕ ಸ್ವಂತ ವಿದ್ಯುತ್ ತಯಾರಿಸುವ ಕೈಗಾರಿಕೆಗಳಿಗೆ ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.7.00 ಸಬ್ಸಿಡಿ ನೀಡಲು ಅದಕ್ಕಾಗಿ ಇತರೆ ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್ ಮೇಲೆ 40 ಪೈಸೆ ಹೆಚ್ಚುವರಿ ಬೆಲೆ ವಸೂಲಿಗೆ ಚಿಂತನೆ ನಡೆದಿದೆ. 24 ಗಂಟೆಗಳ ಉತ್ತಮ ಗುಣ ಮಟ್ಟದ ವಿಧ್ಯುತ್‌ನ ಭರವಸೆ ನೀಡಿದ್ದ ಬಿಜೆಪಿ ಸರ್ಕಾರ "ವಿಧ್ಯುತ್ ರಜೆ" ನೀಡಲು ಮುಂದಾಗಿದೆ.

ಭೂ ಮಾಫಿಯಾ-ಅಧಿಕಾರಿಗಳು ಮತ್ತು ಆಳುವ ಅಧಿಕಾರಸ್ಥರ ದುಷ್ಟಕೂಟಗಳು ಆಡಳಿತವನ್ನು ಬಳಸಿ ಸ್ಲಂ ಜನತೆಯನ್ನು ಒಕ್ಕಲೆಬ್ಬಿಸುವ, ನಗರ ವ್ಯಾಪ್ತಿಯಿಂದ ಹೊರ ದೂಡುವ ಕೆಲಸಗಳು ನಡೆದಿವೆ. ರಾತ್ರೋರಾತ್ರಿ ಬೆಂಕಿ ಬೀಳುವ ಪ್ರಕರಣಗಳು ಹೆಚ್ಚಿವೆ. ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಕುಡಿಯುವ ನೀರು, ಆರೋಗ್ಯ, ಶಿಕ್ಷಣದ ಸೌಲಭ್ಯಗಳು ಇಲ್ಲದಾಗಿದೆ.

ಅಡುಗೆ ಅನಿಲ ಸಂಪರ್ಕಗಳಲ್ಲಿನ ಅಕ್ರಮ ಪತ್ತೆ ಹೆಸರಿನಲ್ಲಿ ವಿದ್ಯುತ್ ಬಿಲ್ ಮಾಹಿತಿ ಪಡೆಯಲು ಸರ್ಕಾರ ಮಾಡಿದ ಪ್ರಯತ್ನದಿಂದಾಗಿ ನಗರದ ಸಾವಿರಾರು ಅನಿಲ ಸಂಪರ್ಕ ಉಳ್ಳ ನಾಗರೀಕರಿಗೆ ಅನಗತ್ಯ ತೊಂದರೆ, ಕಿರುಕುಳ ನೀಡಲಾಗಿದೆ. ಅಡುಗೆ ಅನಿಲ ಸಂಪರ್ಕಉಳ್ಳ ಪಡಿತರ ಚೀಟಿ ಉಳ್ಳವರಿಗೆ, ಇದೀಗ ಸೀಮೆಎಣ್ಣೆ ನೀಡಿಕೆ ರದ್ದು ಪಡಿಸಿ, ಆದೇಶವನ್ನು ಸರ್ಕಾರ ಮಾಡಿದೆ. ಪರಿಣಾಮವಾಗಿ ಸಾವಿರಾರು ಜನ ಪಡಿತರ ಸೀಮೆಎಣ್ಣೆ ಇಲ್ಲದೆ ವಂಚಿಸಲ್ಪಟ್ಟಿದ್ದಾರೆ. ಪಡಿತರ ಚೀಟಿಗಾಗಿ ಪೋಟೋ ತೆಗೆಸುವ, ತಾತ್ಕಾಲಿಕ ಪಡಿತರ ನೀಡುವ ಗಿಮಿಕ್‌ಗಳನ್ನು BBMP ಚುನಾವಣೆಗಳ ಮುನ್ನ ನಡೆಸಿದ ಸರ್ಕಾರ ಇದೀಗ ಅದನ್ನು ಮರೆತು ಕುಳಿತಿದೆ.

ದಿನದ ಕೆಲಸದ ಅವಧಿಯನ್ನು ಹತ್ತು ಗಂಟೆಗೆ ಹೆಚ್ಚಿಸಲು ಕಾರ್ಖಾನೆ ಕಾಯ್ದೆಗೆ



ತಿದ್ದುಪಡಿಯನ್ನು ಶಾಸನ ಸಭೆಯಲ್ಲಿ ಸರ್ಕಾರ ಮಂಡಿಸಿ ಅಂಗೀಕರಿಸಿದೆ. 5 ದಿನಕ್ಕೂ ಹೆಚ್ಚು ಗೈರು ಹಾಜರಾಗುವ ಕಾರ್ಮಿಕರನ್ನು ನೋಟಿಸ್ ನೀಡದೆ ವಜಾಗೊಳಿಸಲು, ಮತ್ತು ಕಡಿಮೆ ವೇತನ ನಿಗದಿಗೆ ಅನುವುಗೊಳಿಸಿದೆ.

ಬೀಡಿ ಕಾರ್ಮಿಕರಿಗೆ ಅಧಿಸೂಚಿಸಿದ ಕನಿಷ್ಠ ವೇತನ ಕಡಿಮೆ ಮಾಡುವ, ಅಗರಬತ್ತಿ ಕಾರ್ಮಿಕರಿಗೆ ಮೂಲ ವೇತನವನ್ನೆ ಕಡಿಮೆ ಮಾಡುವ, ಮತ್ತು ಗಾರ್ಮೆಂಟ್ಸ್ ಕಾರ್ಮಿಕರಿಗೆ ತುಟ್ಟಿಭತ್ಯೆ ಕಡಿತ ಮಾಡುವ ಕ್ರಮಗಳನ್ನು ಮಾಲೀಕರಿಗೆ ಅನುಕೂಲಕರ ವಾಗುವಂತೆ ನಿಗದಿ ಮಾಡಲು ರಾಜ್ಯ ಸರ್ಕಾರ ಕ್ರಮವಹಿಸಿದೆ.

ಜನ ವಿರೋಧಿಯಾದ ವಂತಿಗೆ ಆಧಾರಿತ ನೂತನ ಪಿಂಚಣಿ ಯೋಜನೆ (NPS-lite) ಜಾರಿಗೆ ಕ್ರಮವಹಿಸಿದೆ. ಅಕ್ರಮವಾಗಿ ಕೆಲಸ ನಿರಾಕರಿಸುವ, ಲೇಆಫ್, ರಿಟ್ರೆಂಚ್‌ಮೆಂಟ್ ನಡೆಸುವ, ಮುಚ್ಚುವ ಪ್ರವೃತ್ತಿ ಹೆಚ್ಚಿದೆ. ಯಾವುದೆ ನಿಯಂತ್ರಣವಿಲ್ಲದೆ ಗುತ್ತಿಗೆ ಕಾರ್ಮಿಕರನ್ನು ನೇಮಿಸಲು ಪರವಾನಗಿ ನೀಡಲಾಗುತ್ತಿದೆ.

BBMP ಯಲ್ಲಿ ರೂ.3500 ಕೋಟಿಯ ಹೆಚ್ಚುವರಿ ಕಾಮಗಾರಿಗಳಿಗೆ ಅನುಮತಿಸುವ ಅಕ್ರಮ ನಡೆದಿದೆ, ಒಂದೇ ವರ್ಕ್‌ಕೋಡ್ (ಕಾಮಗಾರಿ ಸಂಕೇತ) ಅಡಿ ಎರಡೆರಡು ಕಾಮಗಾರಿ ನಡೆದಿದ್ದು, ವರ್ಕ್‌ಕೋಡ್ ಹಗರಣವಾಗಿ ಹೊರಹೊಮ್ಮಿದೆ.

ಮಲ್ಲೇಶ್ವರಂ, ಗಾಂಧಿನಗರ, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಹುಕೋಟಿ ಬಿಬಿಎಮ್‌ಪಿ ಕಾಮಗಾರಿ 1539 ಕೋಟಿ ರೂ ಹಗರಣ ಬೆಳಕಿಗೆ ಬಂದಿದೆ, ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಇಂತಹ ಅಭಿವೃದ್ಧಿ ಹಗರಣಗಳ ಒಟ್ಟು ಪ್ರಮಾಣ ರೂ.5000ಕೋಟಿ ಮೀರಬಹುದೆಂಬ ಅಂದಾಜಿದೆ. ಈ ಎಲ್ಲಾ ಅಂಶಗಳ ಬಗ್ಗೆ ಬೆಂಗಳೂರು ಜಿಲ್ಲಾ ಸಮ್ಮೇಳನ ಚರ್ಚಿಸಿತು ಮತ್ತು ದುಡಿಯುವ ಜನರ ಸಂಘಟಿತ ಹೋರಾಟವನ್ನು ಬಲ ಗೊಳಿಸಲು ತೀರ್ಮಾನಿಸಿತು.

ಬಹಿರಂಗ ಸಭೆ :

ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಮಾತನಾಡಿ ಕೇಂದ್ರದ ಯುಪಿಎ ಸರ್ಕಾರ ತನ್ನ ಜನ ವಿರೋಧಿ ನೀತಿಗಳನ್ನು ಮುಂದುವರೆಸುತ್ತಿದ್ದು, ಬೆಲೆ ಏರಿಕೆ ಮತ್ತು ಭ್ರಷ್ಟಾಚಾರಕ್ಕೆ ಕುಖ್ಯಾತಿಗಳಿಸಿವೆ. ಮುಂಗಡ ವ್ಯಾಪಾರಕ್ಕೆ ಅವಕಾಶ ಮಾಡಿಕೊಟ್ಟು ಆಹಾರ ಪದಾರ್ಥಗಳು ಜನತೆಯ ಕೈಗೆಟುಕದ ಸ್ಥಿತಿಯನ್ನು ತಂದೊಡ್ಡಿದೆ. ಈ ಸದ್ಯ ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಬಂಡವಾಳಕ್ಕೆ ಅವಕಾಶ ಮಾಡಿಕೊಡಲು ತುದಿಗಾಲಿನಲ್ಲಿ ನಿಂತಿದೆ. ಇನ್ನೊಂದೆಡೆ ಉದಾರವಾದಿ ನೀತಿಗಳಿಗೆ ಮುನ್ನುಡಿ ಬರೆದ ಕಾಂಗ್ರೆಸ್, ಭ್ರಷ್ಟಾಚಾರಾದಲ್ಲಿ ಮುಳುಗಿದೆ. ಕಾರ್ಪೊರೇಟ್ ವಲಯ ಜನತೆಯ ಸಂಪತ್ತನ್ನು ಲೂಟಿ ಮಾಡಲು ಅವಕಾಶ ಮಾಡಿಕೊಟ್ಟು ತಾನೂ ಕೂಡ ಅದರಲ್ಲಿ ಪಾಲುದಾರನ್ನಾಗಿಸಿದೆ ಎಂದು ಹೇಳಿದರು.

ವೇದಿಕೆಯಲ್ಲಿದ್ದ ಸಿಪಿಐ(ಎಂ) ರಾಜ್ಯ

ಪುಟ 10ಕ್ಕೆ

ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮ್ಮೇಳನ

ಪುಟ 9 ರಿಂದ


ಕಾರ್ಯದರ್ಶಿ ಮಂಡಳಿ ಸದಸ್ಯರೂ ಹಾಗೂ ರೈತ ಮುಖಂಡರಾದ ಜಿ.ಸಿ.ಬಯ್ಯಾರೆಡ್ಡಿಯವರು ಮಾತನಾಡಿ ರಾಜ್ಯ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗಿದೆ. ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಮತ್ತು ಅನೇಕರು ಜೈಲು ಕಂಬಿ ಎಣಿಸುತ್ತಿದ್ದಾರೆ. ಇನ್ನೂ ಹಲವರು ಈ ಸಾಲಿನಲ್ಲಿ ನಿಂತಿದ್ದಾರೆ. ರಾಜ್ಯದ ಭೂ ಸಂಪತ್ತು ಮತ್ತು ಖನಿಜ ಸಂಪತ್ತನ್ನು ಲೂಟಿ ಹೊಡೆಯಲಾಗುತ್ತಿದೆ. ಇನ್ನೊಂದೆಡೆ ಸರ್ಕಾರ ಕೃಷಿಯಲ್ಲಿ ವಿದೇಶಿ ಬಂಡವಾಳ ಹರಿದು ಬರಲು ಸಮಾವೇಶ ನಡೆಸುತ್ತಿದೆ. ಈ ಮೂಲಕ ರೈತರನ್ನು ಕೃಷಿಯಿಂದ ಒಕ್ಕಲೆಬ್ಬಿಸುವ ಹುನ್ನಾರ ನಡೆಸುತ್ತಿದೆ ಎಂದು ಟೀಕಿಸಿದರು. ಬಿಜೆಪಿ ಸರ್ಕಾರದ ಬಗೆಗಿನ ಭ್ರಮೆ ಕಳಚಿ ಬಿದ್ದಿದೆ. ಈ ಸರ್ಕಾರವನ್ನು ಕಿತ್ತೊಗೆಯಲು ಮುಂದಾಗಬೇಕೆಂದು ಕರೆ ನೀಡಿದರು. ವೇರಿಕೆಯಲ್ಲಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಮತ್ತು ಮಹಿಳಾ ನಾಯಕಿ ಗೌರಮ್ಮ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಕಾರ್ಮಿಕ ಮುಖಂಡರಾದ ಮೀನಾಕ್ಷಿಸುಂದರಂ, ಕೆ.ಎನ್.ಉಮೇಶ್, ಸಿಪಿಐ(ಎಂ) ರಾಜ್ಯ ಮುಖಂಡರಾದ ಎಸ್.ವೈ.ಗುರುಶಾಂತ್, ರೈತ ಮುಖಂಡರಾದ ಎನ್.ವೆಂಕಟಾಚಲಯ್ಯ, ಚಂದ್ರತೇಜಸ್ವಿ, ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷರಾದ ಎಂ.ರತ್ನಾಕರ ಶೆಣೈ ಮುಂತಾದವರು ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಗೋಪಾಲಕೃಷ್ಣ ಅರಳಹಳ್ಳಿ, ಅಧ್ಯಕ್ಷತೆ ವಹಿಸಿದ್ದರು. ಬಹಿರಂಗ ಸಭೆಯಲ್ಲಿ ನೂರಾರು ಸಂಖ್ಯೆಯಲ್ಲಿ ಕಾರ್ಯಕರ್ತರು, ನಾಗರೀಕರು ನೆರೆದಿದ್ದರು.

ಪ್ರತಿನಿಧಿಗಳ ಅಧಿವೇಶನ ಉದ್ಘಾಟನೆ :

ಸಮ್ಮೇಳನ ಪ್ರತಿನಿಧಿ ಅಧಿವೇಶನ ಉದ್ಘಾಟಿಸಿ ಮಾತನಾಡಿದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಎಸ್.ಪ್ರಸನ್ನಕುಮಾರ್ ಜಗತ್ತಿನಲ್ಲಿ ಬಂಡವಾಳಶಾಹಿ ಪದ್ಧತಿಗೆ ಪರ್ಯಾಯ ಎಂಬ ವಾದಕ್ಕೆ ಪ್ರತಿಸ್ಪರ್ಧಿಯಾಗಿ ಸಮಾಜವಾದಿ ಆಶಯ ಮೇಲುಗೈ ಸಾಧಿಸುತ್ತಿದೆ. ಬಂಡವಾಳಶಾಹಿ ಪ್ರಭುತ್ವದ ವಿರುದ್ಧ ಜಗತ್ತಿನಾದ್ಯಂತ ವ್ಯಾಪಕ ಪ್ರತಿರೋಧ ಪ್ರತಿಭಟನೆ ವ್ಯಕ್ತವಾಗುತ್ತಿದೆ. ಸಮಾಜವಾವಕ್ಕೆ ಭವಿಷ್ಯವಿಲ್ಲ ಎಂಬ ಮಾತು ಸುಳ್ಳಾಗುತ್ತಿದೆ. ಸಾಮ್ರಾಜ್ಯಶಾಹಿಯ ನೇತೃತ್ವವಾಗಿರುವ ಅಮೇರಿಕಾದಲ್ಲೇ ಅಮೇರಿಕಾದ ಬಂಡವಾಶಾಹಿ ಆರ್ಥಿಕ ನೀತಿಯ ವಿರುದ್ಧ 'ವಾಲ್‌ಸ್ಟ್ರೀಟ್ ಮುತ್ತಿಗೆ' ಚಳುವಳಿ ವ್ಯಾಪಕತೆ ಪಡೆಯುತ್ತಿದೆ. ಬಂಡವಾಳಶಾಹಿ ಆರ್ಥ ವ್ಯವಸ್ಥೆಯ ಕೇಂದ್ರವಾದ ಅಮೇರಿಕಾದಲ್ಲೇ ಜನತೆ ನಿರುದ್ಯೋಗ, ಬೆಲೆ ಏರಿಕೆಯಿಂದ ತತ್ತರಿಸಿದ್ದಾರೆ. ಲ್ಯಾಟೀನ್ ಅಮೇರಿಕಾದ ಹಲವು ದೇಶಗಳಲ್ಲಿ ಜನತೆ ವ್ಯವಸ್ಥೆ ವಿರುದ್ಧ ತಿರುಗಿ ಬಿದ್ದಿದ್ದಾರೆ ಮತ್ತು ಚುನಾವಣೆಗಳಲ್ಲಿ ಎಡಪಂಥೀಯ ಅಭ್ಯರ್ಥಿಗಳು ಜಯಭೇರಿ ಭಾರಿಸುತ್ತಿರುವುದು ಸಮಾಜವಾದಕ್ಕೆ ಭವಿಷ್ಯವಿದೆ ಎಂಬುದರ ಸೂಚಕವಾಗಿದೆ ಎಂದು ಅವರು ಹೇಳಿದರು.


ಮೀನಾಕ್ಷಿ ಸುಂದರಂ


ಕೆ.ಪ್ರಕಾಶ್


ಚಂದ್ರತೇಜಸ್ವಿ ಆರ್.

ಸ್ವಾತಂತ್ರ್ಯ ನಂತರದ ದೇಶದ 60 ವರ್ಷಗಳ ಆಡಳಿತ ಬಡವರು ಮತ್ತು ಶ್ರೀಮಂತರ ನಡುವೆ ಅಗಾಧ ಅಂತರವನ್ನು ಸೃಷ್ಟಿ ಮಾಡಿದೆ. ಜನ ವಿರೋಧಿಗಳನ್ನು ಜನತೆಯ ಮೇಲೆ ಹೇರುತ್ತಾ ಬರಲಾಗಿದೆ. ಕಾಂಗ್ರೆಸ್-ಬಿಜೆಪಿ ಎರಡೂ ಪಕ್ಷಗಳ ನಿಜ ಹೂರಣ ಜನತೆಗೆ ಅರ್ಥವಾಗಿದೆ. ಈ ಹಿನ್ನೆಲೆಯಲ್ಲಿ ಜನತೆಯ ಬದುಕಿನ ರಕ್ಷಣೆಗಾಗಿ, ದೇಶದ ಐಕ್ಯತೆಗಾಗಿ, ಅಭಿವೃದ್ಧಿಗಾಗಿ ಜನತೆಯು ಪ್ರಜಾಸತ್ತಾತ್ಮಕ ಹೋರಾಟಗಳಿಗೆ ನೇತೃತ್ವ ನೀಡುತ್ತಲೇ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಮುನ್ನಡೆಯಬೇಕೆಂದು ಕರೆ ನೀಡಿದರು.

ನಿರ್ಣಯಗಳು :

ಸಿಪಿಐ(ಎಂ) 20ನೇ ಜಿಲ್ಲಾ ಸಮ್ಮೇಳನವು ಚರ್ಚಿಸಿ ಹಲವು ನಿರ್ಣಯಗಳನ್ನು ಕೈಗೊಂಡಿತು. ಉತ್ತಮ ಆರೋಗ್ಯ, ಬೆಲೆ ಏರಿಕೆ, ರೇಷ[illegible] ವ್ಯವಸ್ಥೆಯ ಸಾರ್ವತ್ರೀಕರಣಕ್ಕಾಗಿ, ಭ್ರಷ್ಟಾಚಾರ[illegible] ನಿರ್ಮೂಲನೆಗಾಗಿ ನಾಗರೀಕ ಸಮಸ್ಯೆಗ[illegible] ಪರಿಹಾರಕ್ಕಾಗಿ, ಸಾರಿಗೆ ವ್ಯವಸ್ಥೆಯ ಜನಸ್ನೇಹಿ ಸುಧಾರಣೆಗಾಗಿ, ವಸತಿ-ನಿವೇಶನ ಹಾಗೂ ಹಕ್ಕುಪತ್ರಕ್ಕಾಗಿ, ನಗರದ ಸುರಕ್ಷತೆಗಾಗಿ, ಅಕ್ರಮ-ಸಕ್ರಮ ದುಬಾರಿ ಶುಲ್ಕ ವಿರೋಧಿಸಿ, ಜನಸ್ನೇಹಿ ತೆರಿಗೆ ನೀತಿಗಾಗಿ, ಕನಿಷ್ಟ ಕೂಲಿಗಾಗಿ, ಶಿಕ್ಷಣದ ವ್ಯಾಪಾರೀಕರಣ ವಿರೋಧಿಸಿ, ಜಾತಿ ದೌರ್ಜ[illegible] ವಿರುದ್ಧ, ಕೋಮುವಾರು ಹಿಂಸೆ ಮತ್ತು ಗಲ[illegible] ಮತೀಯವಾದದ ವಿರುದ್ಧ, ಬಿಬಿಎಂಪಿಯಲ್ಲಿ[illegible] ಹಗರಣವನ್ನು ಲೋಕಾಯುಕ್ತ ತನಿಖೆಗಾಗಿ ಮಹತ್ವದ ಹಲವು ನಿರ್ಣಯಗಳನ[illegible] ಕೈಗೊಳ್ಳಲಾಗಿದೆ.

– ಲಿಂಗರಾಜು


ಬೆಂಗಳೂರು ಉತ್ತರ ಜಿಲ್ಲಾ ಸಮಿತಿ


ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ

ಮೂರು ಜಿಲ್ಲಾ ಸಮಿತಿಗಳಾಗಿ ಬೆಂಗಳೂರು ಮಹತ್ವದ ಸಂಘಟನಾ ತೀರ್ಮಾನ

ಈಗಿರುವ ಬೆಂಗಳೂರು ಜಿಲ್ಲಾ ಸಮಿತಿಯು 3 ಸಮಿತಿಗಳನ್ನಾಗಿ ಮಾಡುವ ನಿರ್ಣಯಕ್ಕೆ ಸಮ್ಮೇಳನ ಒಪ್ಪಿಗೆ ನೀಡಿದ ಆಧಾರದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ, ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಮತ್ತು ಬೆಂಗಳೂರು ಗ್ರಾಮಾಂತರ ಸಂಘಟನಾ ಸಮಿತಿಗಳನ್ನಾಗಿ ರಚಿಸಲಾಗಿದೆ.

ಸಮಿಗಳು ಇಂತಿವೆ.

ಬೆಂಗಳೂರು ಉತ್ತರ ಜಿಲ್ಲಾ ಸಮಿತಿ :

ಕಾರ್ಯದರ್ಶಿ :

1. ಮೀನಾಕ್ಷಿ ಸುಂದರಂ

ಕಾರ್ಯದರ್ಶಿ ಮಂಡಳಿ ಸದಸ್ಯರು :

2. ಗೌರಮ್ಮ,
3. ಗೋಪಾಲಕೃಷ್ಣ ಅರಳಹಳ್ಳಿ,
4. ಟಿ.ಲೀಲಾವತಿ,
5. ಹೆಚ್.ಎನ್.ಗೋಪಾಲಗೌಡ,
6. ಪ್ರತಾಪ್ ಸಿಂಹ,

ಜಿಲ್ಲಾ ಸಮಿತಿ ಸದಸ್ಯರು :

7. ಹನುಮಂತರಾವ್ ಹವಾಲ್ದಾರ್,
8. ರತ್ನಾಕರ್ ಶೆಣೈ,
9. ಟಿ.ನಾರಾಯಣಸ್ವಾಮಿ,
10. ವೀರಮಣಿ ಕೆ.,
11. ಪಾರ್ಥಿಬನ್,
12. ಎನ್.ನಾಗರಾಜ್,
13. ರುದ್ರಮೂರ್ತಿ,
14. ಹೆಚ್.ಎಸ್.ಮಂಜುನಾಥ್,
15. ಪಿ.ಮುನಿರಾಜ್
16. ಓ.ವಿ.ಕೃಷ್ಣಮೂರ್ತಿ
17. ಇ.ಆರ್.ಕೆ.ವಾರಿಯರ್.

ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ :

ಕಾರ್ಯದರ್ಶಿ :

1. ಕೆ.ಪ್ರಕಾಶ್,

ಕಾರ್ಯದರ್ಶಿ ಮಂಡಳಿ ಸದಸ್ಯರು :

2. ಉಮೇಶ್ ಕೆ.ಎನ್.
3. ವೆಂಕಟಾಚಲಯ್ಯ
4. ಸುರೇಂದ್ರರಾವ್ ಟಿ.
5. ಲಕ್ಷ್ಮಣಕುಮಾರ್ ಎಸ್.
6. ಎನ್.ಮಂಜುನಾಥ್

ಜಿಲ್ಲಾ ಸಮಿತಿ ಸದಸ್ಯರು :

7. ಡಿ.ಸುರೇಶ್
8. ಯಶೋಧ
9. ಶಿವರಾಮರೆಡ್ಡಿ
10. ಮಹದೇಶ್ ಡಿ.
11. ರಾಜಶೇಖರಮೂರ್ತಿ
12. ನಾಗರಾಜ್ ಪಿ.
13. ಲಿಂಗರಾಜ್
14. ಆರ್.ಮಂಜುನಾಥ್
15. ಎಂ.ರಾಜಣ್ಣ
16. ಬಿ.ವಿ.ರಾಘವೇಂದ್ರ
17. ಶ್ರೀನಿವಾಸ್ ಎಂ.
18. ಶ್ರೀಮತಿ
19. ಜೋಮಿ ಜಾರ್ಜ್

ಬೆಂಗಳೂರು ಗ್ರಾಮಾಂತರ ಸಂಘಟನಾ ಸಮಿತಿ


ಕಾರ್ಯದರ್ಶಿ :

1. ಚಂದ್ರತೇಜಸ್ವಿ ಆರ್.

ಸದಸ್ಯರು :

2. ಹೇಮಂತರಾಜು
3. ವೆಂಕಟೇಶ್ ಪಿ.ಎ.
4. ಮೋಹನಬಾಬು
5. ಶ್ರೀನಿವಾಸಚಾರ್
6. ಆರ್.ಆರ್.ಹರೀಂದ್ರ

ಒಂದು ಸ್ಥಾನ ಖಾಲಿ.



ಆರ್.ರಾಮಕೃಷ್ಣ

ಸೋರುತಿಹುದು ಮನೆಯ ಮಾಳಿಗೆ......

ಮೂರು ವರ್ಷದ ಬಿಜೆಪಿ ಸರ್ಕಾರದ ಸಾಧನೆಗಳೂ..... ಹಾಗೂ 956 ರೈತರ ಆತ್ಮ ಹತ್ಯೆಗಳ

ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರದ ಮೂರು ಮೂರುವರೆ ವರ್ಷದ 'ಸಾಧನೆ'ಗಳೇನು ಅಂತ ಕೇಳಿದರೆ ಮೊತ್ತ ಮೊದಲಿಗೆ ನೆನಪಿಗೆ ಬರುವುದು ಹಾವೇರಿಯಲ್ಲಿ ರಸಗೊಬ್ಬರ ಕೇಳಿದ ರೈತರ ಮೇಲೆ ನಡೆದ ಗೋಲಿಬಾರ್. ಆಮೇಲೂ ಕೂಡ ರೈತರ ಪ್ರಾಣ ತೆಗೆಯುವ– ಪ್ರಾಣ ಹಿಂಡುವ ಬಿಜೆಪಿ ಸರ್ಕಾರದ ನೀತಿಗಳನ್ನು ಬಹಳ ಜೋರಾಗಿಯೇ ಜಾರಿ ಮಾಡುತ್ತಾ ಕರ್ನಾಟಕದ 'ಕೀರ್ತಿ ಪತಾಕೆ'ಯನ್ನು ಹಾರಿಸಲಾಗುತ್ತಿದೆ. ಕರ್ನಾಟಕಕ್ಕೆ ಈಗ ರೈತರ ಆತ್ಮಹತ್ಯೆಗಳ ವಿಚಾರದಲ್ಲಿ ದೇಶಕ್ಕೆ ಮೂರನೇ ಸ್ಥಾನ. ಇತ್ತೀಚಿಗೆ ಬಿಜೆಪಿ ಸರ್ಕಾರದ ಸಚಿವರೇ ಸದನಕ್ಕೆ ರೈತರ ಆತ್ಮಹತ್ಯೆಗಳ ಕುರಿತ ಅಂಕಿ ಸಂಖ್ಯೆ ನೀಡಿದ್ದಾರೆ.

2008–09 ರಿಂದ 2011 ನವೆಂಬರ್ 30 ರವರೆಗೆ ಕರ್ನಾಟಕದಲ್ಲಿ 956 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ರೈತರ ಆತ್ಮಹತ್ಯೆಗೆ ಕೇವಲ ರಾಜ್ಯ ಸರ್ಕಾರ ಮಾತ್ರ ಕಾರಣವಲ್ಲ, ಕೇಂದ್ರದ ಯುಪಿಎ ಸರ್ಕಾರದ ಉದಾರೀಕರಣ, ಜಾಗತೀಕರಣದ ನೀತಿಗಳು ರೈತರ ಆತ್ಮಹತ್ಯೆಗಳ ಮೂಲ ಕಾರಣವಾಗಿವೆ. ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಲ್.ಡಿ.ಎಫ್. ಸರ್ಕಾರ ಮಾಡಿದಂತೆ ಜಾಗತೀಕರಣ ನೀತಿಗಳ ದುಷ್ಪರಿಣಾಮಗಳ ವಿರುದ್ಧ ರೈತರ ಬದುಕಿಗೆ ರಕ್ಷಣೆ ಕೊಡುವ ಕೆಲಸವನ್ನು ಗಂಭೀರವಾಗಿ ಕೈಗೆತ್ತಿಕೊಂಡು ಬದಲಿ ನೀತಿಗಳನ್ನು ಜಾರಿ ಮಾಡಲು ಯತ್ನಿಸಿದ್ದೇ ಆಗಿದ್ದಲ್ಲಿ ಕೇರಳದಲ್ಲಿ ಆದಂತೆ ರೈತರ ಆತ್ಮಹತ್ಯೆಗಳಿಗೆ ನಿಜಕ್ಕೂ ತಡೆ ಹಾಕುವುದು ಸಾಧ್ಯವಿತ್ತು. ಆದರೆ ರಾಜ್ಯ ಬಿಜೆಪಿ ಸರ್ಕಾರ ಕೇಂದ್ರದ ಅದೇ ಜಾಗತೀಕರಣದ ನೀತಿಗಳನ್ನು ಸಂಭ್ರಮದಿಂದ ಮತ್ತಷ್ಟು ಜೋರಾಗಿ ಜಾರಿಗೆ ತರಲು ಹೊರಟಿದೆ. ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅಧಿಕಾರದಲ್ಲಿದ್ದಾಗಲೂ ಇವೇ ನೀತಿಗಳೇ ರೈತರನ್ನು ಕೊಂದಿದ್ದು.

ದೃಢವಾದ ಬರ ಪರಿಹಾರ ಕಾಮಗಾರಿಗಳಿಲ್ಲ. ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಕಾಳಜಿ ಇಲ್ಲ.... ರೈತರ ಭೂಮಿ ಕಸಿಯುವ ಕಾತರ.....ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ..... ಗುತ್ತಿಗೆ ಕೃಷಿ ಕುಮ್ಮಕ್ಕು, ಕೃಷಿಯ ಕಾರ್ಪೊರೇಟೀಕರಣ, ಕಂಪನೀಕರಣ... ಇಂತಹ ರೈತದ್ರೋಹಿ ನೀತಿಗಳ ದಾರಿಯಲ್ಲಿ ಬಿಜೆಪಿ ಸರ್ಕಾರ ಸಾಗುತ್ತಿದೆ. ಇದರಿಂದ ರೈತರ ಆತ್ಮಹತ್ಯೆಗಳು ಇನ್ನಷ್ಟು ಹೆಚ್ಚಬಹುದೇ ಹೊರತು ಕಡಿಮೆಯಾಗಲು ಸಾಧ್ಯವಿಲ್ಲ. ಸಾವಯವ ಕೃಷಿ.. ಗೋ ಸಂರಕ್ಷಣೆ ಇತ್ಯಾದಿ ಇತ್ಯಾದಿ ಹೆಸರಿನಲ್ಲಿ ಸಂಘ ಪರಿವಾರದ ಕಾರ್ಯಕರ್ತರಿಗೆ ಹಣ ಹರಿಸುವ ಯೋಜನೆಗಳಿಗೆ ಸರ್ಕಾರ ಗಂಟು ಬಿದ್ದರೆ ರೈತರ ಕೊರಳಿಗೆ ಇನ್ನಷ್ಟು ಉರುಳು ಬೀಳುವುದು ಖಾತರಿಯೇ.



★

ಜನರು ಕಟ್ಟಿದ ತೆರಿಗೆ, ಕಂದಾಯ, ಸುಂಕದ ಹಣ ಎಲ್ಲಿ ಸೋರುತಿದೆ ನೋಡಿದಿರ ?

ಬಡವರ, ದುಡಿಯುವ ಜನರ ಬೆವರ ಹಣದಿಂದ, ಆಳುವ ಸಕಾರಗಳ ಬರ್ಬರ ತೆರಿಗೆ ನೀತಿಗಳಿಂದಾಗಿ ತುಂಬುವ ಸರ್ಕಾರದ ಖಜಾನೆಯ ಹಣ ಉತ್ಪಾದಕವಾದ ಕೆಲಸಗಳಿಗೆ ಬಳಕೆಯಾಗಬೇಕು. ದೇಶ ಕಟ್ಟುವ ಕೆಲಸಗಳಿಗೆ ಬಳಕೆಯಾಗಬೇಕಾದ ಹಣ ಬಿಜೆಪಿ ದರ್ಬಾರ್‌ನಲ್ಲಿ ಯಾವ ಯಾವ ರೂಪದಲ್ಲಿ ಯಾವ ಯಾವ ಉದ್ದೇಶಕ್ಕೆ ಬಳಕೆಯಾಗುತ್ತದೆ ನೋಡಿ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಒಟ್ಟು 21 ಉಪ ಚುನಾವಣೆಗಳು ನಡೆದಿವೆ. ಈ 21 ರಲ್ಲಿ 14 ಚುನಾವಣೆಗಳು ನಡೆದಿರುವುದು ಬಿಜೆಪಿ ಪಕ್ಷವು ನಡೆಸಿದ ಅನೈತಿಕ 'ಆಪರೇಷನ್ ಕಮಲ'ದಿಂದಾಗಿ. ಆಪರೇಷನ್ ಕಮಲ ಅಂದರೆ ಏನು? ಜನರು ವಿರೋಧ ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸಿರುವ ಕಡೆ ಆ ಗೆದ್ದ ಅಭ್ಯರ್ಥಿಗೆ ಅಧಿಕಾರ ಮತ್ತು ಹಣದ ಆಮಿಷ ತೋರಿಸಿ, ಅಥವಾ ಆ ಅಭ್ಯರ್ಥಿಯನ್ನೇ ಕೊಂಡುಕೊಂಡು, ಆಯ್ಕೆಯಾದ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ ಬೇರೆಡೆ ಕೂರಿಸುವುದು ಅಥವಾ ಮತ್ತೆ ಚುನಾವಣೆಗೆ ಅಲ್ಲಿಯೇ ನಿಲ್ಲಿಸುವುದು.

ಅಂದರೆ ಪಕ್ಷಾಂತರ ನಿಷೇಧ ಕಾಯ್ದೆಯ ಉದ್ದೇಶವನ್ನೇ ಮಣ್ಣು ಪಾಲು ಮಾಡಿ ಪಕ್ಷ ಸ್ವಾರ್ಥ, ವ್ಯಕ್ತಿ ಸ್ವಾರ್ಥ ಸಾಧಿಸಿಕೊಳ್ಳುವುದು. ಈ ಘನ ಉದ್ದೇಶಕ್ಕೆ ಚುನಾವಣಾ ಆಯೋಗ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿ ಬಂದಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಬಡವರಿಗೆ ಔಷಧವಾಗಿ, ಸರ್ಕಾರಿ ಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬಿ, ತುಂಬಲ್ಪಟ್ಟ ಶಿಕ್ಷಕರ ವೇತನವಾಗಿ ವೆಚ್ಚವಾಗ ಬೇಕಾದ ಹಣ ಇಲ್ಲಿ ಯಾವ ರೀತಿಯಾಗಿ ವೆಚ್ಚವಾಗಿದೆ ನೋಡಿ.

ಕಳೆದ ಮೂರು ವರ್ಷಗಳಲ್ಲಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಗಳು, ಮಂತ್ರಿಗಳು ತಮ್ಮ ಓಡಾಟಗಳಿಗಾಗಿ ಮಾಡಿರುವ ವೆಚ್ಚ 9.5 ಕೋಟಿ ರೂಪಾಯಿಗಳು.

ಯಾವ ಯಾವ ಘನ ಉದ್ದೇಶಗಳಿಗಾಗಿ ಓಡಾಟ ನಡೆಸಲಾಗಿದೆ ಅನ್ನುವುದು ಜನರಿಗೆ

ಬಿಜೆಪಿ ದರ್ಬಾರ್

ಗೊತ್ತಿಲ್ಲದ್ದೇನು ಅಲ್ಲ. ಮಠ ಮಾನ್ಯಗಳಿಗೆ ಎಡ ತಾಕುವುದು, ಗುರುಪೀಠಗಳಿಗೆ ಪ್ರದಕ್ಷಿಣೆ ಹಾಕುವುದು, ರೆಸಾರ್ಟ್‌ಗಳು, ಪುಣ್ಯಕ್ಷೇತ್ರಗಳ ಸುತ್ತಾಟಗಳು..... ಇವನ್ನೆಲ್ಲಾ ಜನಗಳು ನೋಡದೇ ಏನಿಲ್ಲ. ರಾಜ್ಯ ಬಿಜೆಪಿ ಸರ್ಕಾರ ಎಷ್ಟೊಂದು ಅಭಿವೃದ್ಧಿಪರ ಅಂತ ತಿಳಿದುಕೊಳ್ಳಬೇಕಾದರೆ ಈ ವಿವರ ನೋಡಿ.

ಸರ್ಕಾರ ಈ ಅವಧಿಯಲ್ಲಿ ನೂರಾರು ಅಭಿವೃದ್ಧಿ ಕಾರ್ಯಗಳಿಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಅದರಲ್ಲಿ ಒಂದು ಅಭಿವೃದ್ಧಿ ಕಾರ್ಯವನ್ನು ಸ್ಯಾಂಪಲ್ ಹೀಗಿದೆ:

ಹಿಂದೆ ಬಿಜೆಪಿ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದ ಸನ್ಮಾನ್ಯ ಶ್ರೀ ರಾಮಚಂದ್ರೇಗೌಡರ ಶ್ರವಣ ಸಾಧನಕ್ಕೆ ಅಂದರೆ ಕಿವಿ ಚೆನ್ನಾಗಿ ಕೇಳಿಸುವಂತೆ ಮಾಡಲು ಬಳಸುವ ಯಂತ್ರದ ವೆಚ್ಚವೂ ಸರ್ಕಾರದ ಅಭಿವೃದ್ಧಿ ವೆಚ್ಚದ ಪಟ್ಟಿಯಲ್ಲಿ ಸೇರಿದೆ. ಆಹಾ ಅಭಿವೃದ್ಧಿಯೆ. ಆಹಾ ಬಿಜೆಪಿ ಸರ್ಕಾರ ದರ್ಬಾರಿನ ಸೊಗಸೆ!!!

ಬೀದಿ ಪ್ರತಿಭಟನೆ ಜನರ ಹಕ್ಕು......

ಪುಟ 2 ರಿಂದ


ಅರ್ಥೈಸಿಕೊಳ್ಳಬಹುದು ಎಂಬ ಪ್ರಶ್ನೆಯ ಬಗ್ಗೆ ಕಾಟ್ಜು ತಮ್ಮ ಟಿಪ್ಪಣಿಯಲ್ಲಿ ವಿವರವಾದ ಉಲ್ಲೇಖವನ್ನು ಮಾಡಿದ್ದಾರೆ.

"ನನ್ನ ಅಭಿಪ್ರಾಯದ ಪ್ರಕಾರ; ಭಾರತ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದೆ. ಈ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಹಿನ್ನೆಲೆಯಲ್ಲಿ ನಾವು ಈ ಎರಡು ವಿಧಿಗಳನ್ನು ಸರಿಹೊಂದಿಸಬೇಕಾಗುತ್ತದೆ. ಅಂದರೆ, ದೇಶದ ಎಲ್ಲ ಪ್ರಜೆಗಳಿಗೆ ನೀಡುವ ಮಾತನಾಡುವ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಖಾತ್ರಿಗೊಳಿಸುವ ಸಂವಿಧಾನದ 19ನೇ ವಿಧಿಯನ್ನು ಪ್ರಾಥಮಿಕವಾಗಿ ಇಟ್ಟುಕೊಂಡು ಇದಕ್ಕೆ ಪೂರಕವಾಗಿ ಸಂವಿಧಾನದ 129 ಮತ್ತು 215ನೇ ಕಲಂನ್ನು ಅರ್ಥೈಸಬೇಕಾಗುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ನ್ಯಾಯಾಧೀಶರನ್ನು ಟೀಕಿಸುವ ಹಕ್ಕನ್ನು ನಿಯಮಿತವಾಗಿ ಚಲಾಯಿಸುವ ಅಧಿಕಾರ ಜನತೆಗೆ ಇದೆ. ಇದು ನ್ಯಾಯಾಂಗ ಕೆಲಸ ಮಾಡದ ಮಟ್ಟಕ್ಕೆ ಅಥವಾ ಕಷ್ಟಕರ ಪರಿಸ್ಥಿತಿಗೆ ಹೋಗದಂತೆ ನೋಡಬೇಕಾಗುತ್ತದೆ. ಹಾಗಾಗಿ, ನನ್ನ ಅಭಿಪ್ರಾಯದಲ್ಲಿ ಈ ಪ್ರಕರಣದಲ್ಲಿ ನ್ಯಾಯಾಂಗ ನಿಂದನೆ ಆಗಿದೆಯೋ ಇಲ್ಲವೋ ಎಂಬುದನ್ನು ನಿರ್ಣಯಿಸಲು ಈ ಮೇಲಿನ ಮಾನದಂಡವನ್ನು ಬಳಸಬೇಕು. ಒಂದು ವೇಳೆ, ಈ ಟೀಕೆ ನ್ಯಾಯಾಂಗ ಪ್ರಕ್ರಿಯೆಗೆ ಕಷ್ಟಕರವಾಗಿ ಪರಿಣಮಿಸದಿದ್ದಲ್ಲಿ, ಅಥವಾ ನ್ಯಾಯಾಧೀಶರು ಕೆಲಸ ಮಾಡದಂತ ಪರಿಸ್ಥಿತಿ ನಿರ್ಮಾಣ ಮಾಡದಿದ್ದಲ್ಲಿ, ಆಗ, ಕಠಿಣವಾದ ಟೀಕೆಗಳನ್ನೂ ನ್ಯಾಯಾಂಗ ನಿಂದನೆ ಎಂಬುದಾಗಿ ಪರಿಗಣಿಸುವಂತಿಲ್ಲ"

ಎಂ.ವಿ. ಜಯರಾಜನ್ ಪ್ರಕರಣದಲ್ಲಿ ತೀರ್ಪು ನೀಡಿದ ಕೇರಳ ಹೈಕೋರ್ಟ್‌ನ ನ್ಯಾಯಾಧೀಶರು, ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾದ ಮಾರ್ಕಾಂಡೇಯ ಕಾಟ್ಜು ಅವರ ರಾಗದ್ವೇಷವಿಲ್ಲದ ಟಿಪ್ಪಣಿಗಳ ಬಗ್ಗೆ ಒಮ್ಮೆ ಕಣ್ಣಾಡಿಸಬಹುದು. ಈ ಮೂಲಕ ತಮ್ಮ ತೀರ್ಪಿನ ಕುರಿತು ಮತ್ತೊಮ್ಮೆ ಆತ್ಮಾವಲೋಕನ ಮಾಡಬಹುದು ಎಂಬುದು ಎಲ್ಲರ ಆಶಯ.

■

ಬಿಜಾಪುರ : ನೀರಾವರಿ ಹೋರಾಟದ ನೆನಪು



ಕಾಂ. ಎನ್.ಕೆ.ಉಪಾಧ್ಯಾಯ

ವರದಿ :- ಸೋಮಪ್ಪ ಆಯಟ್ಟಿ

ಬಿಜಾಪುರ ಅವಿಭಜಿತ ಜಿಲ್ಲೆಗೆ "ನೀರಾವರಿ ಹೋರಾಟದ ಇತಿಹಾಸ" ಎಂಬ ವಿಚಾರ ಸಂಕಿರಣವನ್ನು ಬಿಜಾಪುರ ಸಮಾಜ ವಿಜ್ಞಾನ ವೇದಿಕೆಯಿಂದ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಕಮ್ಯುನಿಸ್ಟ್ ಚಳುವಳಿಯ ನೇತಾರರಾದ ದಿವಂಗತ ಕಾ॥ ಎನ್.ಕೆ.ಉಪಾಧ್ಯಾಯರ 10 ವರ್ಷದ ಮರಣ-ಸ್ಮರಣೆಯ ಅಂಗವಾಗಿ ಹಾಗೂ 'ಕಾ॥ ಭೀಮಶಿ ಕಲಾದಗಿ'ಯವರು ಬರೆದ ನೀರಾವರಿ ಹೋರಾಟ ಕುರಿತಾದ ಪುಸ್ತಕದ ಬಿಡುಗಡೆಯನ್ನು 'ಬಸವವನ'ದಲ್ಲಿ ಹಮ್ಮಿಕೊಳ್ಳಲಾಗಿತ್ತು.

ನೀರಾವರಿ ಹೋರಾಟದ ಕುರಿತ ಪುಸ್ತಕದ ಬಿಡುಗಡೆ ಮಾಡಿದ ಮಾಜಿ ಶಾಸಕರು ಹಾಗೂ ಬಿಜಾಪುರ ಜಿಲ್ಲಾ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶಿವಾನಂದ ಪಾಟೀಲರು ಜಿಲ್ಲೆಯ ನೀರಾವರಿಗಾಗಿ ಎನ್.ಕೆ.ಉಪಾಧ್ಯಾಯ, ಮುರೆಗಪ್ಪ ಸುಗಂಧಿ, ಬಾಬುರಾವ್ ಹುಜರೆ ಅವರು ನಡೆಸಿದ ಹೋರಾಟ ಅನನ್ಯ. ಒಂದುವೇಳೆ ನಾನು ಅಧಿಕಾರಕ್ಕೆ ಬಂದರೆ ಮುಳವಾಡ ಏತ ನೀರಾವರಿ ಯೋಜನೆಗೆ ಈ ಮೂವರ ಹೆಸರನ್ನು ಇಡುತ್ತೇನೆ. ಹೋರಾಟಗಾರರ ಇತಿಹಾಸ ತಿರುಚಿ ಹೋರಾಟದ ದಾರಿ ತಪ್ಪಿಸುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ. ಹೋರಾಟಗಾರರು ಅವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಸಮಾಜಕ್ಕೋಸ್ಕರ ದುಡಿಯುವ ಹೋರಾಟಗಾರರನ್ನು ಇತಿಹಾಸ ಮರೆಯುವಂತಾಗಬಾರದು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ನೀರು ಇಂದು ವ್ಯಾಪಾರದ ಸರಕಾಗಿ ಪರಿಣಮಿಸಿದೆ. ಜಗತ್ತಿನಲ್ಲಿ ನೀರಿನ ವ್ಯಾಪಾರ ಬಹುದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ನೀರಿನ ಒಡೆತನವನ್ನು ಪಡೆದುಕೊಳ್ಳುವುದಕ್ಕಾಗಿ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಪೈಪೋಟಿ ನಡೆದಿದೆ. ನೀರಿನ ಒಡೆತನವನ್ನು ಬಹುರಾಷ್ಟ್ರೀಯ ಕಂಪನಿಗಳು ಪಡೆದುಕೊಂಡರೆ ಕೃಷಿಗೆ ಮತ್ತು ಕುಡಿಯುವುದಕ್ಕೆ ಜನ ಸಮುದಾಯಗಳಿಗೆ ನೀರು ಸಿಗದಂತಾಗುತ್ತದೆ. ನೀರಿನ ಒಡೆತನ ಜನ ಸಮುದಾಯದ ಬಳಿಯೇ ಇರುವಂತೆ



ನೋಡಿಕೊಳ್ಳುವುದು ಹೋರಾಟಗಾರರ ಜವಾಬ್ದಾರಿಯಾಗಿದೆ. ಜೀವಿತದ ಅವಧಿಯವರೆಗೆ ನಿರಂತರವಾಗಿ ನೀರಾವರಿ ಯೋಜನೆಗಳ ಜಾರಿಗಾಗಿ ಹೋರಾಟ ನಡೆಸಿದ ಎನ್.ಕೆ.ಉಪಾಧ್ಯಾಯ ಅವರು ಹೋರಾಟದ ಇತಿಹಾಸದಲ್ಲಿ ಅಜರಾಮರರಾಗಿ ಉಳಿಯುತ್ತಾರೆ. ಅವರ ಸಂಪರ್ಕದಿಂದಾಗಿಯೇ ತಾವು ಚಳುವಳಿಗೆ ಸಮರ್ಪಿಸಿಕೊಂಡಿದ್ದಾಗಿ ಹೇಳಿದರು.

ಮಾಜಿ ಶಾಸಕರಾದ ಬಾಬುರೆಡ್ಡಿ ತುಂಗಳವರು ಮಾತನಾಡಿ 1958ರಲ್ಲಿ ಆಯುರ್ವೇದ ಕಾಲೇಜಿಗೆ ನಾನು ಓದಲು ಬಂದಾಗ ಸುಗಂಧಿ, ಎನ್.ಕೆ.ಉಪಾಧ್ಯಾಯ, ಬಾಬು ಹುಜರೆಯವರು ಮಾರ್ಗದರ್ಶಕರಾಗಿದ್ದರು. ಆಲಮಟ್ಟಿ ಯೋಜನೆಯ ಅಡಿಗಲ್ಲು ಇಡುವಾಗ ಎನ್. ಕೆ. ಅವರ ನೇತೃತ್ವದಲ್ಲಿ ಬಂದಿದ್ದ ಅಸಂಖ್ಯಾತ ವಿದ್ಯಾರ್ಥಿಗಳಲ್ಲಿ ನಾನು ಒಬ್ಬನಾಗಿದ್ದೆ. 1961ರಲ್ಲಿ ಎನ್.ಕೆ.ಉಪಾಧ್ಯಾಯ ಅವರು ಬರೆದ 'ಕೃಷ್ಣೆಯ ಸಮಪಾಲಿನ ನೀರು' ಪುಸ್ತಕವನ್ನು ಮನೆ ಮನೆಗೆ ಹಂಚಿದ್ದೆವು ಎಂದರು.

'ಭೀಮಶಿ ಕಲಾದಗಿ'ಯವರು ಬರೆದ 'ನೀರಾವರಿ ಹೋರಾಟ' ಪುಸ್ತಕವನ್ನು 'ಶಿವಾನಂದ ಪಾಟೀಲ'ರು ಬಿಡುಗಡೆ ಮಾಡಿದರು. ಭೀಮಶಿ ಕಲಾದಗಿಯವರು ಪುಸ್ತಕದ ಬಗ್ಗೆ ಹಾಗೂ ನೀರಾವರಿ ಹೋರಾಟದ ಕುರಿತು ತಮ್ಮ ಅನುಭವಗಳನ್ನು ಸವಿವರವಾಗಿ ಹೇಳಿದರು. ಪಂಚಪ್ಪ ಕಲಬುರ್ಗಿಯವರು ಭೀಮಾನದಿಯ ನೀರಾವರಿಯ ಹೋರಾಟ ಹೇಳುತ್ತಾ ಎನ್.ಕೆ.ಯವರು, ಅವರ ಧೀಮಂತ ನಾಯಕರು ಎಂದು ಕೊಂಡಾಡಿದರು.

ಅಧ್ಯಕ್ಷತೆಯನ್ನು ವಕೀಲರಾದ ಶ್ರೀಧರ ಕುಲಕರ್ಣಿ ವಹಿಸಿದ್ದರು. ವಿಶ್ವನಾಥ ಭಾವಿ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷರಾದ ಸಿದ್ದರಾಮ ರಂಜಣಗಿಯವರು ಎನ.ಕೆ.ಉಪಾಧ್ಯಾಯರು ರೈತರಿಗಾಗಿ ಮಾಡಿದ ಹೋರಾಟಗಳನ್ನು ಸ್ಮರಿಸಿದರು. ರೈತರು ಜಾಗೃತರಾಗಿ ಹೋರಾಟಕ್ಕೆ ಮುಂದಾಗಬೇಕು ಸರಕಾರಗಳು ರೈತರನ್ನು



ವಂಚಿಸುತ್ತಿವೆ ಎಂದರು.

ಸಭೆಯ ತೀರ್ಮಾನಗಳು

- ಕೃಷ್ಣಾ ಎಡದಂಡೆ ಕಾಲುವೆಗೆ ಎನ್.ಕೆ.ಉಪಾಧ್ಯಾಯ ಅವರ ಹೆಸರು ಬಲದಂಡೆ ಕಾಲುವೆಗೆ ಮುರಿಗೆಪ್ಪ ಸುಗಂಧಿ ಹೆಸರು ಮುಳವಾಡ ಏತ ನೀರಾವರಿ ಕಾಲುವೆಗೆ ಬಾಬುರಾವ್ ಹುಜರೆ ಅವರ ಹೆಸರನ್ನು ನಾಮಕರಣ ಮಾಡಬೇಕು.
- ಜಿಲ್ಲೆಯಲ್ಲಿ ತೀವ್ರ ಬರಗಾಲವಿದ್ದು ತುರ್ತು ಪರಿಹಾರ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕು.
- ಅವಶ್ಯ ಬಿದ್ದಾಗ ಹೋರಾಟಗಾರರೆಲ್ಲ ಒಂದಾಗಿ ಸಭೆ ಸೇರಿ ಮುಂದಿನ ತೀರ್ಮಾನ ಕೈಗೊಳ್ಳಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಚಂದ್ರಶೇಖರ ಗಬ್ಬೂರ ರಿಯಾಜ್ ಫಾರೂಕಿ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಯಂಡಿಗೇರಿಯವರು ಎನ್.ಕೆ.ಯವರ ಜೊತೆ ವಿದ್ಯಾರ್ಥಿ ಜೀವನದಿಂದ ನೀರಾವರಿ ಹೋರಾಟದಲ್ಲಿ ಭಾಗವಹಿಸಿದ್ದನ್ನು ನೆನಪಿಸಿಕೊಂಡರು. ಲಕ್ಷ್ಮಿ ದೇಸಾಯಿ, ವಿ ಎಂ ಕಟ್ಟಿ ವಕೀಲ, ಕೆ.ಎಸ್.ಗುಂಡಣ್ಣವರ, ಆರ್. ಎಸ್. ಡೋಮನಾಳ, ಎಂ. ಎಸ್.ಖೇಡ, ಜಿ.ಬಿ.ಸಾಲಕ್ಕಿ ವಿಶ್ವನಾಥ ಕುಲಕರ್ಣಿ, ಬಿ.ಡಿ.ಪಾಟೀಲ, ಸೋಮಪ್ಪ ಆಯಟ್ಟಿ ಕಾರ್ಯಕ್ರಮ ನಿರೂಪಿಸಿದರು. ಲಕ್ಷ್ಮಣ ಹಂದ್ರಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಣ್ಣಾರಾಯ ಈಳಗೇರ ಸ್ವಾಗತಿಸಿದರು. ಮನ್ನು ಸಾಬ ಕಲಾದಗಿ ವಂದನಾರ್ಪಣೆ ಮಾಡಿದರು.

ಯುದ್ಧವಿರುವುದು ಬಿಜೆಪಿಯೊಳಗೇ..

ಪುಟ 3 ರಿಂದ

ಪಕ್ಷದ ನಾಯಕಿ ಸುಷ್ಮಾ, ಜೇಟ್ಲಿಗಳು ಹೊಸಹೊಸ ಮುಲಾಮುಗಳನ್ನು ಹಚ್ಚುತ್ತಿದ್ದಾರೆ. ಇದು ಇಂದು- ನೆನ್ನೆಯ ಕಥೆಯಲ್ಲ, ಆರಂಭದಿಂದಲೂ ಯಡ್ಡಿಯೊಂದಿಗೆ ತಾವಿ ಮೇಯ್ದು ಆಕ್ರಮಗಳ ಪಾಲುದಾರರಾಗಿಯೂ- ಫಲಾನುಭವಿಗಳಾಗಿಯೂ ಇರುವುದರಿಂದ ಚಕಾರ ಎತ್ತಲಾದರೂ ಹೇಗೆ ಸಾಧ್ಯ?

ಈ ಬಿಜೆಪಿ ಸರ್ಕಾರದ ರಚನೆಗೆ ಕಾರಣೀಭೂತರಾದ, ಸರ್ಕಾರದ ಅಧಿಕಾರದ ಸರ್ವ ಫಲವನ್ನು ನುಂಗುತ್ತಾ, ಕೊಬ್ಬಿದ ಭೂ ಹಾಗೂ ಗಣಿ ಮಾಫಿಯಾಗಳ ಅಧಿಕಾರ ದಾಹ ಅದಕ್ಕಾಗಿ ಕಿತ್ತಾಟ ತಾರಕಕ್ಕೇರಿರುವಾಗ, ಆಗುಂಪು-ಈ ಗುಂಪು ಎಂದು ಒಡೆದಿರುವಾಗ ಐಕ್ಯತೆ, ಪಕ್ಷದ-ಸಿದ್ಧಾಂತ ಶಿಸ್ತು ಇರಲಾದರೂ ಹೇಗೆ ಸಾಧ್ಯ?

ಈಗಂತೂ ದೆಹಲಿಯಲ್ಲಿ ಈವಾರ ಬೀಡು ಬಿಟ್ಟಿರುವ ಯಡಿಯೂರಪ್ಪ ವರಿಷ್ಠರಿಗೆಲ್ಲಾ ಸ್ಪಷ್ಟ ಸಂದೇಶ ರವಾನಿಸಿ ಬಿಟ್ಟಿದ್ದಾರೆ. ಇಷ್ಟಾರ್ಥ ಈಡೇರದಿದ್ದಲ್ಲಿ ಪಕ್ಷ ಒಡೆಯುವುದಾಗಿಯೂ ಹೇಳಿ ಬಿಟ್ಟಿದ್ದಾರೆ. ಈ ಘರ್ಷಣೆ ತೀವ್ರವಾಯಿತೆಂದರೆ ಸದಾನಂದರಿಗೆ ಸೋಲು! ಇದರ ಸುತ್ತ ಬಿಜೆಪಿ, ಕಾಂಗ್ರೆಸ್-ಜೆಡಿಎಸ್ ಪಕ್ಷಗಳಲ್ಲಿಯೇ ತಂತ್ರ-ತಿರುಮಂತ್ರಗಳು!

ಆರಂಭದಲ್ಲೇನೋ ಮುಖ್ಯಮಂತ್ರಿಯನ್ನು ಅವಿರೋಧವಾಗಿ ಆಯ್ಕೆ ಮಾಡಬೇಕೆಂಬ ಒತ್ತಾಯವನ್ನು ತೇಲಿಬಿಡಲಾಯಿತ್ತಾದರೂ ಅದಕ್ಕೆ ಅವರೊಳಗಿಂದಲೇ ಮನ್ನಣೆ ಬರಲಿಲ್ಲ. ಜೆಡಿಎಸ್ ನಾನು ಸ್ಪರ್ಧಿಸುವುದಿಲ್ಲ ಎಂದದ್ದೂ ಯಾಕೆಂದು ಇನ್ನೂ ಸಾಬೀತಾಗಬೇಕಷ್ಟೇ. ಕೊನೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಇಳಿಸಿದೆ. ಬಿಜೆಪಿಯೊಳಗಿನ ಒಡಕಿನ ಲಾಭಕ್ಕೂ ಅದು ಕಾದಿದೆ. ಪಕ್ಷೇತರ ಅಭ್ಯರ್ಥಿಗಳಿಗೆ ಆಮಿಷವೊಡ್ಡಿ ಬೆಂಬಲ ಗಳಿಸಲು ಗಾಳ ಹಾಕಿದ ಬಿಜೆಪಿಯು ಗತಿಗೆಟ್ಟು ಬಳ್ಳಾರಿ ಉಪಚುನಾವಣೆಯಲ್ಲಿ ಬಿಜೆಪಿಯನ್ನೇ ಸೋಲಿಸಿ ಧೂಳಿಪಟಮಾಡಿದ 3+1 ಶಾಸಕರ ಅಮಾನತನ್ನು ಹಿಂತೆಗೆದುಕೊಂಡು ಸರಿದೂಗಿಸಲು ಯತ್ನಿಸುತ್ತಿದೆ. ವಿಪ್ ಇದ್ದರೂ ಉಲ್ಲಂಘಿಸಿ ಯಡ್ಡಿಬಂಡಾಯ ಬೀದಿಗೆ ಬಂದು ಬಿಟ್ಟರೆ ಸದಾನಂದರು ಮಾಜಿಗಳೇ? ಆಗಬೇಕಾಗಬಹುದು. ಆಗಲೂ ಸ್ಪರ್ಧಿಸದ ಜ್ಯಾತಾತೀತರು, ಪಕ್ಷೇತರರು, ಅಧಿಕಾರ --- ------ ಸೆಳೆಯಲು, ಬಿಜೆಪಿ ಹಿಂದೆ ಹಿಂದೆ ಬೀಳಲಿಕ್ಕಿಲ್ಲ. ಅಂದರೆ ಒಟ್ಟಾರೆ ಕುದುರೆ ವ್ಯಾಪಾರ ಗ್ಯಾರಂಟಿ! ಸಂದರ್ಭಾನುಸಾರ ಹರಾಜಿನಲ್ಲಿ ಬೆಲೆ ನಿಗದಿಯಾಗಲಿದೆ!.


ಜನಶಕ್ತಿ
ಕನ್ನಡ ವಾರಪತ್ರಿಕೆ

ಎಲ್‌ಐಸಿ ಮತ್ತು ವಿಮಾ ತಿದ್ದುಪಡಿ ಶಾಸನಗಳು: ಯುಪಿಎ–2 ಹುನ್ನಾರಗಳಿಗೆ ನೌಕರರ ಸಂಘದಿಂದ ತಡೆ


ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಮಿತಿ ಏರಿಸುವ ಸಂಪುಟ ನಿರ್ಣಯವನ್ನು ಅದಕ್ಕೆ ಬಂದ ವ್ಯಾಪಕ ಪ್ರತಿರೋಧದಿಂದಾಗಿ ಅಮಾನತಿನಲ್ಲಿಡಬೇಕಾಗಿ ಬಂದ ಯುಪಿಎ–2 ಸರಕಾರ ಈ ವಾರ ವಿಮಾರಂಗದಲ್ಲಿಯೂ ಇಂತಹುದೇ ಹಿನ್ನಡೆಯನ್ನು ಅನುಭವಿಸಬೇಕಾಗಿ ಬಂದಿದೆ. ಸಂಸತ್ತಿನಲ್ಲಿ ಅದು ಮಂಡಿಸಿದ್ದ ಎಲ್‌ಐಸಿ(ತಿದ್ದುಪಡಿ), 2009ನ್ನು ಸಂಸತ್ತು ಈ ವಾರ ಅಂಗೀಕರಿಸಿತು. ಆದರೆ ಸಂಸತ್ತಿನ ಹಣಕಾಸು ಸ್ಥಾಯೀ ಸಮಿತಿಯ ಶಿಫಾರಸುಗಳನ್ನು ಅಂಗೀಕರಿಸಿದ ಮೇಲೆಯೇ ಅದು ಈಗ ಪಾಸಾಗಿರುವುದು.

ಪೆನ್ಶನ್ ನಿಧಿಯೂ ಸೇರಿದಂತೆ ಇತರ ಹಲವು ವಿಷಯಗಳಲ್ಲಿ ಸ್ಥಾಯೀ ಸಮಿತಿಗಳ ಶಿಫಾರಸುಗಳನ್ನು ಲೆಕ್ಕಿಸದ ಯುಪಿಎ–2 ಸರಕಾರ ಈ ಮಸೂದೆಯ ಸಂದರ್ಭದಲ್ಲಿ ಹಾಗೆ ಮಾಡಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಈ ಮಸೂದೆಯ ವಿರುದ್ಧ ಅಖಿಲ ಭಾರತ ವಿಮಾ ನೌಕರರ ಸಂಘ(ಎಐಐಇಎ) ನಡೆಸಿದ ವ್ಯಾಪಕ ಪ್ರಚಾರಾಂದೋಲನ. ಈ ಪ್ರಚಾರಾಂದೋಲನದಿಂದಾಗಿ ಈ ಸಂಘದ ಮುಖಂಡರಿಗೆ ತನ್ನ ಮುಂದೆ ತಮ್ಮ ಆಕ್ಷೇಪಗಳನ್ನು ಮಂಡಿಸುವಂತೆ ಸಂಸತ್ತಿನ ಸ್ಥಾಯೀ ಸಮಿತಿ ಆಹ್ವಾನ ನೀಡಿತು; ಎಐಐಇಎ ಮುಖಂಡರು ತನ್ನ ಮುಂದೆ ಮಂಡಿಸಿದ ವಿವರಣೆಗಳಲ್ಲಿ ಹೆಚ್ಚಿನವನ್ನು ಒಪ್ಪಿಕೊಂಡ ಸ್ಥಾಯೀ ಸಮಿತಿ ಅವನ್ನು ತನ್ನ ಶಿಫಾರಸುಗಳಲ್ಲಿ ಅಳವಡಿಸಿಕೊಂಡಿತು. ಯುಪಿಎ–2 ಸರಕಾರ ನಿರ್ವಾಹವಿಲ್ಲದೆ ಆ ಶಿಫಾರಸುಗಳನ್ನು ಅಳವಡಿಸಿಕೊಂಡೇ ಸಂಸತ್ತಿನ ಮುಂದೆ ಬರುವಂತಾಯಿತು.

ಈ ಶಾಸನದ ಮೂಲಕ, ಮುಖ್ಯವಾಗಿ ಮೂರು ವಿಷಯಗಳಲ್ಲಿ ಖಾಸಗಿಯವರಿಗೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ನೆರವಾಗುವ ಯುಪಿಎ–2 ಸರಕಾರದ ಹುನ್ನಾರ ಸದ್ಯಕ್ಕೆ ವಿಫಲಗೊಂಡಿದೆ. ಮೊದಲನೆಯದಾಗಿ, ಎಲ್‌ಐಸಿಯಲ್ಲಿ ಹೂಡಿದ ಬಂಡವಾಳದ ಮೊತ್ತದಲ್ಲಿ ಹೆಚ್ಚಳದ ಪ್ರಶ್ನೆ. ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆದಾಗ ಕನಿಷ್ಟ ಬಂಡವಾಳ 100 ಕೋಟಿ ರೂ. ಇರಬೇಕು ಎಂದು ವಿಧಿಸಲಾಗಿತ್ತು. 55 ವರ್ಷಗಳ ಹಿಂದೆ, 1956ರಲ್ಲಿ ಖಾಸಗಿ ಕಂಪನಿಗಳನ್ನು ರಾಷ್ಟ್ರೀಕರಿಸಿ ಒಂದು ಸಂಸದೀಯ ಶಾಸನದ ಮೂಲಕ ಎಲ್‌ಐಸಿಯನ್ನು ರಚಿಸಿದಾಗ ಸರಕಾರ ಹೂಡಿದ ಬಂಡವಾಳ 5 ಕೋಟಿ ರೂ. ಅದನ್ನು ಈಗ 100 ಕೋಟಿ ರೂ.ಗೆ ಏರಿಸಬೇಕಾದ ಅಗತ್ಯವನ್ನು ನೆಪ ಮಾಡಿಕೊಂಡು, ಅದನ್ನು ಸರಕಾರ



ಸಂಸತ್ತಿನ ಅನುಮತಿಯ ಅಗತ್ಯವಿಲ್ಲದೆಯೇ, ತನಗೆ ಸರಿಕಂಡ ರೀತಿಯಲ್ಲಿ ಅಧಿಸೂಚನೆಗಳ ಮೂಲಕ ಏರಿಸುವ ಅವಕಾಶವನ್ನು 2009ರಲ್ಲಿ ಮಂಡಿಸಿದ ಈ ಮಸೂದೆಯಲ್ಲಿ ಅಳವಡಿಸಿತ್ತು. ಇದು ಸರಕಾರದ ನಿಜವಾದ ಉದ್ದೇಶದ ಬಗ್ಗೆ ಸಂದೇಹ ಮೂಡಿಸುತ್ತದೆ ಎಂದು ಎಐಐಇಎ ವಾದಿಸಿತು. ಈಗ ಬಂಡವಾಳದ ಮೊತ್ತವನ್ನು 100 ಕೋಟಿ ರೂ.ಗೆ ಏರಿಸಲು ಈ ಮಸೂದೆ



ವೇದರಾಜ ಎನ್.ಕೆ.

ಅವಕಾಶ ನೀಡಿದರೂ, ಅದನ್ನು ಸರಕಾರವೇ ಸಂಸತ್ತಿನ ಮೂಲಕ ಒದಗಿಸಬೇಕು, ಅಷ್ಟೇ ಅಲ್ಲ, ಮುಂದೆಯೂ ಯಾವುದೇ ಹೆಚ್ಚಳವನ್ನು ಸಂಸತ್ತಿನ ಅನುಮತಿ ಪಡೆದು ಸರಕಾರವೇ ಹಣವನ್ನು ಒದಗಿಸುವ ಮೂಲಕವೇ ಮಾಡಬೇಕು ಎಂದು ಈ ತಿದ್ದುಪಡಿ ವಿಧಿಸಿದೆ. ಅಂದರೆ ಶೇರು ಹಿಂಪಡಿಕೆಯ ಮೂಲಕ ಕ್ರಮೇಣ ಎಲ್‌ಐಸಿಯನ್ನು ಖಾಸಗೀಕರಿಸುವ ಹುನ್ನಾರ ಕೈಗೂಡಿಲ್ಲ.

ಎಲ್‌ಐಸಿ ನೀಡಿರುವ ಜೀವ ವಿಮಾ ಪಾಲಿಸಿಗಳಿಗೆ ಇರುವ ಸಾರ್ವಭೌಮ ಗ್ಯಾರಂಟಿಯನ್ನು, ಅಂದರೆ ಭಾರತ ಸರಕಾರದ ಗ್ಯಾರಂಟಿಯನ್ನು ಹಿಂತೆಗೆದುಕೊಳ್ಳಬೇಕು ಎಂದು 2009ರಲ್ಲಿ ಮಂಡಿಸಿದಾಗ ಈ ತಿದ್ದುಪಡಿಯಲ್ಲಿ ಹೇಳಲಾಗಿತ್ತು. ಇದು ಸಮಾನ ಅವಕಾಶಗಳ ಹೆಸರಿನಲ್ಲಿ ದೇಶಿ–ವಿದೇಶಿ ಖಾಸಗಿ ಕಂಪನಿಗಳ ಪ್ರಮುಖ ಬೇಡಿಕೆಯಾಗಿತ್ತು. ಈಗ ಅಂಗೀಕರಿಸಿರುವ ತಿದ್ದುಪಡಿ ಈ ಗ್ಯಾರಂಟಿಯನ್ನು ಮುಂದುವರೆಸಲಾಗುವುದು ಎಂದಿದೆ. ಸಾರ್ವಜನಿಕ ವಲಯದ ಜೀವ ವಿಮೆಯ ಬೆಳವಣಿಗೆಯನ್ನು ತಡೆಯುವ ಇನ್ನೊಂದು ಕ್ರಮವಾಗಿ ಹೊಸದಾಗಿ ಎಲ್‌ಐಸಿ ಶಾಖೆಗಳನ್ನು ತೆರೆಯುವ ಅಧಿಕಾರವನ್ನು ಮೊಟಕುಗೊಳಿಸುವ ಪ್ರಸ್ತಾವ ಈ ತಿದ್ದುಪಡಿಯಲ್ಲಿತ್ತು. ಈಗ ಅಂಗೀಕಾರಗೊಂಡಿರುವ ತಿದ್ದುಪಡಿಯಲ್ಲಿ ತನ್ನ ವ್ಯವಹಾರದ ವಿಸ್ತರಣೆಯ ಅಗತ್ಯಗಳಿಗನುಗುಣವಾಗಿ ಹೊಸ ಶಾಖೆಗಳನ್ನು, ವಿಭಾಗಗಳನ್ನು ತೆರೆಯುವ ಸ್ವಾತಂತ್ರ್ಯವನ್ನು ಎಲ್‌ಐಸಿ ಮತ್ತೆ ಪಡೆಯುವಂತಾಗಿದೆ.


ಇದು ವರೆಗೆ ಎಲ್‌ಐಸಿಯ ಮಿಗುತಾಯದ ಶೇ. 95ನ್ನು ಪಾಲಿಸಿದಾರರಿಗೆ ಬೋನಸ್ ರೂಪದಲ್ಲಿ ಹಂಚಲಾಗುತ್ತಿತ್ತು, ಉಳಿದುದನ್ನು ಸರಕಾರಕ್ಕೆ ಅದು 55 ವರ್ಷಗಳ ಹಿಂದೆ ತೊಡಗಿಸಿದ 5 ಕೋಟಿ ರೂ. ಬಂಡವಾಳಕ್ಕೆ ಪ್ರತಿಫಲವಾಗಿ ಕೊಡಲಾಗುತ್ತಿತ್ತು. 2009ರ ತಿದ್ದುಪಡಿ ಇದನ್ನು 90ಶೇ.ಕ್ಕಿಳಿಸಿ ಸರಕಾರದ ಪಾಲನ್ನು 10ಶೇ.ಕ್ಕೇರಿಸಿತು. ಈ ರೀತಿ ಪಾಲಿಸಿದಾರರ ಬೋನಸನ್ನು ಕಡಿತ ಮಾಡುವುದನ್ನು ಎಐಐಇಎ ಬಲವಾಗಿ ವಿರೋಧಿಸಿತ್ತು. ಆದರೆ ಸರಕಾರ ಈ ಎಐಐಇಎ ಬೇಡಿಕೆಯನ್ನು ತಿರಸ್ಕರಿಸಿದೆ. ಸಂಸತ್ತಿನಲ್ಲಿ ಎಡಪಕ್ಷಗಳೂ ಈ ತಿದ್ದುಪಡಿಯನ್ನು ಕೈಬಿಡುವಂತೆ ಆಗ್ರಹ ಪಡಿಸಿದವು. ಆದರೆ ಬಿಜೆಪಿಯ ಬೆಂಬಲದೊಂದಿಗೆ ಈ ಪಾಲಿಸಿದಾರ–ವಿರೋಧಿ ಅಂಶ ತಿದ್ದುಪಡಿಯಲ್ಲಿ ಉಳಿದುಕೊಂಡಿದೆ. ಆದರೆ, ಎಡಪಕ್ಷಗಳ ಒತ್ತಡದಿಂದಾಗಿ ತಿದ್ದುಪಡಿಯ ಈ ಅಂಶ ಇದುವರೆಗಿನ ಪಾಲಿಸಿಗಳಿಗೆ ಅನ್ವಯವಾಗುವುದಿಲ್ಲ ಎಂದು ಸರಕಾರ ಒಪ್ಪಿಕೊಂಡಿದೆ.

ಸಹಜವಾಗಿಯೇ, ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಏರಿಕೆಯನ್ನು ಅಮಾನತಿನಲ್ಲಿಟ್ಟದ್ದು ನವ–ಉದಾರವಾದಿಗಳಿಗೆ ಭಾರೀ ಕಸಿವಿಸಿ ಉಂಟು ಮಾಡಿರುವಂತೆ ಎಲ್‌ಐಸಿ ತಿದ್ದುಪಡಿ ಮಸೂದೆ ಈ ರೀತಿಯ ಬದಲಾವಣೆಗಳೊಂದಿಗೆ ಪಾಸಾಗಿರುವುದು ನವ–ಉದಾರವಾದಿಗಳ ಕಸಿವಿಸಿಯನ್ನು ಇನ್ನಷ್ಟು ಹೆಚ್ಚಿಸಿದೆ.

★

ಎಫ್‌ಡಿಐ ಮಿತಿ ಹೆಚ್ಚಳಕ್ಕೂ ನಕಾರ

ಈ ತಿದ್ದುಪಡಿ ಮಸೂದೆಯ ಅಂಗೀಕಾರದ ಬೆನ್ನಲ್ಲೇ ಹಣಕಾಸು ಸ್ಥಾಯೀ ಸಮಿತಿ ವಿಮಾ ಕಾನೂನುಗಳು (ತಿದ್ದುಪಡಿ) ಮಸೂದೆಯ ಮೇಲೆ ತನ್ನ ವರದಿಯನ್ನು ಎರಡೂ ಸದನಗಳಿಗೆ ಸಲ್ಲಿಸಿದೆ. ಮುಖ್ಯವಾಗಿ ವಿಮಾ ವಲಯದಲ್ಲಿ ಎಫ್‌ಡಿಐ ಮಿತಿಯನ್ನು 49ಶೇ.ಕ್ಕೆ ಏರಿಸುವುದು, ಮತ್ತು ಒಟ್ಟಾರೆಯಾಗಿ ಭಾರತದ ವಿಮಾ ಉದ್ದಿಮೆಯಲ್ಲಿ ಮತ್ತಷ್ಟು ಉದಾರೀಕರಣ ತಂದು ಅದನ್ನು ಜಾಗತಿಕ ಹಣಕಾಸು ಬಂಡವಾಳದ ವಿನ್ಯಾಸಗಳಿಗೆ ಒಳಪಡಿಸುವುದು ಇದರ ಗುರಿಯಾಗಿತ್ತು. ಆದರೆ ಸ್ಥಾಯೀ ಸಮಿತಿಯ ವರದಿ ಇದಕ್ಕೂ ತಣ್ಣೀರೆರಚಿದೆ. ಸದ್ಯದ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಈ ಏರಿಕೆಯ ಅಗತ್ಯವೇ ಇಲ್ಲ ಎಂದಿರುವ ಸ್ಥಾಯೀ ಸಮಿತಿಯ ವರದಿ ಇನ್ನೂ ಹಲವು ಇಂತಹ ನವ–ಉದಾರವಾದಿ ಪ್ರಯತ್ನಗಳ ಅಗತ್ಯವಿಲ್ಲ ಎಂದಿದೆ. ಆದರೆ ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ವಲಯದಲ್ಲಿ ಶೇರು ಹಿಂಪಡಿಕೆಯ, ಅಂದರೆ ಅದನ್ನು ಖಾಸಗೀಕರಿಸುವ ಪ್ರಯತ್ನಕ್ಕೆ ಅವಕಾಶವನ್ನು ಉಳಿಸಿದೆ. ಸ್ಥಾಯೀ ಸಮಿತಿಯ ಸಿಪಿಐ(ಎಂ) ಸದಸ್ಯ ಮೊಯಿನುಲ್ ಹಸನ್ ಇದರ ವಿರುದ್ಧ ಅಸಮ್ಮತಿಯ ಟಿಪ್ಪಣಿಯನ್ನು ಸಲ್ಲಿಸಿದ್ದು ಅದನ್ನೂ ಸಂಸತ್ತಿಗೆ ಸಲ್ಲಿಸಲಾಗಿದೆ.



ಕೃಪೆ: ದಿ. ಹಿಂದೂ

ವಿದೇಶಿ ಬಂಡವಾಳಗರಿಗೆ, ವಿಮಾವಲಯದಲ್ಲಿ ಎಫ್‌ಡಿಐ ಮಿತಿ ಏರಿಕೆ

ಬಿಎಸ್‌ಎನ್‌ಎಲ್ ಉಳಿಸಲು ನೌಕರರ ದೇಶವ್ಯಾಪಿ ಮುಷ್ಕರ

ಖಾಸಗಿಯವರಿಗೆ ಪ್ರಯೋಜನ ಒದಗಿಸಲು ಬೊಕ್ಕಸಕ್ಕೆ ಕೋಟಿಗಟ್ಟಲೆ ನಷ್ಟವನ್ನೂ ಲೆಕ್ಕಿಸದ ಯುಪಿಎ–2 ಸರಕಾರ, ಇನ್ನೊಂದೆಡೆ ಸಾರ್ವಜನಿಕ ವಲಯದ ದೂರಸಂಪರ್ಕ ಕಂಪನಿ ಬಿಎಸ್‌ಎನ್‌ಎಲ್ ನ ಕತ್ತು ಹಿಸುಕುವ ಕೆಲಸವನ್ನು ಮಾಡಿಕೊಂಡು ಬಂದಿದೆ. ಈಗ 2ಜಿ ಹಗರಣದಲ್ಲಿ ಮುಖಭಂಗವನ್ನು ಅನುಭವಿಸುತ್ತಿರುವಾಗಲೂ ನವ–ಉದಾರವಾದಿ ಧೋರಣೆಗಳಿಗೆ ಆತುಕೊಂಡಿರುವ ಅದು ಆ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತಿದೆ, ಖಾಸಗಿಯವರೊಂದಿಗೆ ಅದು ಪರಿಣಾಮಕಾರಿಯಾಗಿ ಸ್ಪರ್ಧಿಸದಂತೆ ಮಾಡುವ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದನ್ನು ವಿರೋಧಿಸಿ 2,76,000 ನೌಕರರು ಮತ್ತು ಅಧಿಕಾರಿಗಳು ಹಾಗೂ 50 ಸಾವಿರ ಕಾಂಟ್ರಾಕ್ಟ್ ನೌಕರರು ಡಿಸೆಂಬರ್ 15ರಂದು ದೇಶಾದ್ಯಂತ ಮುಷ್ಕರ ನಡೆಸಿದ್ದಾರೆ.

ಸಿಪಿಎಂ ಉಡುಪಿ ಜಿಲ್ಲಾ ಸಮ್ಮೇಳನ.....

ಪುಟ 6 ರಿಂದ

ವಿರೋಧ ಪಕ್ಷವಾಗಿರುವ ಕಾಂಗ್ರೇಸ್ ಈ ಬಗ್ಗೆ ಯಾವುದೇ ಗಂಭೀರ ಚರ್ಚೆಗಳನ್ನು ಮಾಡುತ್ತಿಲ್ಲ. ಇದರ ಪರಿಣಾಮವಾಗಿ ಲಕ್ಷಾಂತರ ಕೋಟಿ ರೂಪಾಯಿಗಳ ಬಿಲ್‌ಗಳನ್ನು ಯಾವುದೇ ಚರ್ಚೆಗಳಿಲ್ಲದೆ ಸದನದಲ್ಲಿ ಪಾಸ್ ಮಾಡಲಾಗುತ್ತಿದೆ ಎಂದು ಅವರು ದೂರಿದರು.

ಸಭೆಯಲ್ಲಿ ಹೊಸ ಜಿಲ್ಲಾ ಸಮಿತಿಯ ಸದಸ್ಯರಾದ ಪಿ. ವಿಶ್ವನಾಥ ರೈ., ಯು. ದಾಸ ಭಂಡಾರಿ, ಮಹಾಬಲ ವಡೇರಹೊಬಳಿ, ಎ.ಎಸ್. ಆಚಾರ್ಯ, ದೋಗು ಸುವರ್ಣ, ಎಚ್. ವಿಠಲ, ವೆಂಕಟೇಶ್ ಕೋಣಿ, ರಮೇಶ್ ಮೆಂಡನ್, ರಾಜೀವ ಪಡುಕೋಣೆ ಮತ್ತು ಎಚ್ ನರಸಿಂಹ ಉಪಸ್ಥಿತರಿದ್ದರು.

ಆರಂಭದಲ್ಲಿ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಅದಮಾರು ಶ್ರೀಪತಿ ಆಚಾರ್ಯ ಸ್ವಾಗತ ಭಾಷಣ ಮಾಡಿದರು. ಇದಕ್ಕೂ ಮುನ್ನ ಉಡುಪಿ ಸರ್ವೀಸ್ ಬಸ್ ನಿಲ್ದಾಣದಿಂದ ಬ್ರಹ್ಮಗಿರಿಯವರೆಗೆ ಪಕ್ಷದ ಕಾರ್ಯಕರ್ತರ, ಕೃಷಿ ಕೂಲಿಕಾರರ, ಕಟ್ಟಡ, ಹಂಚು ಮತ್ತು ಬೀಡಿ ಕಾರ್ಮಿಕರ ವರ್ಣರಂಜಿತ ಬೃಹತ್ ಮೆರವಣಿಗೆ ನಡೆಯಿತು. ಕೊನೆಯಲ್ಲಿ ಜಿಲ್ಲಾ ಸಮಿತಿಯ ಸದಸ್ಯರಾದ ಕಾ। ರಮೇಶ ಮೆಂಡನ್ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಅದಕ್ಕೂ ಮೊದಲು ಉಡುಪಿ ಸರ್ವಿಸ್ ಬಸ್ ನಿಲ್ದಾಣದಿಂದ ಬ್ರಹ್ಮಗಿರಿಯ ಲಯನ್ಸ್ ಕ್ಲಬ್‌ವರೆಗೆ ಪಕ್ಷ ಕಾರ್ಯಕರ್ತರ, ರೈತರ, ಕಾರ್ಮಿಕರ ವರ್ಣರಂಜಿತ ಬೃಹತ್ ಮೆರವಣಿಗೆ ನಡೆಯಿತು.

ಪ್ರತಿನಿಧಿ ಸಮ್ಮೇಳನವು ಕೆ.ಶಂಕರ್ ಅವರನ್ನು ಮುಂದಿನ ಅವಧಿಗೆ ಪಕ್ಷದ ಉಡುಪಿ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ ಪುನರಾಯ್ಕೆ ಮಾಡಿರುತ್ತದೆ. ಬಹಿರಂಗ ಸಭೆಯಲ್ಲಿ ಉಡುಪಿ ಜಿಲ್ಲಾ ಸಮಿತಿ ಸದಸ್ಯರಾದ ಪಿ.ವಿಶ್ವನಾಥ ರೈ, ಯು.ದಾಸ್ ಭಂಡಾರಿ, ಅದಮಾರು ಶ್ರೀಪತಿ ಆಚಾರ್ಯ, ಮಹಾಬಲ ವಡೇರಹೋಬಳಿ, ಎಚ್.ನರಸಿಂಹ, ರಮೇಶ್ ಮೆಂಡನ್, ದೋಗು ಸುವರ್ಣ, ವಿಠಲ ಪೂಜಾರಿ, ವೆಂಕಟೇಶ್ ಕೋಣಿ, ರಾಜೀವ್ ಪಡುಕೋಣೆ ಉಪಸ್ಥಿತರಿದ್ದರು. ●

ಉತ್ಸಾಹ ತುಂಬಿದ ಸಿಪಿಐ(ಎಂ) ದ.ಕ. ಜಿಲ್ಲಾಸಮ್ಮೇಳನ

ಪುಟ 16 ರಿಂದ

ಯಕ್ಷಗಾನ ಭೂತ ವೇಷಗಳು, ನಾಸಿಕ್‌ಬ್ಯಾಂಡ್, ತಾಲೀಮು, ಗೊಂಬೆಗಳು, ಜಯಘೋಷಗಳು, ಸವಾಲುಗಳು - ಹೀಗೆ ರ್‍ಯಾಲಿಯು ಸಶಬ್ದವಾಗಿಯೂ ವರ್ಣಮಯವಾಗಿಯೂ ಇದ್ದವು. ಪಥಚಂಚಲನ ಮತ್ತು ರ್‍ಯಾಲಿ ನಗರ ಮಧ್ಯೆ ಹಾದು ಹೋಗುತ್ತಿದ್ದಂತೆ ರಸ್ತೆ ಬದಿಗಳಲ್ಲಿ ನಿಂತಿದ್ದ ಜನ ನಿಬ್ಬೆರಗಾಗಿ ನೋಡಿದರು. ಮಂಗಳೂರಿನ ಮಟ್ಟಿಗೆ ರ್‍ಯಾಲಿ ಬಹಳ ಅಪೂರ್ವದ್ದಾಗಿತ್ತು.

ಬಹಿರಂಗ ಸಭೆಯ ಪ್ರಧಾನ ಭಾಷಣವನ್ನು ಸಿಪಿಎಂ ರಾಜ್ಯಸಮಿತಿ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಮಾಡಿದರು. ಜಿ.ಎನ್. ನಾಗರಾಜ್ ಮತ್ತು ಕೆ.ಆರ್. ಶ್ರೀಯಾನ್ ಕೂಡಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬಿ. ಮಾಧವ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಜೆ. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ವಸಂತ ಆಚಾರಿ ಸಮ್ಮೇಳನ ಕೈಗೊಂಡ ನಿರ್ಣಯಗಳನ್ನು ವಿವರಿಸಿ ಹೇಳಿದರು. ಸುನಿಲ್ ಕುಮಾರ್ ಬಜಾಲ್ ಧನ್ಯವಾದ ಅರ್ಪಿಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಬಹಿರಂಗ ಸಭೆಯ ವೇದಿಕೆಯಲ್ಲಿ ಉಪಸ್ಥಿತರಿದ್ದರು. ●

ಮಂಗಳೂರು ಬೃಹತ್ ಬಹಿರಂಗ ಸಭೆಯನ್ನುದ್ದೇಶಿಸಿ ವಿ.ಜೆ.ಕೆ. ನಾಯರ್ ಮಾತನಾಡುತ್ತಿರುವುದು ಮತ್ತು ನೆರೆದ ಜನ





ಪರಿಣಾಮಕಾರಿ ಲೋಕಪಾಲ ಅಗತ್ಯ

ಪುಟ 7 ರಿಂದ

ಅಲ್ಪಸಂಖ್ಯಾತರು ಮತ್ತು ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯವಿರುವಂತೆ ಮಾಡಬೇಕು.

8. ಈ ನೇಮಕಗಳಿಗೆ ಆಯ್ಕೆ ಸಮಿತಿಯ ಪರಿಶೀಲನೆಗೆ ಹೆಸರುಗಳ ಪಟ್ಟಿಯನ್ನು ತಯಾರಿಸಲು ಒಂದು ಶೋಧನಾ ಸಮಿತಿಯ ರಚನೆ ಕಡ್ಡಾಯವಾಗಬೇಕು.

9. ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು 1988ರ ಭ್ರಷ್ಟಾಚಾರ ನಿರೋಧ ಕಾನೂನಿನ ಅಡಿಯಲ್ಲಿ ಭ್ರಷ್ಟಾಚಾರ ಎಂಬ ಪದದ ನಿರೂಪಣೆಗೆ ತಿದ್ದುಪಡಿ ತರಬೇಕು ಎಂದು ಸಿಪಿಐ(ಎಂ) ಕೇಳಿದೆ. ಈಗ ಈ ಕಾನೂನು ಅಕೃತ್ಯಗಳ ಬಗ್ಗೆ ಹೇಳುತ್ತದೆ, ಆದರೆ ಕರ್ತವ್ಯಲೋಪಗಳ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಹೇಳುವುದಿಲ್ಲ. ಅಂದರೆ ಸದ್ಯಕ್ಕಿರುವ ಕಾನೂನಗಳು ಮತ್ತು ನಿಯಮಗಳನ್ನು ದುರುದ್ದೇಶಪೂರ್ವಕವಾಗಿ ಉಲ್ಲಂಘಿಸಿ ಅನುಚಿತ ಪ್ರಯೋಜನವನ್ನು ಕೊಡಿಸುವವರ ಅಥವ ಪಡೆಯುವವರ ಬಗ್ಗೆ ಸಾಕಷ್ಟು ಅಂಶಗಳಿಲ್ಲ. ಯಾವ ವ್ಯಕ್ತಿಗಳ ಕೃತ್ಯಗಳು ಮತ್ತು ನಿರ್ಣಯಗಳಿಂದ ಸಾರ್ವಜನಿಕ ಖಜಾನೆಗೆ ನಷ್ಟವಾಗಿದೆಯೋ ಅಂತವರೂ ಈ ಕಾನೂನಿನ ವ್ಯಾಪ್ತಿಯೊಳಗೆ ಬರುವಂತಿರಬೇಕು.

10. ಸಂಸತ್ತಿನ ಸದಸ್ಯರಿಗೆ ವಾಕ್ ಸ್ವಾತಂತ್ರ್ಯ ಮತ್ತು ಸಂಸತ್ತಿನಲ್ಲಿ ಮತದಾನದ ವಿಷಯಗಳಲ್ಲಿ ಸಂವಿಧಾನದ ಅಡಿಯಲ್ಲಿ ರಕ್ಷಣೆ ಇದೆಯಾದರೂ. ಇದನ್ನು ಸಂಸತ್ ಸದಸ್ಯರ ಭ್ರಷ್ಟ ಆಚರಣೆಗಳಿಗೆ ವಿಸ್ತರಿಸಲು ಸಾಧ್ಯವಿಲ್ಲ. ಇದಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು, ಅಗತ್ಯವೆನಿಸಿದರೆ ಸಂವಿಧಾನದ 105ನೇ ಕಲಮಿಗೆ ತಿದ್ದುಪಡಿ ತರುವುದೂ ಇದರಲ್ಲಿ ಸೇರಿರಬೇಕು. ಇಲ್ಲವಾದರೆ, ಪಿ.ವಿ.ನರಸಿಂಹರಾವ್ ಸರಕಾರದ ವಿರುದ್ಧ ಅವಿಶ್ವಾಸ ಠರಾವಿನ ಮೇಲಿನ ಮತದಾನಕ್ಕೆ ಸಂಬಂಧಪಟ್ಟ ಕುಖ್ಯಾತ ಜೆಎಂಎಂ ಲಂಚದ ಕೇಸಿನಲ್ಲಾದಂತೆ, ಲಂಚ ಕೊಟ್ಟವರ ಮೇಲೆ ಕ್ರಿಮಿನಲ್ ಕ್ರಮಗಳು ಜರಗುವ, ಆದರೆ ಲಂಚ ಪಡೆದ ಸಂಸತ್ ಸದಸ್ಯ ನಿರ್ದೋಷಿಯೆಂದೆನಿಸುವ ಅತಾರ್ಕಿಕ ಸನ್ನಿವೇಶಗಳು ಸೃಷ್ಟಿಯಾಗುತ್ತವೆ. ಇದಕ್ಕೆ ಇನ್ನಷ್ಟು ಭೀಕರವಾದ ಉದಾಹರಣೆಯೆಂದರೆ, 2008ರಲ್ಲಿ ಭಾರತ–ಅಮೆರಿಕ ಪರಮಾಣು ವ್ಯವಹಾರದಲ್ಲಿ ವಿಶ್ವಾಸ ಮತದ ಸಂದರ್ಭದ ವೋಟಿಗಾಗಿ ನೋಟು ಹಗರಣ.

11. ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು, ಲೋಕಪಾಲಕ್ಕೆ ಕಾರ್ಪೊರೇಟ್ ಗುಂಪುಗಳು ಸೇರಿಕೊಂಡಿರುವ ಕೇಸುಗಳನ್ನು ತನಿಖೆ ಮಾಡುವ ಮತ್ತು ಅಂತವರು ಭ್ರಷ್ಟ ವಿಧಾನಗಳಲ್ಲಿ ಪಡೆದ ಕಾಂಟ್ರಾಕ್ಟುಗಳು, ಲೈಸೆನ್ಸುಗಳು ಇತ್ಯಾದಿಗಳ ರದ್ದತಿಯ ಶಿಫಾರಸು ಮಾಡುವ ಅಧಿಕಾರಗಳಿರಬೇಕು. ಇಂತವರನ್ನು ಕಪ್ಪು ಪಟ್ಟಿಗೆ ಸೇರಿಸಬೇಕೆಂದು ಮತ್ತು ಅವರಿಂದ ಬೊಕ್ಕಸಕ್ಕೆ ಆಗಿರುವ ನಷ್ಟವನ್ನು ವಸೂಲು ಮಾಡಬೇಕೆಂದು ಶಿಫಾರಸು ಮಾಡುವ ಹಕ್ಕು ಕೂಡ ಲೋಕಪಾಲಕ್ಕೆ ಇರಬೇಕು. ಇದೇ ರೀತಿಯಲ್ಲಿ ಸರಕಾರದಿಂದ ಪೋಷಣೆ ಮತ್ತು ಹಣ ಪಡೆಯುವ ಎಲ್ಲ ಸಂಘಟನೆಗಳು ಮತ್ತು ಸಂಘಗಳು ಕೂಡ ಅದರ ವ್ಯಾಪ್ತಿಯಲ್ಲಿ ಬರಬೇಕು. ಅಂತಿಮವಾಗಿ, ಜವಾಬುದಾರಿಕೆ ಮತ್ತು ಸ್ವಾಯತ್ತತೆಯ ನೀತಿಗಳು ಈ ಶಾಸನದಲ್ಲಿ ಸರಿಯಾಗಿ ಪ್ರತಿಷ್ಠಾಪನೆಗೊಂಡಿರಬೇಕು. ಉದಾಹರಣೆಗೆ, ಆಡಳಿತ ನಡೆಸುತ್ತಿರುವ ಸರಕಾರ ತನ್ನ ಇಷ್ಟದಂತೆ ಲೋಕಪಾಲರನ್ನು ತೆಗೆದು ಹಾಕಲು ಸಾಧ್ಯವಾಗಬಾರದು. ಈ ಎರಡೂ ಉದ್ದೇಶಗಳ ಈಡೇರಿಕೆ ಸರಿಯಾಗಿ ಆಗುವಂತೆ ಸರಿಯಾದ ವಿಧಾನಗಳನ್ನು ವಿಧಿಸಬೇಕು.

ಈ ಎಲ್ಲ ಪ್ರಶ್ನೆಗಳ ಮೇಲೆ ಸರಕಾರ ರಾಜಕೀಯ ಪಕ್ಷಗಳ ನಡುವೆ ಇನ್ನೂ ವಿಸ್ತಾರವಾದ ಸಮಾಲೋಚನೆಗಳಿಗೆ ಮೂರ್ತ ಸೂಚನೆಗಳನ್ನು ಪ್ರಸ್ತುತ ಪಡಿಸಬೇಕು ಎಂದು ಸಿಪಿಐ(ಎಂ) ಸರ್ವಪಕ್ಷ ಸಭೆಯಲ್ಲಿ ಸೂಚಿಸಿತು. ಈ ಎಲ್ಲ ಅಂಶಗಳನ್ನು ಪೂರ್ಣವಾಗಿ ಒಳಗೊಂಡಾಗ ಮಾತ್ರವೇ ನಮ್ಮ ದೇಶದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಮುಂದೊಯ್ಯಲು ಸಾಧ್ಯ.

ಸರಕಾರ ಈ ವಿಷಯದಲ್ಲಿ ಅಗತ್ಯ ತುರ್ತಿನೊಂದಿಗೆ ಕ್ರಿಯೆಗಿಳಿಯುವಂತೆ ಮಾಡಲು ಸಂಸತ್ತಿನ ಒಳಗೂ ಮತ್ತು ಹೊರಗೂ ಜನತೆಯ ಒತ್ತಡವನ್ನು ಹೆಚ್ಚಿಸಬೇಕಾಗಿದೆ. ●

......ವಿದ್ಯಾರ್ಥಿಗಳ ಮೇಲೆ ಅನಾಗರೀಕ ಹಲ್ಲೆ

ಪುಟ 5 ರಿಂದ

ಮೌನವಾಗಿದ್ದರೇ ಹೊರತು ಲಾಠಿಚಾರ್ಜ್ ನಿಲ್ಲಿಸುವಂತೆ ಪೋಲೀಸರಿಗೆ ಯಾವುದೇ ಸೂಚನೆ ನೀಡದಿರುವುದು ಸದಾನಂದಗೌಡರ ನೈಜ ಮನಸ್ಥಿತಿ ಬಯಲಾಯಿತು. ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಅನಂತ್‌ನಾಯ್ಕ್ ಎನ್. ರಾಜ್ಯ ಮುಖಂಡರಾದ ...ರಾಜ್ ದೇಸಾಯಿ, ಬಸವರಾಜ್ ಪೂಜಾರ್, ಮಾರುತಿ ...ನಿಗೇರ್, ರೇಣುಕಾ ಕಹಾರ್ ಸೇರಿದಂತೆ ಅನೇಕ ಸಂಗಾತಿಗಳಿಗೆ ತೀವ್ರ ಗಾಯಗಳಾಗಿವೆ. ಒಟ್ಟು 50 ಜನ ಸಂಗಾತಿಗಳನ್ನು ಬಂಧಿಸಲಾಯಿತು, 22 ಜನರ ಮೇಲೆ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಲಾಯಿತು.

ಲಾಠಿ ಚಾರ್ಜ ಖಂಡಿಸಿ ಪ್ರತಿಭಟನೆ : ಡಿಸೆಂಬರ್ 10 ರಂದು ಗಂಗಾವತಿಯಲ್ಲಿ ಲಾಠಿಚಾರ್ಜ್ ಖಂಡಿಸಿ ಎಸ್‌ಎಫ್‌ಐ - ಡಿವೈಎಫ್‌ಐ – ಸಿಐಟಿಯು - ಎಐಟಿಯುಸಿ – ಪ್ರಾಂತ ರೈತ ಸಂಘ – ಪ್ರಾಂತ ಕೃಷಿ ಕೂಲಿಕಾರರ ಸಂಘ -ಅಂಗನವಾಡಿ ನೌಕರರ ಸಂಘ – ಸಿಪಿಐಎಂ ಸೇರಿದಂತೆ ಪ್ರಗತಿಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾ ಮೆರವಣಿಗೆ ಪ್ರಾರಂಭವಾಗುತ್ತಿದ್ದಂತೆ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮಣ ಸವದಿ, ಶಾಸಕರಾದ ಪರಣ್ಣ ಮನವಳ್ಳಿ, ಕರಡಿ ಸಂಗಣ್ಣ, ವಿಧಾನ ಪರಿಷತ್ ಸದಸ್ಯರಾದ ಹಾಲಪ್ಪ ಆಚಾರ್ ಹಾಗೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಆಗಮಿಸಿ ಒಂದು ಗಂಟೆ ಕಾಲ ...ಮೇಲೆ ಕುಳಿತು ನಮ್ಮ ಬೇಡಿಕೆಗಳನ್ನು ಆಲಿಸಿದರು. ನಂತರ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರು ಘಟನೆ ಬಗ್ಗೆ ತನಿಖೆ ...ಸಿ ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಹಾಗೂ ಬಂಧಿಸಿರುವ ಎಲ್ಲಾ ವಿದಾರ್ಥಿ ಮುಖಂಡರನ್ನು ಬಿಡುಗಡೆಗೊಳಿಸಿ ಹಾಕಿರುವ ಕೇಸುಗಳನ್ನು ವಾಪಸ್ ಪಡೆಯಲು ಸಚಿವ ಸಂಪುಟದಲ್ಲಿ ಒತ್ತಾಯಿಸುವುದಾಗಿ ಮತ್ತು ...ಲೆ ಮುಚ್ಚುವ ಆದೇಶವನ್ನು ವಾಪಾಸ್ ಪಡೆಯಲು ಸಚಿವ ಸಂಪುಟದಲ್ಲಿ ಚರ್ಚಿಸುವೆ ಎಂದು ಭರವಸೆ ನೀಡಿದರು. ಈ ಘಟನೆ ಖಂಡಿಸಿ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆಗಳಾಗಿವೆ.

ಜೈಲಿಗೆ ಸಾಹಿತಿಗಳು ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರ ಭೇಟಿ : ಇಬ್ಬರು ವಿದ್ಯಾರ್ಥಿನಿಯರು ಸೇರಿದಂತೆ 22 ಜನ ಎಸ್‌ಎಫ್‌ಐ ಮುಖಂಡರನ್ನು ಬಂಧಿಸಿ ಗಂಗಾವತಿಯ ಉಪ ಕಾರಾಗ್ರಹದಲ್ಲಿ ಇಡಲಾಗಿತ್ತು. ಜೈಲಿನಲ್ಲಿರುವ ಮುಖಂಡರನ್ನು ಸಾಹಿತಿಗಳಾದ ಡಾ॥ ಮಲ್ಲಿಕಾ ಘಂಟಿ, ಸತೀಶ್ ಕುಲಕರ್ಣಿ, ಪ್ರಕಾಶ್ ಜೈನ್, ಪ್ರಾಂತ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ಕಾಂ॥ನಿತ್ಯಾನಂದ ಸ್ವಾಮಿ, ಕನ್ನಡಪರ, ದಲಿತಪರ ಸಂಘಟನೆಗಳ ಮುಖಂಡರು ಭೇಟಿ ನೀಡಿ ಹೋರಾಟಕ್ಕೆ ಬೆಂಬಲವನ್ನು ವ್ಯಕ್ತಪಡಿಸಿದರು.

12 ಡಿಸೆಂಬರ್ 2011 ರಂದು ಬಂಧಿತರಾದ ಎಲ್ಲರನ್ನು ನ್ಯಾಯಾಲಯ ಜಾಮೀನಿನ ಮೇಲೆ ಬಿಡುಗಡೆಗೊಳಿಸಿತ್ತು. ಈ ಸಂದರ್ಭದಲ್ಲಿ ಜೈಲಿನಿಂದ ಬಿಡುಗಡೆಯಾದ ಎಲ್ಲಾ ಸಂಗಾತಿಗಳನ್ನು ಆತ್ಮೀಯವಾಗಿ ಸ್ವಾಗತಿಸಿ ಅಭಿನಂದಿಸಲಾಯಿತು. ಗಂಗಾವತಿಯ ಕೋರ್ಟ್ ರಸ್ತೆಯಿಂದ ಬಸ್ ನಿಲ್ದಾಣದವರೆಗೂ ಮೆರವಣಿಗೆ ನಡೆಸಿ ಅಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್, ಅಧ್ಯಕ್ಷರಾದ ಅನಂತ್ ನಾಯ್ಕ್, ಪ್ರಾಂತ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ಕಾಂ॥ನಿತ್ಯಾನಂದ ಸ್ವಾಮಿ, ಕೆಪಿಆರ್‌ಎಸ್ ನ ಜಿಲ್ಲಾಧ್ಯಕ್ಷರಾದ ಆರ್.ಕೆ.ದೇಸಾಯಿ, ಸಿಐಟಿಯು ಮುಖಂಡರಾದ ನಿರುಪಾದಿ ಬೆಣಕಲ್, ಹಣವಾಳ್ ಲಿಂಗಪ್ಪ ಮಾತನಾಡಿ ವಿದ್ಯಾರ್ಥಿ ಮುಖಂಡರ ಮೇಲೆ ಹಾಕಿರುವ ಸುಳ್ಳು ಕೇಸುಗಳನ್ನ ವಾಪಸ್ ಪಡೆಯಬೇಕು, ಲಾಠಿಚಾರ್ಜ್ ಮಾಡಿರುವ ಅಧಿಕಾರಿಗಳನ್ನು ವಜಾ ಮಾಡಬೇಕು, ಹಾಗೂ ಸರ್ಕಾರಿ ಕನ್ನಡ ಶಾಲೆಗಳನ್ನು ಮುಚ್ಚುವ ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು. ಸಭೆಯಲ್ಲಿ ರಾಜ್ಯ ಸಮಿತಿ ಸದಸ್ಯರಾದ ಅಮರೇಶ್ ಕಡಗದ್ ಮುಖಂಡರಾದ ಬಾಳಪ್ಪ, ಸುಭಾಷ್, ವೀರಣ್ಣ, ರಸೂಲ್, ಅಮರೇಶ್ ಕುರಿ, ಹನುಮಂತ್ ಭಜಂತ್ರಿ, ದೇವಪ್ಪ ಮುಂತಾದವರಿದ್ದರು. ●

...ಯುಪಿಎ ದರ್ಬಾರ್ ....

ಪುಟ 13 ರಿಂದ

...ರತದ ಆಳುವ ಮಂದಿ ಆರ್ಥಿಕ ಉದಾರೀಕರಣಕ್ಕೆ ಬದ್ಧರಾಗಿದ್ದಾರೆ ...ಮಬುದರ ಪ್ರತೀಕವಾಗಿತ್ತು. ಈಗ ಅದಕ್ಕೂ ಸಂಚಕಾರ ...ದಂತಾಗಿದೆ.

...ಭಾರತದ ಗುರುತು ಚೀಟಿ ಪ್ರಾಧಿಕಾರ ಮಸೂದೆಯನ್ನಂತೂ ...ಸದೀಯ ಸ್ಥಾಯೀ ಸಮಿತಿ ಸರ್ವಸಮ್ಮತಿಯಿಂದಲೇ ತಿರಸ್ಕರಿಸಿದೆ. ...ದು ಯಾವುದೇ ದಿಕ್ಕುದೆಸೆಯಿಲ್ಲದೆ ರಚಿಸಿದ ಮಸೂದೆ ಎಂದು ...ಟೀಕಿಸಿದೆ.

ಯುಪಿಎ–2 ಸಂಪುಟ ಈ ಎರಡು ಮಸೂದೆಗಳ ಬಗ್ಗೆ ...ಂದೇನು ಮಾಡುತ್ತದೆ ಎಂದು ಕಾದು ನೋಡಬೇಕಾಗಿದೆ.

★

ಕೈಗಾರಿಕಾ ಉತ್ಪಾದನೆಯಲ್ಲೂ ಇಳಿಕೆ
ರೂಪಾಯಿ ಬೆಲೆಯಲ್ಲಿಯೂ ಇಳಿಕೆ

...ಹಣದುಬ್ಬರ ಎರಡಂಕಿಯ ಸುತ್ತಮುತ್ತಲೇ ಗಿರಕಿ ...ಡೆಯುತ್ತಿದ್ದರೂ ನಮ್ಮ ಆರ್ಥಿಕ ಗಟ್ಟಿ ಮುಟ್ಟಾಗಿಯೇ ಇದೆ ...ದು ಹಣಕಾಸು ಮಂತ್ರಿಗಳು ಹೇಳುತ್ತಿದ್ದಂತೆಯೇ ಕೈಗಾರಿಕಾ ...ತ್ಪಾದನೆಯ ಹೆಚ್ಚಳದ ದರ ಇಳಿಮುಖವಾಗಿರುವುದಷ್ಟೇ ಅಲ್ಲ, ...ಕ್ಟೋಬರ್ ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆಯೇ ...ಮುಖವಾಗಿದೆ, ಕಳೆದ ಎರಡು ವರ್ಷಗಳಲ್ಲೇ ಅತೀ ಕಡಿಮೆ ಮಟ್ಟಕ್ಕೆ ಇಳಿದಿದೆ. ಅಕ್ಟೋಬರ್ 2010ರಲ್ಲಿ 11.3ಶೇ ಏರಿದ್ದ ಕೈಗಾರಿಕಾ ಉತ್ಪಾದನೆ, ಅಕ್ಟೋಬರ್ 2011ರಲ್ಲಿ 5.1 ಶೇ.ದಷ್ಟು ಇಳಿದಿದೆ. ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಅಧ್ಯಕ್ಷರಾಗಿರುವ ಡಾ.ಸಿ.ರಂಗರಾಜನ್, 'ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ದರ ಸ್ವಲ್ಪ ಇಳಿಮುಖವಾಗಬಹುದು ಎಂಬುದು ನಿರೀಕ್ಷಿತವೇ, ಆದರೆ ಬೆಳವಣಿಗೆಯೇ ನಕಾರಾತ್ಮಕವಾಗಬಹುದು ಎಂದು ಖಂಡಿತ ನಿರೀಕ್ಷಿಸಿರಲಿಲ್ಲ ಎಂದಿದ್ದಾರೆ. ನಾವು ಖಂಡಿತವಾಗಿಯೂ ನಮ್ಮೆಲ್ಲ ಕ್ರಮಗಳನ್ನು ಪರಿಶೀಲಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ.

ರೂಪಾಯಿ ಬೆಲೆಯೂ ಡಾಲರಿಗೆ ಎದುರಾಗಿ ಕಳೆದ ನಾಲ್ಕು ತಿಂಗಳಲ್ಲಿ 22ಶೇ.ದಷ್ಟು ಇಳಿದಿದೆ. ಜುಲೈ ಕೊನೆಯಲ್ಲಿ 43.95 ರೂಪಾಯಿಗೆ ಒಂದು ಡಾಲರ್ ಸಮನಾಗಿದ್ದರೆ, ಡಿಸೆಂಬರ್ 15ರ ಆರಂಭದಲ್ಲಿ ಅಷ್ಟಕ್ಕೇ ಇನ್ನೂ ಹತ್ತು ರೂಪಾಯಿಯೆಷ್ಟು ಹೆಚ್ಚು, ಅಂದರೆ ರೂ53.64 ಬೇಕಾಯಿತು. ಶೇರು ಮಾರುಕಟ್ಟೆಯ ಕುಸಿತವೂ ಮುಂದುವರೆಯುತ್ತಿದೆ. ದೇಶಿ–ವಿದೇಶಿ ಬಂಡವಾಳ ಹೊರಗೆ ಹರಿದು ಹೋಗುತ್ತಿರುವುದು ಇದಕ್ಕೆ ಒಂದು ಪ್ರಮುಖ ಕಾರಣ ಎನ್ನಲಾಗುತ್ತಿದೆ.

ಸ್ವತಃ ಹಣಕಾಸು ಮಂತ್ರಿಗಳೇ ಈಗ ಆರ್ಥಿಕವನ್ನು ದಡ ಮುಟ್ಟಿಸಲು ಇರುವ ಆಯ್ಕೆಗಳು ಬಹಳ ಸೀಮಿತ ಎಂದಿದ್ದಾರೆ. ಆದರೆ ಇದು ಕೂಡ ಅವರು ನವ–ಉದಾರವಾದಿ ಚೌಕಟ್ಟನ್ನು ಬಿಟ್ಟು ಯೋಚಿಸುವಂತೆ ಮಾಡಿಲ್ಲ. ಪ್ರತಿಪಕ್ಷಗಳು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಮುಂತಾದ 'ಸುಧಾರಣೆ'ಗಳಿಗೆ ಸಹಕಾರ ನೀಡಬೇಕು ಎಂಬ ರಾಗವನ್ನು ಮತ್ತೆ ಆಲಾಪಿಸಿದ್ದಾರೆ. ✠

ಕವನ

ಬರವೆಂಬ ಬೆಂಕಿ

ಈ ನಾಡಿನಲ್ಲಿ
ಬೇಡಿಯಿಲ್ಲದೆ ಲೂಟಿಯಾಗುತ್ತದೆ
ಬಿಲಿಯಗಟ್ಟಲೆ
ನೈಸರ್ಗಿಕ ಸಂಪತ್ತು
ಚಾಟಿಯಾಗುತ್ತದೆ
'ಬರ'ದ ವಿಪತ್ತು

ಬರ ಯಾವಾಗಲೂ ಹೀಗೇ
ಬರುವಾಗಲೇ ತೆರೆದುಕೊಂಡಿರುತ್ತದೆ ರಾಕ್ಷಸ
ಬಾಯಿ
ಬಡಬಗ್ಗರ ಜಗಿಜಗಿದು ಭಕ್ಷಿಸಲು
ಅವರು ಮಾಡದ ಅಪರಾಧಕೆ
ಬದುಕನು ಅಗಿದಗಿದು ಶಿಕ್ಷಿಸಲು

ಸದಾಕಾಲ
ಹಸಿರು ಉಸುರುತ್ತಿದ್ದ ಹೊಲಗಳು
ಕೆಸರು ಒಸರುತ್ತಿದ್ದ ನೆಲಗಳು
ಬಿರಿಬಿರಿದು ಬಾಯಿ ಕಿಸಗೊಂಡು
ಮುಗಿಲಿಗೆ ಮೂತಿ ಮಾಡಿ ಹಲುಬುತ್ತವೆ

ಗುಡಿಸಲೊಳಗಿನ ಗಡಿಗೆಗಳು
ತುತ್ತು ಕೂಳಿಲ್ಲದೆ ಬೋರಲು ಬೀಳುತ್ತವೆ
ಹಸಿವು ಹಾವಾಗಿ ಹರಿದಾಡುತ್ತದೆ
ಬುಸುಗುಟ್ಟುತ್ತ ಅಟ್ಟಹಾಸದಲಿ
ಬೆನ್ನನಪ್ಪಿದ ಒಡಲುಗಳ ಹೊಸಕಿಹಾಕುತಲಿ

ಹೊಳೆ–ಹಳ್ಳ–ಕೆರೆ–ಕಟ್ಟೆಗಳು
ಬ್ಯಾರೇಜ–ಅಣೆಕಟ್ಟುಗಳು
ಬಸಿದುಕೊಂಡು ಬರಿದಾಗುತ್ತವೆ
ಮೀನು–ಮೊಸಳೆ–ಮಂಡೂಕ–ಬಾತುಕೋಳಿ
ಹಸಿದುಕೊಂಡು ಎಲ್ಲವೂ ಇಲ್ಲವಾಗುತ್ತವೆ

ರೈತನ ಜೀವನಾಡಿ
ದನ–ಕರುಗಳ ಕಣ್ಣಿಗಳು ಕಳಚಿಕೊಳ್ಳುತ್ತವೆ
ಅನ್ನದಾತನ ಕಣ್ಣೀರು ಕಪಾಳಕ್ಕಿಳಿದಿಳಿದು
ಕಣ್ಣುಗಳು ಬಿಳಿಚಿಕೊಳ್ಳುತ್ತವೆ

ದುಡಿದು ತಿನ್ನುವ ಕಾರ್ಮಿಕರ ಕಣ್ಣೆದುರು
ನಿರುದ್ಯೋಗ ಹುಚ್ಚೆದ್ದು ಚೀರುತ್ತದೆ
ಕಸುವು ಕಳೆದುಕೊಂಡ ಸಾವಿರ ಸಾವಿರ ಕಾಲುಗಳು
ಕೂಲಿ ಅರಸಲು ಜಾರುತ್ತವೆ.
ಮಾಧ್ಯಮಗಳಲ್ಲಿ ಮೆರೆದಾಡುತ್ತವೆ
ದೊಡ್ಡ ದೊಡ್ಡ ಸುದ್ದಿ–'ಬರ ಬಂತು ಬರ'
ಅರಮನೆಯಲ್ಲಿ ಆಳರಸರು ಸೇರುತ್ತಾರೆ
ಜೋರು ಜೋರು ನಡೆಯುತ್ತದೆ
ಯೋಚನೆ–ಯೋಜನೆ
ಕೋಟಿ ಕೋಟಿಗಳ ವಂಚನೆ.

– ಪ್ರೊ॥ ಡಿ.ಬಿ. ಬಡಿಗೇರ, ಹರಪನಹಳ್ಳಿ

RNI No. KARKAN /2006/17926
Postal Reg. No. RNP/KA/BGS/2078/2010-12 Posted at MBC Bangalore

ಸ್ಫೂರ್ತಿ, ಉತ್ಸಾಹ ತುಂಬಿದ ಸಿಪಿಐ(ಎಂ) ದ.ಕ. ಜಿಲ್ಲಾಸಮ್ಮೇಳನ

ಕೆಂಪಾದವ್ರೋ ಎಲ್ಲಾ ಕೆಂಪಾದವ್ರೋ...

ವರದಿ : ವಾಸುದೇವ ಉಚ್ಚಿಲ

ಡಿಸೆಂಬರ್ 11, 12ರಂದು ಮಂಗಳೂರಿನ ಮಂಗಳಾದೇವಿಯ ಕುಲಾಲ ಭವನದಲ್ಲಿ ನಡೆದ ಸಿಪಿಎಂ ದ.ಕ. ಜಿಲ್ಲಾ ಸಮ್ಮೇಳನ ಹಾಗೂ ಡಿಸೆಂಬರ್ 13ರಂದು ನಡೆದ ರ್‍ಯಾಲಿ ಮತ್ತು ಮಂಗಳೂರು ನೆಹರೂ ಮೈದಾನದ ಬಹಿರಂಗ ಸಭೆಗಳು ಪಕ್ಷದ ಬೆಂಬಲಿಗರಲ್ಲಿ ಹೆಚ್ಚಿನ ಸ್ಫೂರ್ತಿ ಹಾಗೂ ಉತ್ಸಾಹ ಮೂಡಿಸುವಲ್ಲಿ ಯಶಸ್ವಿಯಾದವು.

ಒಂದೂವರೆ ತಿಂಗಳ ಹಿಂದೆಯೇ ಸಮ್ಮೇಳನ ಸ್ವಾಗತ ಸಮಿತಿ ರಚನೆಯಾಗಿದ್ದು, ಈ ಬಾರಿಯ ಸಮ್ಮೇಳನವನ್ನು



ಅಭೂತಪೂರ್ವವಾಗಿಸಲು ಸಕಲ ಸಿದ್ಧತೆ ನಡೆಸಿತ್ತು. ಸಮ್ಮೇಳನದ ಹೊಣೆ ಹೊತ್ತುಕೊಂಡಿದ್ದ ಪಕ್ಷದ ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿ ನಡೆದ ಬೀದಿ ಬದಿ ವ್ಯಾಪಾರಿಗಳ ಹೋರಾಟಗಳು, ಡಿವೈಎಫ್‌ಡಿ ನೇತೃತ್ವದಲ್ಲಿ ನಡೆದ ವಸತಿ ರಹಿತರ ಮತ್ತು ನಿವೇಶನ ರಹಿತರ ಹೋರಾಟಗಳು – ಮಂಗಳೂರಿನ ಜನಸಾಮಾನ್ಯರು ಸಿಪಿಎಂ ಪಕ್ಷದತ್ತ ನೋಡುವಂತೆ ಮಾಡಿತ್ತು. ಅದಕ್ಕೆ ತಕ್ಕಂತೆ ಗೋಡೆಗಳಲ್ಲಿ, ಪತ್ರಿಕೆಗಳಲ್ಲಿ ಸಮ್ಮೇಳನಕ್ಕೆ ಉತ್ತಮ ಪ್ರಚಾರ ನಡೆದಿತ್ತು. ಡಿಸೆಂಬರ್ 5ರಂದು ಮಂಗಳೂರು ನಗರದ ಮುಖ್ಯ ಬೀದಿಗಳಲ್ಲಿ 'ಸಮ್ಮೇಳನ ನಿಧಿಗಾಗಿ ಸಂಗ್ರಹ ಅಭಿಯಾನ' ನಡೆಸಲಾಯಿತು. ಡಿಸೆಂಬರ್ 9ರಂದು 'ಪ್ರಚಾರ ಬೈಕ್ ರ್‍ಯಾಲಿ' ನಡೆಸಲಾಯಿತು. ಪ್ರಚಾರದ ಶಿಖರವೆಂಬಂತೆ ಡಿಸೆಂಬರ್ 13ರ ಬಹಿರಂಗ ಸಭೆಯ ದಿನ ರ್‍ಯಾಲಿ ಸಾಗುವ ಮುಖ್ಯರಸ್ತೆ ಕೆಂಪು ಬಣ್ಣಗಳಿಂದ, ಬಾವುಟಗಳಿಂದ ಅಲಂಕೃತಗೊಂಡಿತ್ತು.

ಮಂಗಳಾದೇವಿಯ ಕುಲಾಲ ಭವನದ ಕಾಂ। ಎಂ.ಕೆ. ಪಂಥೆ ನಗರದಲ್ಲಿನ ಕಾ। ಹರಿಕಿಶನ್ ಸಿಂಗ್ ಸುರ್ಜಿತ್ ವೇದಿಕೆಯಲ್ಲಿ 11 ಮತ್ತು 12ರಂದು ಜಿಲ್ಲಾ ಸಮ್ಮೇಳನ ನಡೆಯಿತು. ಧ್ವಜಾರೋಹಣವನ್ನು ಜಿಲ್ಲೆಯ ಹಿರಿಯ ರೈತಕಾರ್ಮಿಕ ಮುಖಂಡರಾದ ಕಾ। ಅಬ್ರಹಾಂ ಕರ್ಕಡ ನೆರವೇರಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲೆಯ ಬೇರೆ ಬೇರೆ ಕಡೆಗಳ ಪಕ್ಷದ ಹಿತೈಷಿಗಳು ಭಾಗವಹಿಸಿದ್ದರು. ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ವಿ.ಜೆ.ಕೆ. ನಾಯರ್, ಜಿ.ಎನ್. ನಾಗರಾಜ್ ಅವರೂ ಅತಿಥಿಯಾಗಿ ಮಾತನಾಡಿದರು. ಜಿಲ್ಲೆಯ ಹಿರಿಯ ಪಕ್ಷದ ಮುಂದಾಳು ಕೆ.ಆರ್. ಶ್ರೀಯಾನ್ ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಅಗಲಿದ ಪಕ್ಷ ನಾಯಕರಿಗೂ ಗಣ್ಯರಿಗೂ ಶ್ರದ್ಧಾಂಜಲಿ ನಿರ್ಣಯ ಕೈಗೊಳ್ಳಲಾಯಿತು.

ಅಪರಾಹ್ನ ಪ್ರಾರಂಭದ ಪ್ರತಿನಿಧಿ ಅಧಿವೇಶನವು ಮರುದಿನಕ್ಕೂ ಮುಂದುವರಿದು ಸಾಯಂಕಾಲ ಕತ್ತಲೆಯವರೆಗೂ ಮುಂದುವರಿಯಿತು. ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ. ಮಾಧವ ಕಳೆದ 4 ವರ್ಷಗಳ ವರದಿ ಮಂಡಿಸಿದರು. ಭಾಗವಹಿಸಿದ 132 ಪ್ರತಿನಿಧಿಗಳ ಪೈಕಿ 37 ಮಂದಿ ಚರ್ಚೆಯಲ್ಲಿ ಭಾಗವಹಿಸಿದರು. ಜಿಲ್ಲೆಯ ಅನೇಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು. ರಾಜ್ಯ ಮತ್ತು ರಾಷ್ಟ್ರದ ಪ್ರಶ್ನೆಗಳ ಸಂಬಂಧಿಸಿದಂತೆಯೂ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಪಕ್ಷದ ರಾಜ್ಯ ಸಮಿತಿಯಿಂದ ವಿ.ಜೆ.ಕೆ. ನಾಯರ್ ಮತ್ತು ಜಿ.ಎನ್. ನಾಗರಾಜ್ ಉಪಸ್ಥಿತರಿದ್ದು, ಮಾರ್ಗದರ್ಶನ ನೀಡಿದರು. ಚರ್ಚೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಸಮಿತಿ ಮತ್ತು ಚರ್ಚಿಸಿ, ಸಮಿತಿ ಪರವಾಗಿ ಕಾರ್ಯದರ್ಶಿ ಬಿ. ಮಾಧವ ಉತ್ತರ ನೀಡಿದರು.

ಪ್ರತಿನಿಧಿ ಸಮ್ಮೇಳನವು 23 ಮಂದಿಯ ದ.ಕ. ಜಿಲ್ಲಾ ಸಮಿತಿಯನ್ನು ಮುಂದಿನ ಅವಧಿಗೆ ಆಯ್ಕೆ ಮಾಡಿತು. ಜಿಲ್ಲಾ ಸಮಿತಿಯು ಮತ್ತೆ ಸಭೆ ಸೇರಿ ಬಿ. ಮಾಧವ ಅವರನ್ನು ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಮುನರಾಯ್ಕೆ ಮಾಡಿರುತ್ತಾರೆ. ಜಿಲ್ಲಾ ಸಮಿತಿಯು 9 ಮಂದಿ ಇರುವ ಕಾರ್ಯದರ್ಶಿ ಮಂಡಳಿಯನ ಆಯ್ಕೆಮಾಡಿತು. ಬಿ. ಮಾಧವ, ಕೆ.ಆರ ಶ್ರೀಯಾನ್, ಜೆ. ಬಾಲಕೃಷ್ಣ ಶೆಟ್ಟಿ, ವಸಂ ಆಚಾರಿ, ಯು.ಬಿ. ಲೋಕಯ್ಯ, ಕೆ. ಯಾದ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಕೃಷ್ಣ ಸಾಲ್ಯಾನ್, ಬಿ.ಎಂ. ಭಟ್ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುತ್ತಾರೆ. ಪ್ರತಿನಿ ಸಮ್ಮೇಳನವು ಜನವರಿಯಲ್ಲಿ ನಡೆಯಲಿರು ಪಕ್ಷದ ರಾಜ್ಯ ಸಮ್ಮೇಳನಕ್ಕೆ 49 ಮಂದಿಯನ ಪ್ರತಿನಿಧಿಗಳಾಗಿ ಆಯ್ಕೆ ಮಾಡಿರುತ್ತದೆ.

ಜಿ.ಎನ್. ನಾಗರಾಜ್ ಅವ ಸಮಾರೋಪ ಭಾಷಣ ಧ್ವಜಾರೋಹಣದೊಂದಿಗೆ ಜಿಲ್ಲಾ ಸಮ್ಮೇಳ ಕೊನೆಗೊಂಡಿತು.

ಕೆಂಪಾದುವೋ ಎಲ್ಲಾ ಕೆಂಪಾದುವೋ

ಡಿಸೆಂಬರ್ 13ರ ಸಾಯಂಕಾ ಮಂಗಳೂರಿನ ನೆಹರೂ ಮೈದಾನದ ಕ ಜ್ಯೋತಿಬಸು ವೇದಿಕೆಯಲ್ಲಿ ಪಕ್ಷದ ದ.ಕ. ಜಿಲ ಸಮ್ಮೇಳನದ ಬಹಿರಂಗ ಸಭೆ. ಆ ದಿನ ಬೆಳ ಮೊದಲೇ ಜ್ಯೋತಿವೃತ್ತದಿಂದ ನೆಹರು ಮೈದಾನದವರೆಗಿನ ರಸ್ತೆ ಕೆಂಪ ಬಾವುಟಗಳಿಂದ ಅಲಂಕೃತವಾಗಿದ್ದುವು. ಸ 4 ಗಂಟೆಯಾಗುವ ವೇಳೆಗೆ ಮಂಗಳೂ







ನಗರದವರಲ್ಲದೆ ಉಳ್ಳಾ ಗುರುಪುರ, ಮೂಡಬಿ ಬಂಟ್ವಾಳ, ಬೆಳ್ತಂಗಡಿ, ಪುತ್ತೂ ಸುಳ್ಯಗಳಿಂದ ಜನರು ಜ್ಯೋತಿವೃ ಬಳಿ ತುಂಬಿ ತುಳುಕುತ್ತಿದ್ದ ಮುಂದಾಗಿ ಮಂಗಳೂರಿನ ಕೆಂ ಸಮವಸ್ತ್ರದಳ, ಬಳಿಕ ಮಂದಿಯ ಕೆಂಪು ಚೂಡಿದಾ ಮಹಿಳಾದಳ, ಬಳಿಕ ಉಳ್ಳಾ ಸಮವಸ್ತ್ರದಳ, ಅದರ ಹಿಂಬದಿಯ ಸಾವಿರಕ್ಕೂ ಸಮೀಪ ತಾಲೂಕುಗಳಿಂದ ಬಂದ ಕೆ ಸೀರೆ ಸಮವಸ್ತ್ರದ ಮಹಿಳೆ ಸಾಲು, ಅವರನ್ನು ಅನುಸ ರಾಜ್ಯ ಹಾಗೂ ಜಿಲ್ಲಾ ನಾಯಕ ಅವರ ಹಿಂಬದಿಯ ಮಂಗಳೂರು ನಗ ಬೆಂಬಲಿಗರು, ಅವರನ್ನನುಸ ಎಲ್ಲ ವಲಯಗಳ ಪ್ರತ್ಯಪ್ರ ಗುಂಪುಗಳು – ಇವರೆಲ್ಲ ಹಿಡಿದಿದ್ದ ಕೆಂಪು ಬಾವುಟಗಳ ಇದರಿಂದ ಇಡೀ ಮೆರವಣಿಗೆ ಕೆಂಪು ಕೆಂಪಾದ 'ಕೆಂಬಾವುಟಗಳ ನರ್ತನ' ಎ ಮರುದಿನ ಒಂದು ಪ ಬರೆಯಿತು. ಬ್ಯಾಂಡು, ಓಲಗ

ಪುಟ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH